ಸೋಮವಾರ, ಮಾರ್ಚ್ 23, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಬಂಜಾರ ನೃತ್ಯ...
ದಾವಣಗೆರೆಯ ಬ್ರಹ್ಮಕುಮಾರಿ ಶಿವಧ್ಯಾನ ಮಂದಿರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಯುವತಿಯೊಬ್ಬರು ಬಂಜಾರ ನೃತ್ಯ ಪ್ರದರ್ಶಿಸಿದರು



ಧೋನಿ ಸಜ್ಜು
ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಚೆನ್ನೈ ಸೂಪರ್ ಕಿಂಗ್ಸ್‌ನ 'ರೋರ್ 2026' ಕಾರ್ಯಕ್ರಮದಲ್ಲಿ ತಂಡದ ಆಟಗಾರ ಮಹೇಂದ್ರಸಿಂಗ್ ಧೋನಿ ಕಾಣಿಸಿಕೊಂಡಿದ್ದು ಹೀಗೆ...

‘ಕೇರಳದಲ್ಲಿ ಸಿಪಿಎಂ–ಬಿಜೆಪಿ ಒಳಒಪ್ಪಂದ’

ಪಿಣರಾಯಿ ವಿಜಯನ್ ಆರೋಪಕ್ಕೆ ಕಾಂಗ್ರೆಸ್ ತಿರುಗೇಟು

• ಕೇರಳ ಬಿಜೆಪಿ ಘಟಕದಲ್ಲಿ ಮುಗಿಯದ ಸೀಟು ಹಂಚಿಕೆ ಗೊಂದಲ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ–ಸಿಪಿಎಂ ಒಪ್ಪಂದ ಮಾಡಿಕೊಂಡಿವೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಮತ್ತೊಂದೆಡೆ, ಮಿತ್ರಪಕ್ಷಗಳಿಗೆ ಸೀಟು ಹಂಚಿಕೆ ಮಾಡುವ ಕುರಿತಂತೆ, ಬಿಜೆಪಿಯಲ್ಲಿ ಗೊಂದಲ ಮುಂದುವರಿದಿದೆ.

‘10 ವಿಧಾನಸಭಾ ಕ್ಷೇತ್ರಗಳಲ್ಲಿ ಸಿಪಿಎಂ–ಬಿಜೆಪಿ ಒಳಒಪ್ಪಂದ ಮಾಡಿಕೊಂಡಿವೆ’ ಎಂದು ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಆರೋಪಿಸಿದ್ದಾರೆ.

ಕಾಂಗ್ರೆಸ್‌ನ ಮತಗಳನ್ನು ಒಡೆಯುವ ದೃಷ್ಟಿಯಿಂದಲೇ, ಸಿಪಿಎಂ ಹಲವು ಕ್ಷೇತ್ರಗಳಲ್ಲಿ ದುರ್ಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಪಾಲಕ್ಕಾಡ್‌ನಿಂದ ಹೋಟೆಲ್ ಉದ್ಯಮಿ ಎನ್.ಎಂ.ಆರ್ ರಜಾಕ್ ಅವರನ್ನು ಸಿಪಿಎಂ ಪಕ್ಷವು ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಸಿ, ಅಲ್ಪಸಂಖ್ಯಾತರ ಮತಗಳನ್ನು ಒಡೆಯಲು ಮುಂದಾಗಿದೆ. ಆ ಮೂಲಕ ಬಿಜೆಪಿಯಿಂದ ಕಣಕ್ಕಿಳಿದಿರುವ ಶೋಭಾ ಸುರೇಂದ್ರನ್ ಅವರ ಗೆಲುವಿಗೆ ದಾರಿ ಮಾಡಿಕೊಟ್ಟದೆ ಎಂದು ಕಾಂಗ್ರೆಸ್ ದೂರಿದೆ.

ಶಬರಿಮಲೆ ದೇವಾಲಯಕ್ಕೆ ಮಹಿಳೆಯರ ಪ್ರವೇಶ ಹಾಗೂ ಚಿನ್ನದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಪಿಎಂ ಮೇಲೆ ಪರಿಣಾಮ ಬೀರಲಿದೆಯೇ ಎಂಬುದರ ಕುರಿತು ಪ್ರತಿಕ್ರಿಯಿಸಲು ಬಿಜೆಪಿಯ ಮಿತ್ರಪಕ್ಷವಾದ ಟ್ವೆಂಟಿ–20 (ಟಿಟಿಪಿ) ಪಕ್ಷದ ಥಾಮಸ್ ಕೆ.ಸ್ಯಾಮುಯೆಲ್ ನಿರಾಕರಿಸಿದ್ದರು. ಈ ಬೆಳವಣಿಗೆಯನ್ನು ಎರಡು ಪಕ್ಷಗಳು ಒಳ ಒಪ್ಪಂದ ಮಾಡಿಕೊಂಡಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಕಾಂಗ್ರೆಸ್ ದೂರಿದೆ.



ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಕಾಂಗ್ರೆಸ್ ಮುಖಂಡ ವಿ.ಡಿ.ಸತೀಶನ್ ಅವರು ಭಾನುವಾರ ಪರವೂರ್ ವಿಧಾನಸಭಾ ಕ್ಷೇತ್ರದಲ್ಲಿ ಪ್ರಚಾರ ಕಾರ್ಯದಲ್ಲಿ ಭಾಗವಹಿಸಿದ್ದ ವೇಳೆ ಮಹಿಳೆಯರ ಜೊತೆ ಚರ್ಚೆ ನಡೆಸಿದರು –ಪಿಟಿಐ ಚಿತ್ರ

ಕಾಂಗ್ರೆಸ್ ಆರೋಪವನ್ನು ಬಿಜೆಪಿ–ಸಿಪಿಎಂ ನಿರಾಕರಿಸಿದೆ.

ರಾಹುಲ್‌ಗೆ ಪಿಣರಾಯಿ ತಿರುಗೇಟು: ‘ಕೇಂದ್ರೀಯ ತನಿಖಾ ಸಂಸ್ಥೆಗಳು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಹೊರತುಪಡಿಸಿ ವಿರೋಧ ಪಕ್ಷಗಳ ನಾಯಕರನ್ನು ಬಂಧಿಸುತ್ತಿವೆ ಅಥವಾ ಕರೆದು ವಿಚಾರಣೆ ನಡೆಸುತ್ತಿವೆ’ ಎಂಬ ರಾಹುಲ್ ಗಾಂಧಿ ಹೇಳಿಕೆ ನೀಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಪಿಣರಾಯಿ ವಿಜಯನ್, ‘ಕಾಂಗ್ರೆಸ್ ಬಿಜೆಪಿಯ ಬಿ–ಟೀಮ್’ ಎಂದು ಹೇಳಿದ್ದರು.

ಟಿಕೆಟ್ ಹಂಚಿಕೆ ಗೊಂದಲ: ಇತ್ತೀಚೆಗಷ್ಟೇ, ಎನ್‌ಡಿಎ ಜೊತೆಗೆ ಗುರುತಿಸಿ ಕೊಂಡಿರುವ ಟಿಟಿಪಿಗೆ ರಾಜ್ಯದ ಪ್ರಮುಖ ಕ್ಷೇತ್ರಗಳನ್ನು ಬಿಜೆಪಿ ಬಿಟ್ಟುಕೊಟ್ಟಿದೆ. ಇತ್ತೀಚೆಗೆ ನಡೆದ ತ್ರಿಪುನಿಥುರಾ ಮುನ್ಸಿಪಾಲಿಟಿ ಚುನಾವಣೆಯಲ್ಲಿ ಬಿಜೆಪಿ ಮೊದಲ ಬಾರಿಗೆ ಗೆಲುವು ಪಡೆದಿತ್ತು. ಇಲ್ಲಿಂದ ಬಿಜೆಪಿ ಅಭ್ಯರ್ಥಿ ಕಣಕ್ಕಿಳಿಯಲಿದೆ ಎಂದು ಹೇಳಲಾಗಿತ್ತು. ನಂತರ ಟಿಟಿಪಿಗೆ ಕ್ಷೇತ್ರ ಬಿಟ್ಟುಕೊಡಲಾಗಿತ್ತು. ಟಿಟಿಪಿ ಅಧ್ಯಕ್ಷ ಸಾಬು ಜೇಕಬ್ ಅವರೇ ಇಲ್ಲಿಂದ ಕಣಕ್ಕಿಳಿಯಲಿದ್ದಾರೆ ಎಂದು ಹೇಳಲಾಗಿತ್ತು. ನಟಿ ಅಂಜಲಿ ನಾಯರ್ ಅವರನ್ನು ಟಿಟಿಪಿ ಕಣಕ್ಕಿಳಿಸಿದೆ. ಅಲ್ಲದೇ, ಕೊಡನಲ್ಲೂರ್ ಕ್ಷೇತ್ರವನ್ನು ಟಿಟಿಪಿಗೆ ನೀಡಲಾಗಿದೆ.

ತ್ರಿಶ್ಶೂರ್ ಕ್ಷೇತ್ರದಲ್ಲಿ ಬಿ.ಗೋಪಾಲ ಕೃಷ್ಣನ್ ಅವರಿಗೆ ಟಿಕೆಟ್ ನೀಡುವ ಬದಲಾಗಿ ಹೊಸತಾಗಿ ಪಕ್ಷ ಸೇರ್ಪಡೆಯಾಗಿದ್ದ ಪದ್ಮಜಾ ವೇಣುಗೋಪಾಲ್ ಅವರಿಗೆ ಟಿಕೆಟ್ ನೀಡಿದೆ. ಪದ್ಮಜಾ ಅವರು ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್‌ನ ಹಿರಿಯ ನಾಯಕರಾಗಿದ್ದ ಕೆ.ಕರುಣಾಕರನ್ ಅವರ ಮಗಳು. ಅದೇ ರೀತಿ, ಬಿಜೆಪಿಯ ಹಿರಿಯ ನಾಯಕ, ಪಕ್ಷದ ಪ್ರಧಾನ ಕಾರ್ಯದರ್ಶಿ ಎಂ.ಟಿ. ರಮೇಶ್ ಅವರನ್ನು ಈ ಸಲ ಕಣಕ್ಕಿಳಿಸಿಲ್ಲ.

ಶಬರಿಮಲೆ–ಯಾರಿಗೆ ಲಾಭ?

ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ 10ರಿಂದ 50 ವರ್ಷದ ಒಳಗಿನ ಮಹಿಳೆಯರಿಗೆ ಪ್ರವೇಶ ಕಲ್ಪಿಸುವ ವಿಚಾರ ಹಾಗೂ ಚಿನ್ನ ಕಳ್ಳತನ ವಿಚಾರವು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಥವಾ ಎನ್‌ಡಿಎ ನೇತೃತ್ವದ ಬಿಜೆಪಿ ಲಾಭ ತಂದುಕೊಡಲಿದೆಯೇ ಎಂಬುದು ಕುತೂಹಲ ಮೂಡಿಸಿದೆ.

‘ಈ ವಿಷಯವನ್ನು ಧಾರ್ಮಿಕ ವಿಚಾರಗಳ ಪರಿಣತರೇ ನಿರ್ಧರಿಸಬೇಕು ಎಂದು 2007ರಲ್ಲಿಯೇ ನಾವು ಪ್ರಮಾಣಪತ್ರವನ್ನು ಸಲ್ಲಿಸಿದ್ದೆವು, ಈ ವಿಚಾರಕ್ಕೆ ಈಗಲೂ ನಾವು ಬದ್ಧರಾಗಿದ್ದೇವೆ’ ಎಂದು ಕೇರಳದ ದೇವಸ್ವಂ ಸಚಿವ ವಿ.ಎನ್. ವಾಸವನ್ ತಿಳಿಸಿದ್ದರು. ಆ ಮೂಲಕ ತನ್ನ ಹಿಂದಿನ ನಿರ್ಧಾರದಿಂದ ಸಿಪಿಐ (ಎಂ) ಹಿಂದೆ ಸರಿದಿತ್ತು.


ಚಿನ್ನ ಕಳ್ಳತನದ ಪ್ರಕರಣದಲ್ಲಿ ಸಿಪಿಎಂನ ಮಾಜಿ ಶಾಸಕರು ಸೇರಿದಂತೆ ಹಲವು ನಾಯಕರನ್ನು ಬಂಧಿಸಲಾಗಿತ್ತು. ಇದರಿಂದ ಪಕ್ಷವೂ ತೀವ್ರ ಮುಜುಗರಕ್ಕೆ ಒಳಗಾಗಿತ್ತು.

ಎರಡು ವಿಚಾರಗಳನ್ನು ಮುಂದಿಟ್ಟುಕೊಂಡು ಯುಡಿಎಫ್ ಹಾಗೂ ಬಿಜೆಪಿ ರಾಜ್ಯವ್ಯಾಪಿ ಬೃಹತ್ ಹೋರಾಟಗಳನ್ನು ನಡೆಸಿತ್ತು. ಶಬರಿಮಲೆ ವಿಚಾರಕ್ಕಿಂತಲೂ ಹೆಚ್ಚಾಗಿ ರಾಜ್ಯದ ಅಭಿವೃದ್ಧಿ ವಿಚಾರಗಳನ್ನು ಮುಂದಿಟ್ಟುಕೊಂಡೇ ಚುನಾವಣೆ ಎದುರಿಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ತಿಳಿಸಿದ್ದರು.

ಶಬರಿಮಲೆ ದೇವಾಲಯ ಇರುವ ಪತ್ತನಂತಿಟ್ಟ ಜಿಲ್ಲೆಯ ಅರನ್‌ಮುಲಾ ಕ್ಷೇತ್ರದಿಂದ ಕಣಕ್ಕಿಳಿದಿರುವ ಬಿಜೆಪಿ ಹಿರಿಯ ನಾಯಕ ಕುಮ್ಮನಂ ರಾಜಶೇಖರ್ ಮಾತ್ರ ಈ ವಿಚಾರ ಪ್ರಮುಖವಾಗಿರಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

‘ಸಿಪಿಎಂ–ಬಿಜೆಪಿ ಮೈತ್ರಿ ಕೇರಳದಲ್ಲಿ ಯಶಸ್ವಿಯಾಗಲ್ಲ’

ಕೊಚ್ಚಿ (ಪಿಟಿಐ): ಕೇರಳ ವಿಧಾನಸಭಾ ಚುನಾವಣೆಗಾಗಿ ಸಿಪಿಎಂ ಮತ್ತು ಬಿಜೆಪಿ ಮೈತ್ರಿಯಾಗಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಇಂಥ ಪ್ರಯತ್ನಗಳು ಈ ಬಾರಿ ಕೇರಳದಲ್ಲಿ ಯಶಸ್ವಿ ಆಗುವುದಿಲ್ಲ ಎಂದು ಕಾಂಗ್ರೆಸ್ ನಾಯಕ ಕೆ.ಸಿ ವೇಣುಗೋಪಾಲ್ ಅವರು ಭಾನುವಾರ ಹೇಳಿದರು.



ಕೆ.ಸಿ.ವೇಣು ಗೋಪಾಲ್

‘ಜನರ ಭಾವನೆಗಳು ತಮ್ಮ ವಿರುದ್ಧ ವಾಗಿದೆ ಎಂಬುವುದು ಸಿಪಿಎಂ ಮತ್ತು ಎಲ್‌ಡಿಎಫ್‌ಗೆ ಗೊತ್ತಿದೆ. ಅವರು ಕೊನೆಯ ತಂತ್ರವನ್ನು ಬಳಸುತ್ತಿದ್ದಾರೆ. ಸಿಪಿಎಂ ಮತ್ತು ಬಿಜೆಪಿ ಸ್ನೇಹ ಕೇರಳಕ್ಕೆ ಹೊಸದೇನಲ್ಲ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪಿ.ಎಂ ಶ್ರೀ ಮತ್ತು ಕೇಂದ್ರ ಸರ್ಕಾರದ ಬಗ್ಗೆ ಎಡಪಕ್ಷಗಳ ನಿಲುವುಗಳು ಈ ಸಂಬಂಧದ ಸಂಕೇತವಾಗಿದೆ. ಮುಖ್ಯ ಮಂತ್ರಿ ವಿರುದ್ಧದ ಲಾವ್ಲಿನ್ ಪ್ರಕರಣವು ಮುಂದೂಲ್ಪಡುತ್ತಿದೆ. ಕೇರಳದಲ್ಲಿ ಕೇಂದ್ರ ತನಿಖಾ ಸಂಸ್ಥೆಗಳ ಕಾರ್ಯವೈಖರಿಯನ್ನು ನೋಡಿದ್ದೇವೆ’ ಎಂದು ಟೀಕಿಸಿದರು.

‘ಇದೇ ರೀತಿಯ ಸಂಬಂಧ ಸಿಪಿಎಂ ಮತ್ತು ಬಿಜೆಪಿ ಅಭ್ಯರ್ಥಿಗಳ ಪಟ್ಟಿಯಲ್ಲೂ ಕಾಣಿಸುತ್ತದೆ. ಚುನಾವಣೆಯಲ್ಲಿ ಪರಸ್ಪರ ಸಹಾಯ ಮಾಡಿಕೊಳ್ಳುವ ಒಪ್ಪಂದವನ್ನು ಎರಡು ಪಕ್ಷಗಳು ಮಾಡಿವೆ’ ಎಂದು ಆರೋಪಿಸಿದರು.

‘ನನಗೆ ವಿಶ್ವಾಸವಿದೆ ಅವರ ಪಕ್ಷದ ಕಾರ್ಯಕರ್ತರು ಆ ಸಂಬಂಧವನ್ನು ನಿರಾಕರಿಸುತ್ತಾರೆ. ಅವರು ಈ ಹಿಂದೆಯೂ ಇದಕ್ಕೆ ಪ್ರಯತ್ನಿಸಿದ್ದರು, ಆದರೆ ಅದು ಬಹಿರಂಗಗೊಂಡಿತ್ತು. ಅದೇ ಪರಿಸ್ಥಿತಿ ಮತ್ತೆ ಬರುತ್ತದೆ’ ಎಂದರು.

ಸುಧಾಕರನ್ ‘ಚೆಟ್ಟತರಂ’: ಪಿಣರಾಯಿ ವಿವಾದ

ತಿರುವನಂತಪುರ: ವಿರೋಧಿಗಳ ವಿರುದ್ಧ ಕಟುಶಬ್ದ ಬಳಸುವ ಮೂಲಕ ಸದಾ ಸುದ್ದಿಯಲ್ಲಿರುವ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಇದೀಗ ಪಕ್ಷದ ಬಂಡಾಯ ನಾಯಕನ ವಿರುದ್ಧ ಕಿಡಿಕಾರಿದ್ದಾರೆ.

ಸಿಪಿಎಂ ಭಿನ್ನಮತೀಯ ಹಿರಿಯ ನಾಯಕ ಜಿ.ಸುಧಾಕರನ್ ಅವರು ಈಗಲೂ ಸಂಸದೀಯ ರಾಜಕಾರಣದ ಕುರಿತು ತೀವ್ರ ವಾಂಛೆ ಹೊಂದಿದ್ದು, ಅವರ ವರ್ತನೆ ಸಣ್ಣತನದಿಂದ (ಚೆಟ್ಟತರಂ) ಕೂಡಿದೆ ಎಂದು ಹೇಳಿಕೆ ನೀಡಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ಸುಧಾಕರನ್, ‘ಪಿಣರಾಯಿ ಅವರಿಗೆ ಮಲಯಾಳದ ಬಹಳಷ್ಟು ಪದಗಳ ಅರ್ಥಗಳೇ ತಿಳಿದಿಲ್ಲ. ನನಗೆ ರಾಜಕೀಯದ ಆಸಕ್ತಿ ಇದೆ ಎಂದು ಹೇಳುವ ಪಿಣರಾಯಿ ಅವರು 9ನೇ ಸಲ ಸ್ಪರ್ಧೆಗಿಳಿದಿದ್ದಾರೆ’ ಎಂದು ಕಿಡಿಕಾರಿದ್ದಾರೆ.


ಸುದ್ದಿ 2 ನಿಮಿಷ

ಸಿಪಿಎಂಗೆ 5 ಸ್ಥಾನ ನೀಡಿದ ಡಿಎಂಕೆ

ಚೆನ್ನೈ (ಪಿಟಿಐ): ಮುಂಬರುವ ತಮಿಳುನಾಡು ವಿಧಾನಸಭಾ ಚುನಾವಣೆಗೆ ಆಡಳಿತಾರೂಢ ಡಿಎಂಕೆ ತನ್ನ ಮಿತ್ರ ಪಕ್ಷ ಸಿಪಿಎಂಗೆ ಐದು ಸ್ಥಾನಗಳನ್ನು ನೀಡಿದೆ. ಕಳೆದ 20 ದಿನಗಳಿಂದ ಡಿಎಂಕೆ ಮತ್ತು ಸಿಪಿಎಂ ನಡುವೆ ಸೀಟು ಹಂಚಿಕೆಯ ಮಾತುಕತೆಗಳು ನಡೆಯುತ್ತಿದ್ದವು.

‘ಇದೇ ಮೊದಲ ಬಾರಿಗೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸಭೆಯಲ್ಲಿ ಭಾಗವಹಿಸಿ, 5 ಸ್ಥಾನ ಪಡೆಯುವಂತೆ ಮನವಿ ಮಾಡಿದ್ದಾರೆ’ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಪಿ.ಷಣ್ಮುಗಂ ತಿಳಿಸಿದ್ದಾರೆ.

‘2021ರ ವಿಧಾನಸಭಾ ಚುನಾವಣೆ ಯಲ್ಲಿ ಎಡ ಪಕ್ಷಗಳಾದ ಸಿಪಿಐ ಮತ್ತು ಸಿಪಿಎಂ ತಲಾ ಆರು ಸ್ಥಾನಗಳಲ್ಲಿ ಸ್ಪರ್ಧಿಸಿದ್ದವು’ ಎಂದು ಹೇಳಿದ್ದಾರೆ.



‘ಹೊಸ ಮಿತ್ರಪಕ್ಷಗಳ ಸೇರ್ಪಡೆ ಯಿಂದ ಪ್ರಸ್ತುತ ಮೈತ್ರಿಕೂಟವು ಬಲಗೊಂಡಿದೆ. ಹೀಗಾಗಿ, 6ಕ್ಕಿಂತ ಹೆಚ್ಚಿನ ಸ್ಥಾನಗಳು ಬೇಕೆಂದು ಒತ್ತಾಯಿಸದಿರಲು ನಿರ್ಧರಿಸಿದ್ದೇವೆ. 2021ರ ವಿಧಾನಸಭಾ ಚುನಾವಣೆಯಲ್ಲಿ ನಾವು ಸ್ಪರ್ಧಿಸಿದ್ದ ಕನಿಷ್ಠ 6 ಸ್ಥಾನಗಳನ್ನು ಈ ಬಾರಿಯೂ ಉಳಿಸಿಕೊಳ್ಳಲು ಪಕ್ಷದ ಕಾರ್ಯಕಾರಿ ಸಮಿತಿ ಸೂಚಿಸಿದೆ’ ಎಂದು ಷಣ್ಮುಗಂ ತಿಳಿಸಿದ್ದಾರೆ.

ಮೀನು ಹಿಡಿದು ಪ್ರಚಾರ ನಡೆಸಿದ ಬಿಜೆಪಿ ಅಭ್ಯರ್ಥಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಬಿಧನ್‌ನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಶರದ್ವತ್ ಮುಖ್ಯೋಪಾಧ್ಯಾಯ ಅವರು ಮೀನು ಹಿಡಿದು ಭಾನುವಾರ ಚುನಾವಣಾ ಪ್ರಚಾರ ಮಾಡಿದರು.

‘ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಮಾಂಸಾಹಾರವನ್ನು ನಿಷೇಧಿಸಲಿದೆ’ ಎಂಬ ಟಿಎಂಸಿ ಆರೋಪಕ್ಕೆ ಈ ಮೂಲಕ ತಿರುಗೇಟು ನೀಡಿದರು. ಶರದ್ವತ್ ಅವರ ವಿನೂತನ ಪ್ರಚಾರವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ದೊಡ್ಡ ‘ಕಾಟ್ಲಾ’ ಮೀನು ಹಿಡಿದು ಪ್ರಚಾರಕ್ಕೆ ಬಂದಿದ್ದ ಅವರು, ಮತದಾರರೊಂದಿಗೆ ಸಂವಾದ ನಡೆಸಿ ‘ಟಿಎಂಸಿ ಆರೋಪ ಸುಳ್ಳು ಕಾರ್ಯಸೂಚಿಯನ್ನು ಹೊಂದಿದೆ’ ಎಂದು ಹೇಳಿದರು.

‘ನಮ್ಮ ವಿರುದ್ಧ ಸುಳ್ಳು ಪ್ರಚಾರ ಮಾಡಲಾಗುತ್ತಿದೆ. ನಾವು ನಮ್ಮ ಇಚ್ಛೆಯಂತೆ ಮೀನು, ಮಾಂಸವನ್ನು ತಿನ್ನುತ್ತೇವೆ’ ಎಂದು ಹೇಳಿದರು.

ಬಿಜೆಪಿಯು ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಪಶ್ಚಿಮ ಬಂಗಾಳದ ಜನರ ಆಹಾರ ಸಂಸ್ಕೃತಿಯ ಮೇಲೆ ಹಸ್ತಕ್ಷೇಪ ಮಾಡುವ ಉದ್ದೇಶವನ್ನು ಹೊಂದಿದೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೇರಿದಂತೆ ಟಿಎಂಸಿಯ ಹಲವು ನಾಯಕರು ಆರೋಪಿಸಿದ್ದರು.

ದಾವಣಗೆರೆ ದಕ್ಷಿಣ: ಕಪ್ಪು ಬಾವುಟ ಹಿಡಿದು ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಪ್ರತಿಭಟನೆ

‘ಕೈ’ತಪ್ಪಿದ ಟಿಕೆಟ್; ಮುಸ್ಲಿಮರ ಆಕ್ರೋಶ

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ ಬೆನ್ನಲ್ಲೇ ಮುಸ್ಲಿಂ ಸಮುದಾಯದ ಅಸಮಾಧಾನ ಭುಗಿಲೆದ್ದಿದೆ. ಅಲ್ಪಸಂಖ್ಯಾತ ಘಟಕದ ಯುವ ಮುಖಂಡರು ಕಪ್ಪು ಬಾವುಟ ಹಿಡಿದು ಪಕ್ಷದ ಹೈಕಮಾಂಡ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿನ ಅಖ್ತರ್ ರಝಾ ವೃತ್ತದಲ್ಲಿ ಜಮಾಯಿಸಿದ ಮುಸ್ಲಿಂ ಯುವಕರು ವಾಹನ ಸಂಚಾರ ತಡೆದು ಪ್ರತಿಭಟಿಸಿದರು ‘ಜಸ್ಟೀಸ್ ಫಾರ್ ಮುಸ್ಲಿಂ’ ಭಿತ್ತಿಪತ್ರಗಳ ಹಿಡಿದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಘೋಷಣೆ ಕೂಗಿದರು.

‘ಮುಸ್ಲಿಂ ಸಮುದಾಯವು ಶಾಮನೂರು ಶಿವಶಂಕರಪ್ಪ ಅವರನ್ನು ನಿರಂತರವಾಗಿ ಗೆಲ್ಲಿಸಿಕೊಂಡು ಬಂದಿದೆ. ಈ ಬಾರಿ ಟಿಕೆಟ್ ಕೊಡುವ ಭರವಸೆ ನೀಡಿದ್ದ ಕಾಂಗ್ರೆಸ್, ಅಲ್ಪಸಂಖ್ಯಾತರಿಗೆ ದ್ರೋಹ ಬಗೆದಿದೆ. ಬೇರೆ ಯಾವ ಪಕ್ಷದ ಅಭ್ಯರ್ಥಿಯನ್ನಾದರೂ ಬೆಂಬಲಿಸುತ್ತೇವೆ, ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕುವುದಿಲ್ಲ’ ಎಂದು ಕಾಂಗ್ರೆಸ್ ಮುಖಂಡ ಮನ್ಸೂರ್ ಅಲಿ ಹೇಳಿದರು.

‘₹500, ₹1,000 ನೀಡಿದರೆ ಮುಸ್ಲಿಮರು ಮತ ಹಾಕುತ್ತಾರೆ ಎಂದೆಲ್ಲಾ ಕೆಲವರು ಮಾತನಾಡಿದ್ದಾರೆ. ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಏಕವಚನದಲ್ಲಿ ಟೀಕಿಸಿದ್ದಾರೆ. ಸ್ವಾಭಿಮಾನ ಇರುವ ಯಾವ ಮುಸ್ಲಿಮರೂ ಕಾಂಗ್ರೆಸ್‌ಗೆ ಮತ ನೀಡಬಾರದು’ ಎಂದರು.

ಸಯ್ಯದ್ ಆರೀಫ್, ಸಯ್ಯದ್ ರಿಯಾಜ್, ವಾಸಿಂ ಮುಖಂಡರು ಭಾಗವಹಿಸಿದ್ದರು. ಪ್ರತಿಭಟನೆಯ ಕಾರಣ ಅರ್ಧ ಗಂಟೆಗೂ ಹೆಚ್ಚು ಹೊತ್ತು ವಾಹನಗಳ ಸಂಚಾರಕ್ಕೆ ಅಡಚಣೆಯಾಯಿತು.



ದಾವಣಗೆರೆಯ ಅಖ್ತರ್ ರಝಾ ವೃತ್ತದಲ್ಲಿ ಮುಸ್ಲಿಂ ಸಮುದಾಯದವರು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸಾದಿಕ್ ಪೈಲ್ವಾನ್ ಬಂಡಾಯ

ಕಾಂಗ್ರೆಸ್ ಪಕ್ಷದ ಟಿಕೆಟ್ ಕೈತಪ್ಪಿದ ಹಿಂದೆಯೇ, ಮುಖಂಡ ಸಾದಿಕ್ ಪೈಲ್ವಾನ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ.

ಭಾನುವಾರ ಬೆಂಬಲಿಗರ ಸಭೆ ನಡೆಸಿ ಈ ತೀರ್ಮಾನ ಪ್ರಕಟಿಸಿದ್ದಾರೆ. ಯಾವುದೇ ಒತ್ತಡಗಳಿಗೆ ಮಣಿಯದೇ ಸ್ಪರ್ಧಿಸುವುದು ಖಚಿತ ಎಂಬುದಾಗಿ ಹೇಳಿದ್ದಾರೆ.

‘ದಕ್ಷಿಣ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರು, ಹಿಂದುಳಿದ ವರ್ಗದ ಮತದಾರರು ಹೆಚ್ಚಿದ್ದಾರೆ. ಅಲ್ಪಸಂಖ್ಯಾತದವರಿಗೆ ಟಿಕೆಟ್ ಸಿಗುವ ವಿಶ್ವಾಸ ನುಚ್ಚುನೂರಾಗಿದೆ. ಬಂಡಾಯ ಅಭ್ಯರ್ಥಿಯಾಗಿ ಸೋಮವಾರ ನಾಮಪತ್ರ ಸಲ್ಲಿಸುವೆ’ ಎಂದರು.

> ಕುಟುಂಬ ರಾಜಕಾರಣ ಕಾಂಗ್ರೆಸ್ ಮಾತ್ರವಲ್ಲ; ಎಲ್ಲ ಪಕ್ಷಗಳಲ್ಲೂ ಇದೆ. ಒಂದೇ ಕುಟುಂಬಕ್ಕೆ ಮಣೆ ಹಾಕುವುದಕ್ಕಿಂತ, ಗೆಲ್ಲುವ ಅಭ್ಯರ್ಥಿ ಹುಡುಕಿ ಟಿಕೆಟ್ ನೀಡಬೇಕಾಗುತ್ತದೆ
>
> **ಸತೀಶ ಜಾರಕಿಹೊಳಿ,** ಕಾರ್ಯಾಧ್ಯಕ್ಷ, ಕೆಪಿಸಿಸಿ

‘ಅಸ್ಸಾಮಿಗಳ ಪ್ರಾದೇಶಿಕ ಅಸ್ಮಿತೆ ಹೈಜಾಕ್’

ಗುವಾಹಟಿ (ಪಿಟಿಐ): ವಿಧಾನಸಭಾ ಚುನಾವಣೆ ಎದುರಿಸಲಿರುವ ಅಸ್ಸಾಂನಲ್ಲಿ ಅಸ್ಸಾಮಿಗಳ ಪ್ರಾದೇಶಿಕ ಅಸ್ಮಿತೆಯನ್ನು ರಕ್ಷಿಸಲು ಪ್ರಾದೇಶಿಕ ಮತ್ತು ರಾಷ್ಟ್ರೀಯ ಪಕ್ಷಗಳ ನಡುವೆ ಹಲವು ವರ್ಷಗಳಿಂದ ನಡೆಯುತ್ತಿರುವ ಪೈಪೋಟಿ ಕೊಂಚ ತಗ್ಗಿದಂತೆ ಕಾಣುತ್ತಿದೆ.

‘ಅಸ್ಸಾಂ ಜನರ ಪ್ರಾದೇಶಿಕ ಅಸ್ಮಿತೆಯ ಸಮಸ್ಯೆಗಳನ್ನು ರಾಷ್ಟ್ರೀಯ ಪಕ್ಷಗಳು ಹೈಜಾಕ್ ಮಾಡಿವೆ. ಅವುಗಳಲ್ಲಿ ಹೆಚ್ಚಿನ ಸಂಪನ್ಮೂಲ ಇರುವ ಕಾರಣ, ಇಲ್ಲಿನ ಪ್ರಾದೇಶಿಕ ಪಕ್ಷಗಳು ಚುನಾವಣೆಯಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ರಾಷ್ಟ್ರೀಯ ಪಕ್ಷಗಳ ಜತೆ ಕೈಜೋಡಿಸಿವೆ’ ಎಂದು ಅವರು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ಅಸ್ಸಾಮಿಗಳ ಕಳವಳ: ‘ಸಂಸ್ಕೃತಿ, ಭಾಷೆ ಮತ್ತು ಅಸ್ಮಿತೆಯ ರಕ್ಷಣೆಯು ಅಸ್ಸಾಂ ಜನರಿಗೆ ಯಾವಾಗಲೂ ಕಳವಳದ ವಿಷಯವಾಗಿದೆ. ವಿಭಿನ್ನ ರಾಜಕೀಯ ವ್ಯವಸ್ಥೆಗಳು ಇವುಗಳನ್ನು ವಿಭಿನ್ನ ರೀತಿಯಲ್ಲಿ ಬಳಸಿಕೊಂಡಿವೆ’ ಎಂದು ಅಂಕಣಕಾರ ಮತ್ತು ರಾಜಕೀಯ ವಿಶ್ಲೇಷಕ ಭ್ರೋಜೇನ್ ಡೇಕಾ ವಿವರಿಸಿದ್ದಾರೆ.

‘ಬಂಗಾಳಿ ಮಾತನಾಡುವ ಮುಸ್ಲಿಮರು, ಹೆಚ್ಚಾಗಿ ಬಾಂಗ್ಲಾದೇಶ ಮೂಲದವರು ಸ್ಥಳೀಯ ಜನರಿಗೆ ಆತಂಕ ಉಂಟು ಮಾಡಿದ್ದಾರೆ. ಇತ್ತೀಚಿನ ದಶಕಗಳಲ್ಲಿ ಅದು ಪ್ರಮುಖ ಚರ್ಚಿತ ವಿಷಯವಾಗಿದೆ. ಈ ಸಮಸ್ಯೆಯನ್ನು ಪರಿಹರಿಸುವ ಭರವಸೆಗಳನ್ನು ನೀಡಿ ಕೆಲ ರಾಜಕೀಯ ಪಕ್ಷಗಳು ಚುನಾವಣೆ ಎದುರಿಸಿ, ಸರ್ಕಾರಗಳನ್ನು ರಚಿಸಿವೆ’ ಎಂದು ಅವರು ಹೇಳಿದ್ದಾರೆ.

ಚುನಾವಣಾ ಅಸ್ತ್ರ: ‘2016ರಲ್ಲಿ ಬಿಜೆಪಿಯು ಅಸ್ಸಾಮಿ ಸಮುದಾಯ, ಭೂಮಿ ಮತ್ತು ಮನೆ ವಿಷಯಗಳನ್ನು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಪ್ರಸ್ತಾಪಿಸಿ, ಗೆಲುವು ಸಾಧಿಸಿತು. ಇದು ಸ್ಥಳೀಯ ಅಸ್ಮಿತೆಯನ್ನು ಕಾಪಾಡುವ ನೇರ ಉಲ್ಲೇಖವಾಗಿತ್ತು. ಅದು 2026ರ ಚುನಾವಣೆಯಲ್ಲಿ ಬಾಂಗ್ಲಾದೇಶದಿಂದ ಬಂದಿರುವ ಅಕ್ರಮ ವಲಸಿಗರ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆಗಳನ್ನು ನೀಡುತ್ತಿದೆ’ ಎಂದು ಅವರು ಉಲ್ಲೇಖಿಸಿದ್ದಾರೆ.

ಎರಡು ಅವಧಿಗೆ ಸರ್ಕಾರವನ್ನು ಮುನ್ನಡೆಸಿದ ಅಸ್ಸಾಂ ಗಣ ಪರಿಷತ್ (ಎಜಿಪಿ) ಈಗ ಬಿಜೆಪಿಯ ಸಣ್ಣ ಮಿತ್ರ ಪಕ್ಷ. ಕಳೆದ ಎರಡು ವಿಧಾನಸಭಾ ಚುನಾವಣೆಗಳಲ್ಲಿ ಈ ಪ್ರಾದೇಶಿಕ ಪಕ್ಷವು 126 ಸ್ಥಾನಗಳಲ್ಲಿ 26 ಸ್ಥಾನಗಳಲ್ಲಿ ಮಾತ್ರ ಸ್ಪರ್ಧಿಸುತ್ತಿದೆ.

ಈ ವರ್ಷ ಎಜಿಪಿಯ 26 ಅಭ್ಯರ್ಥಿಗಳ ಪೈಕಿ 13 ಮಂದಿ ಮುಸ್ಲಿಮರಾಗಿದ್ದಾರೆ. ಎಜಿಪಿ ರಚನೆ ಆದಾಗಿನಿಂದಲೂ ಜಾತ್ಯತೀತ ದೃಷ್ಟಿಕೋನವನ್ನು ಹೊಂದಿದೆ, ಆದರೆ ಅದು ಯಾವಾಗಲೂ ಬಂಗಾಳಿ ಮಾತನಾಡುವ ಮುಸ್ಲಿಮರಿಂದ ಅಂತರ ಕಾಯ್ದುಕೊಂಡಿದೆ. ಆದರೆ ಈ ಬಾರಿ ಅಭ್ಯರ್ಥಿಗಳಾಗಿರುವ 13 ಮಂದಿ ಮುಸ್ಲಿಮರ ಪೈಕಿ ಹಲವರು ಬಂಗಾಳಿ ಮಾತನಾಡುವವರು ಎಂಬುದು ಮಹತ್ವದ್ದಾಗಿದೆ ಎಂದು ರಾಜಕೀಯ ಡೇಕಾ ವಿವರಿಸಿದ್ದಾರೆ.

ಮತ್ತೊಂದೆಡೆ, ಅಸ್ಸಾಮಿ ಜನರ ಗುರುತನ್ನು ರಕ್ಷಿಸುವ ಮಹತ್ವದ ಉದ್ದೇಶದಿಂದ ರಚನೆಯಾದ ರೈಜೋರ್ ದಳ ಮತ್ತು ಅಸ್ಸಾಂ ಜಾತೀಯ ಪರಿಷತ್ ಪಕ್ಷಗಳು ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಂಡಿವೆ. ಆದರೆ ಕಾಂಗ್ರೆಸ್ ಪಕ್ಷವು ಅಕ್ರಮ ವಲಸಿಗರ ಪರವಾಗಿದ್ದು, ಅವರನ್ನು ಮತಬ್ಯಾಂಕ್ ಮಾಡಿಕೊಂಡಿದೆ ಎಂಬ ಆರೋಪ ಎದುರಿಸುತ್ತಿದೆ.

ಅಲ್ಪಸಂಖ್ಯಾತರು ಟಿಕೆಟ್ ಕೇಳುವುದು ತಪ್ಪಲ್ಲ: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದಿಂದ ಅಲ್ಪ ಸಂಖ್ಯಾತರು ಟಿಕೆಟ್ ಕೇಳುವುದರಲ್ಲಿ ತಪ್ಪಿಲ್ಲ. ಜನಸಂಖ್ಯೆ ಆಧಾರದ ಮೇಲೆ ಕೇಳುತ್ತಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬಾಗಲಕೋಟೆಯಲ್ಲಿ ಎಚ್.ವೈ. ಮೇಟಿಯವರ ಹಿರಿಯ ಪುತ್ರ ಮಲ್ಲಿಕಾರ್ಜುನ ಅವರಿಗೆ ಟಿಕೆಟ್ ನೀಡುವ ಬಯಕೆ ಇತ್ತು. ಜಿಲ್ಲಾ ಪಂಚಾಯತಿ ಸದಸ್ಯೆಯಾದ ಇನ್ನೊಬ್ಬ ಮಗಳೂ ಸೇರಿದಂತೆ ಅವರ ಕುಟುಂಬದಲ್ಲಿಯೇ ನಾಲ್ವರು ಟಿಕೆಟ್ ಕೇಳಿದ್ದರು’ ಎಂದರು.

‘ದಾವಣಗೆರೆಗೆ ಶಿವಶಂಕರಪ್ಪ ಅವರು ಮಾಡಿರುವ ಸೇವೆ, ಅಭಿವೃದ್ಧಿ ಅತ್ಯುತ್ತಮವಾಗಿದೆ. ಬೆಂಗಳೂರು ನಗರ ಯಾವ ರೀತಿ ಇದೆಯೋ ಅದಕ್ಕಿಂತ ಚೆನ್ನಾಗಿ ದಾವಣಗೆರೆಯಿದೆ. ಕುಡಿಯುವ ನೀರು, ಬಡವರಿಗೆ ಮನೆ ನೀಡಿದ್ದಾರೆ. ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಕಳೆದ 40 ವರ್ಷಗಳಿಂದ ಸೇವೆ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದೊಂದಿಗೆ ಶಾಮನೂರು ಅವರ ಕುಟುಂಬ ಮೊದಲಿನಿಂದಲೂ ನಿಂತಿದೆ’ ಎಂದರು.

‘ಶಿವಶಂಕರಪ್ಪ ಅವರು ನನ್ನ ನಂತರ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡುತ್ತೇವೆ ಎಂದಿದ್ದರು. ಆ ಮಾತಿನಂತೆ ನಡೆದುಕೊಳ್ಳುತ್ತಿಲ್ಲ’ ಎನ್ನುವ ಆ ಸಮುದಾಯವರ ಅಸಮಾಧಾನದ ಬಗ್ಗೆ ಕೇಳಿದಾಗ, ‘ಅಸಮಾಧಾನ ನಿಮ್ಮ (ಮಾಧ್ಯಮ) ಬಳಿ ಹೇಳಿರಬಹುದು. ನಮ್ಮ ಬಳಿ ಹೇಳಿಲ್ಲ. ಅದಕ್ಕೆ ನಾವು ಮೂರು ಬಾರಿ ಜಬ್ಬಾರ್ ಅವರನ್ನು ಪರಿಷತ್ ಸದಸ್ಯರಾಗಿ ಮಾಡಿರುವುದು’ ಎಂದರು.

ಬಿಜೆಪಿ–ಜೆಡಿಎಸ್‌ನವರು ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲು ಚಿಂತನೆ ನಡೆಸುತ್ತಿರುವ ಬಗ್ಗೆ ಕೇಳಿದಾಗ, ‘ರಾಜಕಾರಣ ಎಂದ ಮೇಲೆ ಆ ಪ್ರಯತ್ನ ನಡೆಯುತ್ತದೆ. ಅದು ಅವರ ಪಕ್ಷದ ತೀರ್ಮಾನ, ಇದು ನಮ್ಮ ಪಕ್ಷದ ತೀರ್ಮಾನ. ಅಷ್ಟಕ್ಕೂ ಅವರಲ್ಲಿ (ಬಿಜೆಪಿ) ಒಮ್ಮತ ಇದೆಯೇ’ ಎಂದು ಪ್ರಶ್ನಿಸಿದರು.

‘ಸರ್ಕಾರಕ್ಕೆ ಮೂರು ವರ್ಷಗಳು ತುಂಬಿರುವ ಸಂದರ್ಭದಲ್ಲಿ ಈ ಉಪಚುನಾವಣೆ ಭವಿಷ್ಯದ ದಿಕ್ಸೂಚಿಯೇ’ ಎಂಬ ಪ್ರಶ್ನೆಗೆ, ‘ಪ್ರತಿಪಕ್ಷಗಳು ಯಾವ ಚುನಾವಣೆ ಗೆದ್ದಿವೆ. ಅವರ ಸ್ಥಾನಗಳನ್ನು ನಾವು ಗೆದ್ದುಕೊಂಡು ಬಂದಿದ್ದೇವೆ. ಬಸವರಾಜ ಬೊಮ್ಮಾಯಿ ಅವರ ಸ್ಥಾನ, ಕುಮಾರಸ್ವಾಮಿ ಅವರ ಮಗನ ಸ್ಥಾನ ಗೆದ್ದಿದ್ದೇವಲ್ಲ’ ಎಂದರು.

ಉಪಚುನಾವಣೆ: ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ಇಂದು

ಉಭಯ ಕ್ಷೇತ್ರಗಳತ್ತ ನಾಯಕರ ದಂಡು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಬಾಗಲಕೋಟೆ ಕ್ಷೇತ್ರದ ಉಪಚುನಾವಣೆಗೆ ಕಾಂಗ್ರೆಸ್ ಪಕ್ಷವು, ಎಚ್.ವೈ. ಮೇಟಿ ಅವರ ಕಿರಿಯ ಪುತ್ರ ಉಮೇಶ ಮೇಟಿ ಅವರಿಗೆ ಟಿಕೆಟ್ ಘೋಷಿಸುವ ಮೂಲಕ ಮೇಟಿ ಅವರ ಕುಟುಂಬದಲ್ಲಿದ್ದ ಗೊಂದಲಗಳಿಗೆ ತೆರೆ ಬಿದ್ದಿದೆ. ರಾಜಕೀಯ ಚಟುವಟಿಕೆಗಳು ಗರಿಗೆದರಿವೆ.



ಉಮೇಶ ಮೇಟಿ

‘ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ. ತಂದೆಗೆ ಆಶೀರ್ವದಿಸಿದ್ದ ಜನರು ನನಗೂ ಆಶೀರ್ವಾದ ಮಾಡಲಿದ್ದಾರೆ ಎಂಬ ವಿಶ್ವಾಸವಿದೆ’ ಎಂದು ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಹೇಳಿದರು.

ಟಿಕೆಟ್ ಘೋಷಣೆ ಆಗುತ್ತಿದ್ದಂತೆಯೇ ಕೊತ್ತಲೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆದರು. ಪವಮಾನ ಹೋಮದಲ್ಲಿ ಭಾಗಿಯಾಗಿದ್ದರು.

ಸಹೋದರನಿಗೆ ಬೆಂಬಲ: ‘ಉಮೇಶಣ್ಣನಿಗೆ ಟಿಕೆಟ್ ದೊರೆತಿರುವುದು ಸಂತಸವಾಗಿದೆ. ಜನರು ಗೆಲ್ಲಿಸುತ್ತಾರೆ ಎಂಬ ಭರವಸೆ ಇದೆ. ನಾಲ್ವರೂ ಸೇರಿ ಪ್ರಚಾರ ಮಾಡುತ್ತೇವೆ’ ಎಂದು ಟಿಕೆಟ್ ಆಕಾಂಕ್ಷಿಯಾಗಿದ್ದ ಮೇಟಿ ಅವರ ಪುತ್ರಿ ಮಹಾದೇವಿ ಮೇಟಿ ಹೇಳಿದರು.

ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಸೋಮವಾರ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ, ಬಿಜೆಪಿ ಅಭರ್ಥಿ ವೀರಣ್ಣ ಚರಂತಿಮಠ ನಾಮಪತ್ರ ಸಲ್ಲಿಸಲಿದ್ದಾರೆ.

ಉಮೇಶ ಮೇಟಿ ನಾಮಪತ್ರ ಸಲ್ಲಿಕೆ ಮೆರವಣಿಗೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಚಿವ ಎಂ.ಬಿ. ಪಾಟೀಲ, ಸತೀಶ ಜಾರಕಿಹೊಳಿ ಸೇರಿ ಹಲವು ಸಚಿವರು ಭಾಗವಹಿಸಲಿದ್ದಾರೆ.

ಇನ್ನೊಂದೆಡೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ನಾಮಪತ್ರ ಸಲ್ಲಿಕೆ ಮೆರವಣಿಗೆಯಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಪಾಲ್ಗೊಳ್ಳಲಿದ್ದಾರೆ.

ಶಕ್ತಿ ಪ್ರದರ್ಶನಕ್ಕೆ ಮುಂದಾದ ಕಾಂಗ್ರೆಸ್, ಬಿಜೆಪಿ

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಹಾಗೂ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಅವರು ಸೋಮವಾರ ಅಧಿಕೃತವಾಗಿ ಮತ್ತೊಮ್ಮೆ ನಾಮಪತ್ರ ಸಲ್ಲಿಸಲಿದ್ದಾರೆ. ಆ ಮೂಲಕ ಎರಡೂ ಪಕ್ಷಗಳು ಶಕ್ತಿ ಪ್ರದರ್ಶನಕ್ಕೂ ಮುಂದಾಗಿವೆ.



ಸಮರ್ಥ್ ಶಾಮನೂರು



ಶ್ರೀನಿವಾಸ ದಾಸಕರಿಯಪ್ಪ

ಶುಕ್ರವಾರ (ಮಾರ್ಚ್ 20) ಸಮರ್ಥ್ ಅವರು ತಾಯಿ, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಜೊತೆಗೆ ಬಂದು ನಾಮಪತ್ರ ಸಲ್ಲಿಸಿದ್ದರು.

ಸೋಮವಾರ ಬೆಳಿಗ್ಗೆ 10 ಗಂಟೆಗೆ ನಗರದೇವತೆ ದುರ್ಗಾಂಬಿಕಾ ದೇವಿಗೆ ಪೂಜೆ ಸಲ್ಲಿಸಲಿದ್ದಾರೆ. ಬಳಿಕ ಶಿವಾಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಹಜರತ್ ಷಾವಲಿ ದರ್ಗಾದಲ್ಲಿ ಪೂಜೆ ಸಲ್ಲಿಸಲಿದ್ದಾರೆ.

‘ಹಳೆಪೇಟೆಯಿಂದ ಮಹಾನಗರ ಪಾಲಿಕೆವರೆಗೆ ಮೆರವಣಿಗೆ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಸೇರಿ ಹಲವು ಸಚಿವರು ಹಾಗೂ ಪಕ್ಷದ ನಾಯಕರು ಭಾಗವಹಿಸುವರು’ ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಬಿ. ಮಂಜಪ್ಪ ತಿಳಿಸಿದರು.

ಬಿಜೆಪಿಯಿಂದಲೂ ಮೆರವಣಿಗೆ: ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಅವರೂ ಪಕ್ಷದ ನಾಯಕರೊಂದಿಗೆ ‘ಬಿ’ ಫಾರಂ ಸಮೇತ ಮತ್ತೆ ನಾಮಪತ್ರ ಸಲ್ಲಿಸುವರು. ಇದಕ್ಕೂ ಮುನ್ನ ದುರ್ಗಾಂಬಿಕಾ ದೇವಸ್ಥಾನದಿಂದ ಮೆರವಣಿಗೆ ಕೈಗೊಂಡಿದ್ದು, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಸಂಸದರಾದ ಜಗದೀಶ್ ಶೆಟ್ಟರ್, ಗೋವಿಂದ ಕಾರಜೋಳ, ಮಾಜಿ ಸಚಿವ ಬಿ.ಶ್ರೀರಾಮುಲು ಸೇರಿದಂತೆ ಪಕ್ಷದ ಇತರ ಮುಖಂಡರು ಭಾಗವಹಿಸುವರು ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎನ್.ರಾಜಶೇಖರ್ ತಿಳಿಸಿದ್ದಾರೆ.

ಎರಡೂ ಪಕ್ಷಗಳ ಮೆರವಣಿಗೆ ಒಂದೇ ಸ್ಥಳದಿಂದ ಏಕಕಾಲಕ್ಕೆ ಆರಂಭವಾಗಲಿದೆ. ಹೀಗಾಗಿ ಭದ್ರತೆ ಒದಗಿಸುವುದು ಪೊಲೀಸರಿಗೆ ತಲೆನೋವಾಗಿ ಪರಿಣಮಿಸಿದೆ.

> ಕಾಂಗ್ರೆಸ್ ಸರ್ಕಾರದ ದುರಾಡಳಿತ ಹಾಗೂ ಭ್ರಷ್ಟಾಚಾರದಿಂದ ಮತದಾರರು ಬೇಸತ್ತಿದ್ದಾರೆ. ಬಿಜೆಪಿ ಪರ ವಾತಾವರಣ ನಿರ್ಮಾಣವಾಗಿದೆ
>
> **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಕೇರಳ: ಎನ್‌ಡಿಎ ಅಭ್ಯರ್ಥಿ ವಿರುದ್ಧ ದೂರು

ತ್ರಿಶ್ಶೂರ್ (ಕೇರಳ) (ಪಿಟಿಐ): ಕೇರಳದ ಗುರುವಾಯೂರು ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ನೀಡಿರುವ ಹೇಳಿಕೆ ಕೋಮುದ್ವೇಷವನ್ನು ಬಿತ್ತುತ್ತದೆ ಎಂದು ಆಕ್ಷೇಪಿಸಿ ಕಾಂಗ್ರೆಸ್ ಬೆಂಬಲಿತ ವಿದ್ಯಾರ್ಥಿ ಸಂಘಟನೆ ಕೆಎಸ್‌ಯು ಕೇರಳ ಹೈಕೋರ್ಟ್ ಮೆಟ್ಟಿಲೇರಿದೆ.

ಬಿಜೆಪಿ ನಾಯಕ ಬಿ. ಗೋಪಾಲಕೃಷ್ಣನ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಮತ್ತು ಚುನಾವಣೆಗೆ ಸ್ಪರ್ಧಿಸದಂತೆ ಅನರ್ಹಗೊಳಿಸುವಂತೆ ಕೆಎಸ್‌ಯು ಮನವಿ ಮಾಡಿದೆ. ಪೊಲೀಸರು ಮತ್ತು ಅಧಿಕಾರಿಗಳಿಗೂ ಕೆಎಸ್‌ಯು ದೂರು ನೀಡಿದೆ.

‘ಗುರುವಾಯೂರು ವಿಧಾನಸಭಾ ಕ್ಷೇತ್ರದಲ್ಲಿ ಐದು ದಶಕಗಳಿಂದ ಹಿಂದೂಗಳು ಶಾಸಕರಾಗಿ ಆಯ್ಕೆಯಾಗಿಲ್ಲ. ಎಡಪಕ್ಷ ಮತ್ತು ಕಾಂಗ್ರೆಸ್ ನೇತೃತ್ವದ ಕೂಟಗಳು ಹಿಂದೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿಲ್ಲ. ಗುರುವಾಯೂರಪ್ಪನ್ ದೇವರ ಭೂಮಿಯು ದೇಗುಲ ಕಳ್ಳರ ಕೈಯಲ್ಲಿದೆ’ ಎಂದು ಚುನಾವಣಾ ಪ್ರಚಾರದಲ್ಲಿ ಗೋಪಾಲಕೃಷ್ಣನ್ ಹೇಳಿರುವ ವಿಡಿಯೊವನ್ನು ಕೆಎಸ್‌ಯು ಸಾಕ್ಷ್ಯವಾಗಿ ನೀಡಿದೆ.

₹32.50 ಲಕ್ಷ ಜಪ್ತಿ

ಬಾಗಲಕೋಟೆ: ತಾಲ್ಲೂಕಿನ ಹೊನ್ನಕಟ್ಟಿ ಕ್ರಾಸ್ ಬಳಿ ಚೆಕ್‌ಪೋಸ್ಟ್ ಸಮೀಪ, ದಾಖಲೆಗಳಿಲ್ಲದೇ ಎರ್ಟಿಗಾ ಕಾರಿನಲ್ಲಿ ಸಾಗಿಸುತ್ತಿದ್ದ ₹32.50 ಲಕ್ಷ ಜಪ್ತಿ ಮಾಡಿಕೊಳ್ಳಲಾಗಿದೆ.

ಚೆಕ್‌ಪೋಸ್ಟ್‌ನಲ್ಲಿದ್ದ ಎಂಜಿನಿಯರ್ ಶ್ರೀಧರ ಸಂಗನಾಳ ನೇತೃತ್ವದ ತಂಡವು ಹಣ ಜಪ್ತಿ ಮಾಡಿ, ಎಫ್‌ಎಸ್‌ಟಿ ತಂಡಕ್ಕೆ ಹಣ ಹಸ್ತಾಂತರಿಸಲಾಗಿದೆ.


ಬಾಗಲಕೋಟೆ ಕ್ಷೇತ್ರದ ಉಪ ಚುನಾವಣೆ ಕಾರಣಕ್ಕೆ 24 ಕಡೆ ಚೆಕ್‌ಪೋಸ್ಟ್ ಸ್ಥಾಪಿಸಿದ್ದು, ವಾಹನಗಳ ತಪಾಸಣೆ ಮಾಡಲಾಗುತ್ತಿದೆ.

ಆರ್‌ಎಲ್‌ಡಿ ಪಕ್ಷಕ್ಕೆ ಕೆ.ಸಿ.ತ್ಯಾಗಿ ಸೇರ್ಪಡೆ

ನವದೆಹಲಿ (ಪಿಟಿಐ): ಜೆಡಿಯು ಮಾಜಿ ನಾಯಕ ಕೆ.ಸಿ.ತ್ಯಾಗಿ ಅವರು ಭಾನುವಾರ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ.

ಆರ್‌ಎಲ್‌ಡಿ ಅಧ್ಯಕ್ಷ ಹಾಗೂ ಕೇಂದ್ರ ಸಚಿವರಾಗಿರುವ ಜಯಂತ್ ಚೌಧರಿ ಅವರ ಉಪಸ್ಥಿತಿಯಲ್ಲಿ ತ್ಯಾಗಿ ಪಕ್ಷ ಸೇರಿದ್ದಾರೆ.

ಸಮತಾ ಪಕ್ಷ, ಜನತಾದಳ ವಿಲೀನಗೊಂಡು 2003ರ ಅಕ್ಟೋಬರ್‌ನಲ್ಲಿ ಜೆಡಿಯು ಅಸ್ತಿತ್ವಕ್ಕೆ ಬಂದಾಗಿನಿಂದಲೂ ತ್ಯಾಗಿ ಅದೇ ಪಕ್ಷದಲ್ಲಿ ಗುರುತಿಸಿಕೊಂಡಿದ್ದರು. ಅಲ್ಲದೇ, ಪಕ್ಷದ ಪ್ರಧಾನ ಕಾರ್ಯದರ್ಶಿ, ಮುಖ್ಯ ವಕ್ತಾರ, ರಾಜಕೀಯ ಸಲಹೆಗಾರ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದರು. ಕಳೆದ ಮಂಗಳವಾರ ಜೆಡಿಯು ತೊರೆಯುತ್ತಿರುವುದಾಗಿ ಘೋಷಿಸಿದ್ದ ಅವರು, ಪಕ್ಷ ತೊರೆಯುತ್ತಿರುವುದಕ್ಕೆ ಕಾರಣ ತಿಳಿಸಿರಲಿಲ್ಲ.



ಆರ್‌ಎಲ್‌ಡಿ ನಾಯಕ ಜಯಂತ್ ಸಿಂಗ್ ಅವರ ಜತೆಗೆ ಕೆ.ಸಿ.ತ್ಯಾಗಿ –ಪಿಟಿಐ ಚಿತ್ರ

ಒಳ ಮೀಸಲಾತಿ, ರೋಸ್ಟರ್‌ಗೆ ವಿರೋಧ; ಧರಣಿ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಹಾಗೂ ರೋಸ್ಟರ್ ವ್ಯವಸ್ಥೆ ವಿರೋಧಿಸಿ ಇದೇ 24ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಭಾನುವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಭೋವಿ, ಬಂಜಾರ, ಕೊರಮ, ಕೊರಚ, ಸೂಕ್ಷ್ಮ, ಅತಿಸೂಕ್ಷ್ಮ, ಅಲೆಮಾರಿಗಳ 59 ಜಾತಿಗಳಿಗೆ ಅನ್ಯಾಯವಾಗುತ್ತಿದೆ. ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಅವೈಜ್ಞಾನಿಕವಾಗಿವೆ. ನಾಗಮೋಹನದಾಸ್ ಆಯೋಗದ ವರದಿ ಅಪೂರ್ಣವಾಗಿದೆ. ಸಮೀಕ್ಷೆ ಸರಿಯಾದ ರೀತಿಯಲ್ಲಿ ನಡೆದಿಲ್ಲ ಎಂದು ಹಲವು ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿದ್ದರೂ, ಅದನ್ನು ಪರಿಗಣಿಸದೆ ವರದಿ ಸಲ್ಲಿಸಲಾಗಿದೆ ಎಂದರು.

ಮೀಸಲಾತಿ ಒಕ್ಕೂಟದ ಅಧ್ಯಕ್ಷ ಡಾ.ಹೆಚ್. ರವಿ ಮಾಕಳಿ ಮಾತನಾಡಿ, ಬೋವಿ, ಕೊರಚ, ಕೊರಮ, ಲಂಬಾಣಿ ಸೇರಿದಂತೆ ವಿವಿಧ ಜನಾಂಗಗಳ ಮೇಲೆ ನಡೆಯುತ್ತಿರುವ ಅನ್ಯಾಯದ ವಿರುದ್ಧ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಕಾರ್ಯಾಧ್ಯಕ್ಷ ರಾಘವೇಂದ್ರ ನಾಯಕ್ ಮಾತನಾಡಿ, ಒಳಮೀಸಲಾತಿ ಅನುಷ್ಠಾನಕ್ಕೆ ಮುನ್ನ ದತ್ತಾಂಶ ಆಧಾರಿತ ಅಧ್ಯಯನ ಅಗತ್ಯವಿದೆ. ಆದರೆ, ರಾಜ್ಯ ಸರ್ಕಾರವು ಈ ಸಂಬಂಧ ಸೂಕ್ತ ಮಾಹಿತಿಯಿಲ್ಲದೆ ತ್ವರಿತ ನಿರ್ಧಾರ ಕೈಗೊಂಡಿದೆ ಎಂದರು.

ಕಾರ್ಯಾಧ್ಯಕ್ಷ ಅನಂತ ನಾಯಕ ಮಾತನಾಡಿ, ಹಳೆಯ ಮೀಸಲಾತಿ ನಿಯಮದಂತೆ ನೇಮಕಾತಿ ಮಾಡಿಕೊಳ್ಳುವುದಾಗಿ ರಾಜ್ಯ ಸರ್ಕಾರ ಪ್ರಕಟಿಸಿರುವುದು ಸ್ವಾಗತಾರ್ಹ. ಅವೈಜ್ಞಾನಿಕ, ಅನ್ಯಾಯ ದಿಂದ ಕೂಡಿರುವ ರೋಸ್ಟರ್ ನಿಗದಿ ಆದೇಶವನ್ನು ಹಿಂಪಡೆಯಬೇಕು ಎಂದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಡುಪ್ಲಾಂಟಿಸ್‌ಗೆ ಚಿನ್ನ
ಸ್ವೀಡನ್‌ನ ಪೋಲ್‌ವಾಲ್ಟ್ ತಾರೆ ಅರ್ಮಾಂಡ್ ಡುಪ್ಲಾಂಟಿಸ್ ಅವರು ಪೋಲೆಂಡ್‌ನಲ್ಲಿ ನಡೆದ ವಿಶ್ವ ಒಳಾಂಗಣ ಅಥ್ಲೆಟಿಕ್ಸ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದರು



ಜಾತಿ ಜಗಳ: ಕ್ಷೌರದಂಗಡಿಗಳು ಬಂದ್ 5
ಡಿಜಿಟಲ್ ಗಣತಿ: ದತ್ತಾಂಶ ಸುರಕ್ಷತೆಗೆ ಒತ್ತು 9

ಯುದ್ಧ: ಮತ್ತಷ್ಟು ಉಲ್ಬಣ ಆತಂಕ

ಇಂಧನ ಮೂಲಸೌಕರ್ಯಗಳ ನಾಶ: ಟ್ರಂಪ್ ಬೆದರಿಕೆ • ಇರಾನ್ ತಿರುಗೇಟು

ಕೈರೊ/ಟೆಹರಾನ್ (ಎಪಿ/ಎಎಫ್‌ಪಿ): ತೈಲ ಹೊತ್ತ ಹಡಗುಗಳ ಸಂಚಾರಕ್ಕೆ ಹೊರ್ಮುಜ್ ಜಲಸಂಧಿಯನ್ನು 48 ಗಂಟೆ ಒಳಗಾಗಿ ಮುಕ್ತಗೊಳಿಸದಿದ್ದಲ್ಲಿ ಇರಾನ್‌ನಲ್ಲಿನ ಎಲ್ಲ ವಿದ್ಯುತ್ ಸ್ಥಾವರಗಳನ್ನು ನಾಶ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಟ್ರಂಪ್ ಮಾತಿಗೆ ತಿರುಗೇಟು ನೀಡಿರುವ ಇರಾನ್, 'ಟ್ರಂಪ್ ತಾನು ಹೇಳಿದಂತೆ ದೇಶದಲ್ಲಿನ ವಿದ್ಯುತ್ ಸ್ಥಾವರಗಳನ್ನು ನಾಶ ಮಾಡಿದಲ್ಲಿ, ಇಂಧನ ಘಟಕಗಳು ಸೇರಿ ಕೊಲ್ಲಿ ರಾಷ್ಟ್ರಗಳಲ್ಲಿನ ಅಮೆರಿಕದ ಪ್ರಮುಖ ಮೂಲಸೌಕರ್ಯಗಳನ್ನು ಗುರಿಯಾಗಿಸಿ ದಾಳಿ ನಡೆಸುತ್ತೇವೆ' ಎಂದು ಭಾನುವಾರ ಹೇಳಿದೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧಕ್ಕೆ ಶೀಘ್ರವೇ ಅಂತ್ಯ ಹಾಡುವುದಾಗಿ ಶನಿವಾರವಷ್ಟೆ ಹೇಳಿದ್ದ ಟ್ರಂಪ್, ಈಗ ಇರಾನ್ ಮೇಲಿನ ದಾಳಿಗಳನ್ನು ಹೆಚ್ಚಿಸುವುದಾಗಿ ಬೆದರಿಕೆ ಹಾಕಿದ್ದಾರೆ. ಇದಕ್ಕೆ ಇರಾನ್ ಕೂಡ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ. ಹೀಗಾಗಿ, ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಮತ್ತಷ್ಟು ಭೀಕರವಾಗುವ ಸೂಚನೆಯನ್ನು ಈ ಬೆಳವಣಿಗೆ ನೀಡಿದಂತಾಗಿದೆ.

ಈ ಬೆಳವಣಿಗೆಯಿಂದ ಜಾಗತಿಕ ಮಾರುಕಟ್ಟೆಯಲ್ಲಿ ಮತ್ತಷ್ಟು ತಲ್ಲಣ ಕಂಡು ಬರಲಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

> **ಕದನ ವಿರಾಮ ನಡೆದರೆ ಹೊರ್ಮುಜ್ ಜಲಸಂಧಿಯಲ್ಲಿ ಅಳವಡಿಸಲಾಗಿರುವ ಸ್ಫೋಟಕಗಳ ಪತ್ತೆ, ನಾಶಪಡಿಸುವ ಕಾರ್ಯಕ್ಕೆ ಸೇನೆ ನಿಯೋಜನೆ ಕುರಿತು ಪರಿಶೀಲಿಸಲಾಗುವುದು**
> **ತೋಷಿಮಿಟ್ಸು ಮೊಟೆಗಿ,** ಜಪಾನ್ ವಿದೇಶಾಂಗ ಸಚಿವ

> **ಡೊನಾಲ್ಡ್ ಟ್ರಂಪ್ ನೀಡಿರುವ ಎಚ್ಚರಿಕೆಗೆ ಅಮೆರಿಕ ಅಂಟಿಕೊಂಡರೆ, ಹೊರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ಮುಚ್ಚಲಾಗುವುದು**
> **ಇರಾನ್**

8



ಇರಾನ್ ನಡೆಸಿದ ಕ್ಷಿಪಣಿಗಳ ದಾಳಿಯಲ್ಲಿ ಇಸ್ರೇಲ್‌ನ ಟೆಲ್ ಅವೀವ್‌ನ ಅಪಾರ್ಟ್‌ಮೆಂಟ್‌ವೊಂದು ಹಾನಿಗೀಡಾಗಿದೆ ಎಪಿ / ಪಿಟಿಐ ಚಿತ್ರ

ಸಿಸಿಎಸ್ ಸಭೆ: ತಂಡ ರಚನೆಗೆ ನಿರ್ದೇಶನ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮಗಳನ್ನು ಸಮರ್ಥವಾಗಿ ಎದುರಿಸಲು ಸಚಿವರು ಮತ್ತು ಕಾರ್ಯದರ್ಶಿಗಳ ತಂಡ ರಚಿಸುವಂತೆ ಪ್ರಧಾನಿ ನರೇಂದ್ರ ಮೋದಿ ನಿರ್ದೇಶಿಸಿದ್ದಾರೆ.

ಸಂಘರ್ಷದಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಪರಿಶೀಲಿಸಲು ಭಾನುವಾರ ರಾತ್ರಿ ನಡೆದ ಭದ್ರತೆ ಕುರಿತ ಸಂಪುಟ ಸಮಿತಿ (ಸಿಸಿಎಸ್) ಸಭೆಯಲ್ಲಿ ಮೋದಿ ಈ ಸೂಚನೆ ನೀಡಿದ್ದಾರೆ. ಸಂಘರ್ಷದ ಪರಿಣಾಮದಿಂದ ನಾಗರಿಕರನ್ನು ರಕ್ಷಿಸಲು ಪ್ರಯತ್ನಿಸುವಂತೆ ಕರೆ ನೀಡಿದ್ದಾರೆ.

8

ಏನೇನಾಯ್ತು?

- ಜೆರುಸಲೇಂನ ಹಲವೆಡೆ ಭಾನುವಾರ ಬೆಳಿಗ್ಗೆ ಭಾರಿ ಸ್ಫೋಟಗಳು ಸಂಭವಿಸಿವೆ. ಇಸ್ರೇಲ್‌ನತ್ತ ಇರಾನ್ ಹಲವು ಕ್ಷಿಪಣಿಗಳಿಂದ ದಾಳಿ ಮಾಡಿದೆ
- ಟೆಹರಾನ್ ಮೇಲೆ ಭಾನುವಾರವೂ ಇಸ್ರೇಲ್ ದಾಳಿ ನಡೆಸಿದೆ
- ರಾಜಧಾನಿ ರಿಯಾದ್ ಗುರಿಯಾಗಿಸಿ ಇರಾನ್ ಮೂರು ಕ್ಷಿಪಣಿಗಳಿಂದ ದಾಳಿ ನಡೆಸಿತ್ತು. ಈ ಪೈಕಿ ಒಂದು ಕ್ಷಿಪಣಿಯನ್ನು ಹೊಡೆದುರುಳಿಸಲಾಗಿದೆ. ಉಳಿದೆರಡು ಕ್ಷಿಪಣಿಗಳು ಜನವಸತಿ ಇಲ್ಲದ ಪ್ರದೇಶಗಳಲ್ಲಿ ಬಿದ್ದಿವೆ ಎಂದು ಸೌದಿ ಅರೇಬಿಯಾ ಹೇಳಿದೆ
- ಇರಾನ್‌ನ ಕ್ಷಿಪಣಿ ಹಾಗೂ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಯುಎಇ ಹೇಳಿದೆ
- ಇಸ್ರೇಲ್‌ನ ಉತ್ತರ ಭಾಗದಲ್ಲಿ ಇಸ್ರೇಲ್ ಸೈನಿಕರ ಮೇಲೆ ದಾಳಿ ನಡೆಸಿದ್ದಾಗಿ ಲೆಬನಾನ್‌ನಲ್ಲಿರುವ ಇರಾನ್ ಬೆಂಬಲಿತ ಹಿಜ್ಬುಲ್ಲಾ ಬಂಡುಕೋರ ಗುಂಪು ಹೇಳಿದೆ

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅಡಿ ಮೀಸಲಿಟ್ಟ ಅನುದಾನದಲ್ಲಿ ವೆಚ್ಚ

'ಗ್ಯಾರಂಟಿ': ₹14,200 ಕೋಟಿ ಹಂಚಿಕೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಟಿಎಸ್‌ಪಿ (ಬುಡಕಟ್ಟು ಉಪಯೋಜನೆ) ಅಡಿ ಪರಿಶಿಷ್ಟ ಸಮುದಾಯದವರ ಕಲ್ಯಾಣಕ್ಕೆ ಪ್ರಸಕ್ತ ಸಾಲಿನಲ್ಲಿ (2026-27) ಒದಗಿಸಿರುವ ಒಟ್ಟು ಅನುದಾನದಲ್ಲಿ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಪಂಚ 'ಗ್ಯಾರಂಟಿ' ಯೋಜನೆಗಳ ಅನುಷ್ಠಾನಕ್ಕೆ ₹14,198.93 ಕೋಟಿ ಹಂಚಿಕೆ ಮಾಡಲಾಗಿದೆ.

2026-27ನೇ ಸಾಲಿಗೆ ಎಸ್‌ಸಿಎಸ್‌ಪಿ ಅಡಿ ₹31,804 ಕೋಟಿ, ಟಿಎಸ್‌ಪಿ ಅಡಿ ₹12,828 ಕೋಟಿ ಸೇರಿ 'ಪರಿಶಿಷ್ಟರ ನಿಧಿ'ಗೆ ಬಜೆಟ್‌ನಲ್ಲಿ ಒಟ್ಟು ₹44,632 ಕೋಟಿ ಒದಗಿಸಲಾಗಿದೆ. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿ ಮಾಡಲಾಗುವ ವೆಚ್ಚದ ಕುರಿತ ಆಯವ್ಯಯ ಅಂದಾಜಿನಲ್ಲಿ ಗೃಹ ಲಕ್ಷ್ಮಿ, ಯುವ ನಿಧಿ, ಶಕ್ತಿ, ಗೃಹ ಜ್ಯೋತಿ, ಅನ್ನಭಾಗ್ಯ ಈ ಐದು 'ಗ್ಯಾರಂಟಿ' ಯೋಜನೆಗಳನ್ನು ಅನುಷ್ಠಾನಗೊಳಿಸುವ ಇಲಾಖೆಗಳಡಿ ಒದಗಿಸಿರುವ ಅನುದಾನದ ವಿವರವನ್ನು ನೀಡಲಾಗಿದೆ.

ಎಸ್‌ಸಿಎಸ್‌ಪಿ ಟಿಎಸ್‌ಪಿ ಅಡಿ ಕಳೆದ ಸಾಲಿನಲ್ಲಿ (2025-26) ₹42,018 ಕೋಟಿ ಮೀಸಲಿಟ್ಟಿದ್ದ ಮುಖ್ಯಮಂತ್ರಿ, ಈ ಬಾರಿ ಮೊತ್ತವನ್ನು ಹಿಗ್ಗಿಸಿದ್ದಾರೆ.

5

'ಗ್ಯಾರಂಟಿ' ಅಧ್ಯಕ್ಷರ ತಿಂಗಳ ವೇತನ ₹5.98 ಲಕ್ಷ, ಉಪಾಧ್ಯಕ್ಷರ ವೇತನ ₹4.44 ಲಕ್ಷ

ರಾಜ್ಯ ಸರ್ಕಾರ 'ಗ್ಯಾರಂಟಿ' ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಿಗೆ ತಿಂಗಳಿಗೆ ₹5,98,487 ಹಾಗೂ ಐವರು ಉಪಾಧ್ಯಕ್ಷರಿಗೆ ತಲಾ ₹4,43,865 ಮಾಸಿಕ ವೇತನ ಪಾವತಿಸುತ್ತಿದೆ.



ರಾಜ್ಯ ಮುಖ್ಯ ಕಾರ್ಯದರ್ಶಿಯ ಮಾಸಿಕ ವೇತನಕ್ಕೆ (₹2.25 ಲಕ್ಷ) ಹೋಲಿಸಿದರೆ, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ- ಉಪಾಧ್ಯಕ್ಷರ ವೇತನ ಇಮ್ಮಡಿಯಾಗಿದೆ. ವಿಧಾನಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್‌ಬಾಬು ಅವರ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಲಿಖಿತ ಉತ್ತರ ನೀಡಿದ್ದಾರೆ.


ಪ್ರಾಧಿಕಾರದ ಅಧ್ಯಕ್ಷರಾದ ಎಚ್.ಎಂ. ರೇವಣ್ಣ ಅವರ ಕಚೇರಿಯಲ್ಲಿ ಒಟ್ಟು 12 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, ಅವರಿಗೆ 2026ರ ಫೆಬ್ರುವರಿ ತಿಂಗಳಲ್ಲಿ ಒಟ್ಟು ₹6,51,844 ವೇತನ ನೀಡಲಾಗಿದೆ ಎಂದೂ ಮುಖ್ಯಮಂತ್ರಿ ಮಾಹಿತಿ ನೀಡಿದ್ದಾರೆ.

5

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ
(2026–27 ಬಜೆಟ್ ಅಂದಾಜು) (₹ ಕೋಟಿಗಳಲ್ಲಿ)

ಗ್ಯಾರಂಟಿ ಯೋಜನೆ	ಎಸ್‌ಸಿಎಸ್‌ಪಿ	ಟಿಎಸ್‌ಪಿ	ಒಟ್ಟು
ಗೃಹಲಕ್ಷ್ಮಿ	6,007.68	2,288.64	8,296.32
ಶಕ್ತಿ	1,060.00	477.00	1,537.00
ಅನ್ನಭಾಗ್ಯ	1,116.00	496.00	1,612.00
ಗೃಹಜ್ಯೋತಿ	1,904.04	687.57	2,591.61
ಯುವನಿಧಿ	114.00	48.00	162.00
ಒಟ್ಟು	10,201.72	3,997.21	14,198.93

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಮಂಗಳೂರಿಗೆ ಬಂದ 2 ಹಡಗು

ಪ್ರಜಾವಾಣಿ ವಾರ್ತೆ

ಮಂಗಳೂರು: ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹೊತ್ತ ಹಡಗು ನವ ಮಂಗಳೂರು ಬಂದರಿಗೆ ಭಾನುವಾರ ಬಂದಿದೆ. ಕಚ್ಚಾ ತೈಲ ಹೊತ್ತ ಇನ್ನೊಂದು ಹಡಗು ಶನಿವಾರ ರಾತ್ರಿಯೇ ಇಲ್ಲಿಗೆ ತಲುಪಿದೆ. ಇನ್ನೂ ನಾಲ್ಕು ಹಡಗುಗಳು ಇಲ್ಲಿಗೆ ಬರುತ್ತಿವೆ.

ಸಿಂಗಪುರ ಧ್ವಜ ಹೊಂದಿರುವ 'ಪೈಕ್ಸಿಸ್ ಪಯೋನಿಯರ್' ಎಂಬ ಹೆಸರಿನ ಹಡಗು ಒಟ್ಟು 47,236 ಟನ್ ಎಲ್‌ಪಿಜಿ ಹೊತ್ತು ತಂದಿದೆ. ಇದು ಅಮೆರಿಕದ ಟೆಕ್ಸಾಸ್ ಬಂದರಿನಿಂದ ಫೆ.14ರಂದು ಪ್ರಯಾಣ ಆರಂಭಿಸಿತ್ತು.

ನವ ಮಂಗಳೂರು ಬಂದರಿನಲ್ಲಿ (ಎನ್‌ಎಂಪಿ) ಈ ಹಡಗಿನಿಂದ 16,714 ಟನ್ ಎಲ್‌ಪಿಜಿಯನ್ನು ಏಜಿಸ್ ಲಾಜಿಸ್ಟಿಕ್ಸ್ ಲಿಮಿಟೆಡ್‌ಗೆ ಇಳಿಸಲಾಗುತ್ತಿದೆ. ಸೋಮವಾರ ಬೆಳಿಗ್ಗೆ ಇಲ್ಲಿಂದ ಈ ಹಡಗು ಹೊರಡಲಿದೆ ಎಂದು ಮೂಲಗಳು ತಿಳಿಸಿವೆ.

8



ನವ ಮಂಗಳೂರು ಬಂದರಿಗೆ ಬಂದ ಎಲ್‌ಪಿಜಿ ತುಂಬಿರುವ ಹಡಗು –ಪಿಟಿಐ ಚಿತ್ರ

'ಕೈ': ಉಮೇಶ್, ಸಮರ್ಥ್‌ಗೆ ಟಿಕೆಟ್

ಬೆಂಗಳೂರು: ಬಾಗಲಕೋಟೆ ವಿಧಾನಸಭಾ ಕ್ಷೇತ್ರದಿಂದ ಎಚ್.ವೈ. ಮೇಟಿ ಅವರ ಎರಡನೇ ಪುತ್ರ ಉಮೇಶ್ ಮೇಟಿ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಮಾಜಿ ಸಚಿವರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ್ ಮಲ್ಲಿಕಾರ್ಜುನ (ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರ ಪುತ್ರ) ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ.

'ಟಿಕೆಟ್ ವಿಚಾರವಾಗಿ ಮಾಧ್ಯಮಗಳು ಮಾಡುತ್ತಿದ್ದ ವಿಭಿನ್ನ ಚರ್ಚೆಗಳಿಗೆ ತೆರೆ ಎಳೆಯಲಾಗಿದೆ. ಟಿಕೆಟ್ ಹಂಚಿಕೆ ಬಗ್ಗೆ ಹೈಕಮಾಂಡ್ ತಡರಾತ್ರಿ ತಿಳಿಸಿತು' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ದಾಖಲೆ ಬರೆದ ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ಮುಖ್ಯಮಂತ್ರಿ ಮತ್ತು ಪ್ರಧಾನಿಯಾಗಿ 8931 ದಿನಗಳನ್ನು ಪೂರೈಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಜೀವನದಲ್ಲಿ ದಾಖಲೆ ಬರೆದಿದ್ದಾರೆ.

ಪವನ್ ಕುಮಾರ್ ಚಾಮ್ಲಿಂಗ್ ಅವರು ಸಿಕ್ಕಿಂ ಮುಖ್ಯಮಂತ್ರಿಯಾಗಿ 8930 ದಿನ ಪೂರೈಸುವ ಮೂಲಕ ದೇಶದಲ್ಲಿಯೇ ದೀರ್ಘಾವಧಿಗೆ ಸರ್ಕಾರದ ಮುಖ್ಯಸ್ಥರಾಗಿದ್ದ ಖ್ಯಾತಿ ಹೊಂದಿದ್ದರು. ಇದೀಗ ಮೋದಿ ಅವರು ಚಾಮ್ಲಿಂಗ್ ದಾಖಲೆಯನ್ನು ಮುರಿದಿದ್ದಾರೆ.

ಕೇಂದ್ರ ಸಚಿವರಾದ ರಾಜನಾಥ ಸಿಂಗ್, ಕಿರಣ್ ರಿಜಿಜು ಸೇರಿದಂತೆ ಬಿಜೆಪಿಯ ಹಲವು ನಾಯಕರು ಮೋದಿ ಅವರನ್ನು ಅಭಿನಂದಿಸಿದ್ದಾರೆ.

ಮೋದಿ ಅಧಿಕಾರದ ಹಾದಿ

- 2001ರ ಅಕ್ಟೋಬರ್ 7– ಮೊದಲ ಬಾರಿ ಗುಜರಾತ್ ಮುಖ್ಯಮಂತ್ರಿಯಾಗಿ ಆಯ್ಕೆ
- ಮೂರು ಬಾರಿ ಗುಜರಾತ್ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಣೆ
- 2014ರ ಮೇ 26 – ಮೊದಲ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕಾರ
- ಪ್ರಸ್ತುತ ಮೂರನೇ ಬಾರಿ ಪ್ರಧಾನಿಯಾಗಿ ಕಾರ್ಯನಿರ್ವಹಣೆ



ಅಖಿಲೇಶ್ ಟೀಕೆ: 'ದಾಖಲೆಯನ್ನು ದಿನಗಳ ಲೆಕ್ಕದಲ್ಲಿ ನಿರ್ಣಯಿಸಬಾರದು. ನಮ್ಮ ಸಂತೋಷದ ಸೂಚ್ಯಂಕ ಯಾವ ಪ್ರಮಾಣದಲ್ಲಿದೆ? ಜಾಗತಿಕವಾಗಿ ತಲಾ ಆದಾಯ ಎಷ್ಟಿದೆ? ಭ್ರಷ್ಟಾಚಾರ, ನಿರುದ್ಯೋಗದ ಪ್ರಮಾಣ ಎಷ್ಟಿದೆ? ಹೆಣ್ಣು ಮಕ್ಕಳು ಎಷ್ಟು ಸುರಕ್ಷಿತರಾಗಿದ್ದಾರೆ? ನಾವು ಸುಧಾರಣೆ ಆಗಿದ್ದೇವೆಯೇ?' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಪ್ರಶ್ನಿಸಿದ್ದಾರೆ.



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಲಿಂಗತ್ವ ಅಲ್ಪಸಂಖ್ಯಾತರು, ಮಹಿಳೆಯರಿಗೆ ಆಟೊ ವಿತರಣೆ



ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ಎಲೆಕ್ಟ್ರಿಕ್ ಆಟೊಗಳ ಕೀ ಅನ್ನು ರಾಮಲಿಂಗಾರೆಡ್ಡಿ ನೀಡಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಎಲೆಕ್ಟ್ರಿಕ್ ಆಟೊ ಪಡೆದುಕೊಳ್ಳಲು ಬೇಕಾದ ಸಹಾಯವನ್ನು ಸರ್ಕಾರದಿಂದಲೇ ಮಾಡಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಆಟೊ ಚಾಲನೆ ತರಬೇತಿ ಪಡೆದಿದ್ದ 20 ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ಬಿ.ಪ್ಯಾಕ್ ಹಾಗೂ ಸಿಜಿಐ ಸಹಯೋಗದಲ್ಲಿ ಭಾನುವಾರ ಉಚಿತವಾಗಿ ಎಲೆಕ್ಟ್ರಿಕ್ ಆಟೊ ವಿತರಿಸಿ ಅವರು ಮಾತನಾಡಿದರು.

ಬಿ.ಪ್ಯಾಕ್ ಹಾಗೂ ಸಿಜಿಐ ಸಂಸ್ಥೆಗಳು ಉಚಿತವಾಗಿ ಆಟೊ ಚಾಲನೆ ತರಬೇತಿ ನೀಡುವ ಜೊತೆಗೆ, ಅವರಿಗೆ ಆರ್ಥಿಕವಾಗಿ ಇನ್ನಷ್ಟು ಅನುಕೂಲ ಮಾಡಿಕೊಡಲು ಉಚಿತವಾಗಿಯೇ ಆಟೊ ವಿತರಿಸುತ್ತಿರುವುದು ಶ್ಲಾಘನೀಯ ಎಂದರು.

‘ಸರ್ಕಾರದಿಂದಲೂ ಮಹಿಳೆಯರಿಗೆ ಇ.ವಿ. ಆಟೊ ಖರೀದಿಗೆ ಸಬ್ಸಿಡಿ ಒದಗಿಸಲಾಗುವುದು. ಚಾಲನಾ ಪರವಾನಗಿ ಮಾಡಿಸುವ ವೇಳೆ ಮಹಿಳೆಯರಿಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ. ಅಲ್ಲದೇ ನನ್ನ ಸಂಸ್ಥೆಯಿಂದ 10 ಎಲೆಕ್ಟ್ರಿಕ್ ಆಟೊಗಳನ್ನು ಈ ಸಮುದಾಯಕ್ಕೆ ಉಚಿತವಾಗಿ ನೀಡಲಾಗುವುದು’ ಎಂದು ಹೇಳಿದರು.

‘ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಸಾಕ್ಷರತೆ ಪ್ರಮಾಣ ಹೆಚ್ಚುತ್ತಿದ್ದು, ಎಲ್ಲ ಕ್ಷೇತ್ರಗಳಲ್ಲಿ ಉದ್ಯೋಗದಲ್ಲಿದ್ದಾರೆ. ಆಟೊ ಚಾಲನೆ ಕ್ಷೇತ್ರದಲ್ಲಿಯೂ ಮಹಿಳೆಯರು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ’ ಎಂದು ತಿಳಿಸಿದರು.

ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡಿಮೆ ಇದೆ. ಇನ್ನಷ್ಟು ಹೆಚ್ಚಬೇಕು ಎಂದು ಆಶಿಸಿದರು. ಬಿ.ಪ್ಯಾಕ್ ಸಿಇಒ ರೇವತಿ ಅಶೋಕ್, ಸಿಜಿಐನ ಹಿರಿಯ ಉಪಾಧ್ಯಕ್ಷ ಸುಧೀರ್ ಶರ್ಮಾ, ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ, ಸಿಜಿಐ ಹಿರಿಯ ಉಪಾಧ್ಯಕ್ಷೆ ಜೆನ್ನಿಫರ್ ಮೆಚೇರಿಪಡ್ಡಿ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಬಿ.ಪ್ಯಾಕ್ ಹಾಗೂ ಸಿಜಿಐ ಸಹಯೋಗದಲ್ಲಿ ವಿತರಣೆ
- ಸರ್ಕಾರದಿಂದಲೂ ಮಹಿಳೆಯರಿಗೆ ಇ.ವಿ. ಆಟೊ ಖರೀದಿಗೆ ಸಬ್ಸಿಡಿ

ನರಸೀಪುರ ಲೀಗ್: ಲಯನ್ಸ್ ಚಾಂಪಿಯನ್

ದಾಬಸ್ ಪೇಟೆ: ಸೋಂಪುರ ಹೋಬಳಿ ನರಸೀಪುರ ಗ್ರಾಮದಲ್ಲಿ ಆಯೋಜಿಸಿದ್ದ ನರಸೀಪುರ ಚಾಂಪಿಯನ್ಸ್ ಲೀಗ್ ಸೀಸನ್-1 ಟೆನಿಸ್ ಬಾಲ್ ಕ್ರಿಕೆಟ್ ಟೂರ್ನಿಯಲ್ಲಿ ಬಿ.ಹೆಚ್.ಹಳ್ಳಿ ಇಲೆವೆನ್ ಲಯನ್ಸ್ ತಂಡ ಸೀಸನ್-1 ರ ಚಾಂಪಿಯನ್ ಆಗಿ ಹೊರಹೊಮ್ಮಿತು.

ಹೆಗ್ಗುಂದ ತಂಡ ರನ್ನರ್ಸ್ ಹಾಗೂ ಬಿ.ಎಚ್.ಹಳ್ಳಿ ಗ್ಲಡಿಯೇಟರ್ಸ್ ತೃತೀಯ ಸ್ಥಾನವನ್ನು ಪಡೆದುಕೊಂಡವು.

ಚಾಂಪಿಯನ್ ತಂಡಕ್ಕೆ ₹60 ಸಾವಿರ ನಗದು ಹಾಗೂ ಆಕರ್ಷಕ ಟ್ರೋಫಿ, ರನ್ನರ್ ಅಫ್ ತಂಡಕ್ಕೆ ₹30 ಸಾವಿರ ನಗದು, ಟ್ರೋಫಿ ಮತ್ತು ತೃತೀಯ ಸ್ಥಾನ ಪಡೆದ ತಂಡಕ್ಕೆ ₹15 ಸಾವಿರ ನಗದು, ಟ್ರೋಫಿ ನೀಡಲಾಯಿತು.

ಉತ್ತಮ ಬ್ಯಾಟರ್ ಆಗಿ ನವೀನ್ ಕುಮಾರ್, ಬೌಲರ್ ಹಾಗೂ ಸರಣಿ ಶ್ರೇಷ್ಠರಾಗಿ ಅಣ್ಣಪ್ಪ ಬಹುಮಾನ ಪಡೆದರು.

ಪರ್ವತಾರೋಹಿಗಳಿಗೆ ಶುಭ ಹಾರೈಕೆ

ಪ್ರಜಾವಾಣಿ ವಾರ್ತೆ



‘ಮಿಷನ್ ಎವರೆಸ್ಟ್–8848 ಮೀ.’ ಕಾರ್ಯಕ್ರಮದಲ್ಲಿ ಪರ್ವತಾರೋಹಿಗಳಾದ ಸಂತೋಷ್ ದೇವರಾಜಪ್ಪ ಮತ್ತು ಚಿನ್ಮಯಿ ತ್ರಿಶೂಲಮೂರ್ತಿ ಅವರಿಗೆ ಮಂಜುನಾಥ ಪ್ರಸಾದ್ ಎನ್. ಅವರು ಹಿಮಕೊಡಲಿ ನೀಡಿದರು. ಸುಧಾಕರ್, ನಾಗೇಂದ್ರಕುಮಾರ್ ಮತ್ತು ತುಳಸಿ ಮದ್ದಿನೇನಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಮೌಂಟ್ ಎವರೆಸ್ಟ್ ಏರಲಿರುವ ಇಬ್ಬರು ಪರ್ವತಾರೋಹಿಗಳಿಗೆ ಭಾನುವಾರ ಕರ್ನಾಟಕ ಪರ್ವತಾರೋಹಣ ಸಂಸ್ಥೆ (ಕರ್ನಾಟಕ ಮೌಂಟೇನಿಯರಿಂಗ್ ಅಸೋಸಿಯೇಷನ್) ವತಿಯಿಂದ ತ್ರಿವರ್ಣಧ್ವಜ, ಕರ್ನಾಟಕ ರಾಜ್ಯ ಲಾಂಛನ, ಅಸೋಸಿಯೇಷನ್‌ನ ಧ್ವಜದೊಂದಿಗೆ ಹಿಮಕೊಡಲಿ (ಐಸ್ ಆ್ಯಕ್ಸ್) ನೀಡಿ ಶುಭ ಕೋರಲಾಯಿತು.

ಸಂಸ್ಥೆಗೆ 60 ವರ್ಷ ತುಂಬಿದ ಪ್ರಯುಕ್ತ ಇದರ ಸದಸ್ಯರಾದ ಪರ್ವತಾರೋಹಿ ಸಂತೋಷ್ ದೇವರಾಜಪ್ಪ ಮತ್ತು ಮಹಿಳಾ ಪರ್ವತಾರೋಹಿ ಚಿನ್ಮಯಿ ತ್ರಿಶೂಲಮೂರ್ತಿ ಪರ್ವತಾರೋಹಣ ಮಾಡಲಿದ್ದಾರೆ. ನೇಪಾಳದ ಸಾಂಪ್ರದಾಯಿಕ ದಕ್ಷಿಣ ಮಾರ್ಗದ ಮೂಲಕ ಆರೋಹಣ ಮಾಡಲಿದ್ದಾರೆ.

‘ಸಮುದ್ರ ಮಟ್ಟಕ್ಕಿಂತ 29,031 ಅಡಿ ಎತ್ತರ ಇರುವ ಪರ್ವತದಲ್ಲಿ ಹಿಮಪಾತ ಮತ್ತು ಎತ್ತರದ ತೆಳುವಾದ ಗಾಳಿಯು ಆರೋಹಣಕ್ಕೆ ಸವಾಲು ಒಡ್ಡಲಿವೆ. ಪರ್ವತಾರೋಹಣದಲ್ಲಿ ಅನುಭವ ಇರುವ ನಾವು ಮೌಂಟ್ ಎವರೆಸ್ಟ್ ಏರುವ ಪ್ರಯತ್ನ ಮಾಡಲಿದ್ದೇವೆ. ‘ಮಿಷನ್ ಎವರೆಸ್ಟ್–8848 ಮೀ. ಯಶಸ್ವಿಯಾಗಲಿದೆ’ ಎಂದು ಪರ್ವತಾರೋಹಿಗಳು ಅಭಿಪ್ರಾಯಪಟ್ಟರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ತುಳಸಿ ಮದ್ದಿನೇನಿ, ನಿವೃತ್ತ ಐಎಎಸ್ ಅಧಿಕಾರಿ ಮಂಜುನಾಥ ಪ್ರಸಾದ್ ಎನ್., ಸಂಸ್ಥೆಯ ಕಾರ್ಯದರ್ಶಿ ನಾಗೇಂದ್ರ, ಹಿರಿಯ ಸದಸ್ಯ ಸುಧಾಕರ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ದೇವಾಂಗ ದೇವರದಾಸಿಮಯ್ಯನವರ ಜಯಂತ್ಯುತ್ಸವ: ಆಯೋಜನೆ: ದೇವಾಂಗ ಸಂಘ, ಸ್ಥಳ: ರಾಮಲಿಂಗ ಚೌಡೇಶ್ವರಿ ದೇವಾಲಯ, ದೇವಾಂಗ ಹಾಸ್ಟೆಲ್ ರಸ್ತೆ, ಸಂಪಂಗಿರಾಮನಗರ, ಬೆಳಿಗ್ಗೆ 7ರಿಂದ


ಕಾಕೋಳು ವೇಣುಗೋಪಾಲಸ್ವಾಮಿಯ ಬ್ರಹ್ಮರಥೋತ್ಸವ: ಗರುಡೋತ್ಸವ, ಅಷ್ಟಾವಧಾನ, ಮಂಟಪ್ಪಡಿ, ನಾದಸ್ವರ, ಸ್ಯಾಕ್ಸೋಫೋನ್ ವಾದನ, ಆಯೋಜನೆ ಹಾಗೂ ಸ್ಥಳ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಕಾಕೋಳು ಕ್ಷೇತ್ರ, ರಾಜಾನು ಕುಂಟೆ ಸಮೀಪ, ಯಲಹಂಕ, ಬೆಳಿಗ್ಗೆ 9ರಿಂದ

ಮಾಧ್ಯಮದ ಬಗ್ಗೆ ಕಾರ್ಯಾಗಾರ: ಉದ್ಘಾಟನೆ: ಕೆ.ವಿ. ಪ್ರಭಾಕರ್, ಅತಿಥಿ: ಎಸ್. ರವಿಕುಮಾರ್, ಅಧ್ಯಕ್ಷತೆ: ಪ್ರೊ.ಜಯಕರ ಎಸ್.ಎಂ., ಆಯೋಜನೆ ಹಾಗೂ ಸ್ಥಳ: ವಿದ್ಯುನ್ಮಾನ ಮಾಧ್ಯಮ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30

‘ಕವಿಯಾನ–ಸವಿಗಾನ’ ಮೂರನೇ ವಾರ್ಷಿಕೋತ್ಸವ: ಉದ್ಘಾಟನೆ: ರೇಣುಕುಮಾರ್, ಮೋಹನ್ ಕೃಷ್ಣ, ನಟರಾಜ್ ಶೆಟ್ಟಿಕೆರೆ, ಅತಿಥಿಗಳು: ಎಂ. ಲಕ್ಷ್ಮೀನಾರಾಯಣ, ಬಿ.ಆರ್. ಛಾಯಾ, ಆಯೋಜನೆ: ಕನಸು ಕಲ್ಚರಲ್ ಟ್ರಸ್ಟ್, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಮಧ್ಯಾಹ್ನ 3

ದೇವರ ದಾಸಿಮಯ್ಯ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಜ್ಞಾನಾನಂದಗಿರಿ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ ಗರುಡಾಚಾರ್, ಉಪನ್ಯಾಸ: ಭಾರತಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5

ರಾಷ್ಟ್ರಕವಿ ಎಂ. ಗೋವಿಂದ ಪೈ ಅವರ 144ನೇ ಜನ್ಮದಿನ, ರಾಜ್ಯಮಟ್ಟದ ಕವನ ರಚನಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ: ಹಂಪ ನಾಗರಾಜಯ್ಯ, ಅಧ್ಯಕ್ಷತೆ: ಎ.ಎಸ್. ನಾಗರಾಜಸ್ವಾಮಿ, ಉಪನ್ಯಾಸ: ಡಿ.ಕೆ. ಚಿತ್ತಯ್ಯ ಪೂಜಾರ್, ಅತಿಥಿ: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ಎಂ. ಗೋವಿಂದ ಪೈ

‘ಅಂಬೇಡ್ಕರ್ ಕೊಲಾಜ್’ ನಾಟಕ ಪ್ರದರ್ಶನ: ರಚನೆ: ಕೋಟಿಗಾನಹಳ್ಳಿ ರಾಮಯ್ಯ, ನಿರ್ದೇಶನ: ಚಿದಂಬರ ರಾವ್ ಜಂಬೆ, ತಂಡ: ರಂಗಾಯಣ ಮೈಸೂರು, ಆಯೋಜನೆ: ಬುಡ್ಡಿದೀಪ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 6

ಕರ್ನಾಟಕ ಶಾಸ್ತ್ರೀಯ ಸಂಗೀತ: ಲಾವಣ್ಯ ಕೃಷ್ಣಮೂರ್ತಿ ಮತ್ತು ಸಂಗಡಿಗರು, ಆಯೋಜನೆ: ವೈಯಾಲಿಕಾವಲ್ ಎಕ್ಸ್‌ಟೆನ್ಶನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, 9ನೇ ಮುಖ್ಯರಸ್ತೆ, ವೈಯಾಲಿಕಾವಲ್, ಸಂಜೆ 6.30

ರಾಮನವಮಿ ವಿಶೇಷ



120ನೇ ವರ್ಷದ ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ: ಟಿ.ವಿ. ವೈದ್ಯನಾರಾಯಣ ಪಂಡಿತ್, ಪಿಟೀಲು: ಆರ್. ವರಲಕ್ಷ್ಮಿ, ಮೃದಂಗ: ಕೆ. ಅಭಿಜಿತ್, ದಾಸವಾಣಿ: ರಾಯಚೂರು ಶೇಷಗಿರಿ ದಾಸ್ ಮತ್ತು ತಂಡ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಐದನೇ ಅಡ್ಡ ರಸ್ತೆ, ಮಲ್ಲೇಶ್ವರ, ಸಂಜೆ 5.30

‘ಶ್ರೀಮದ್ ರಾಮಾಯಣ’ ಉಪನ್ಯಾಸ: ವಿದ್ಯಾಸಿಂಧುಮಾಧವ ತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹ ಚಾರಿಟೇಬಲ್ ಟ್ರಸ್ಟ್, ತ್ಯಾಗರಾಜನಗರ, ಸಂಜೆ 6

26ನೇ ಶ್ರೀರಾಮ ನವಮಿ ಸಂಗೀತೋತ್ಸವ: ಗಾಯನ: ಅಂಬಿಕಾ ಶಾಸ್ತ್ರಿ ಮತ್ತು ವೃಂದ, ಆಯೋಜನೆ: ಆಂಜನೇಯ ಮತ್ತು ರಾಘವೇಂದ್ರ ಸ್ವಾಮಿ ದೇವಸ್ಥಾನ, ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ ಫೌಂಡೇಷನ್, ಸ್ಥಳ: ಆಂಜನೇಯ ಮತ್ತು ರಾಘವೇಂದ್ರ ಸ್ವಾಮಿ ದೇವಸ್ಥಾನದ ಆವರಣ, ಎಂಟನೇ ಕ್ರಾಸ್, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಶ್ರೀರಾಮನವಮಿ ಉತ್ಸವ: ಸಮೂಹ ಗಾಯನ: ಶ್ರೀದೇವಿ ಗರ್ತಿಕೆರೆ, ಇಂದಿರಾ ಶರ್ಮಾ, ಎಂ.ಕೆ. ಶ್ರೀದೇವಿ, ಚಾಂದಿನಿ ಗರ್ತಿಕೆರೆ, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..

nagaradalli_indu@prajavani.co.in

ಸಂಕ್ಷಿಪ್ತ ಸುದ್ದಿ

ರಾಮನವಮಿ: ‘ಪುಷ್ಪಯಾಗ’

ಬೆಂಗಳೂರು: ಇದೇ 27ರಂದು ರಾಮನವಮಿಯ ಪ್ರಯುಕ್ತ ತ್ಯಾಗರಾಜನಗರದ ಅಭಯ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ‘ಪುಷ್ಪಯಾಗ’ವನ್ನು ಹಮ್ಮಿಕೊಳ್ಳಲಾಗಿದೆ.

ವಜ್ರಕ್ಷೇತ್ರವೆಂದು ಕರೆಯಲಾಗುವ ಸುಮಾರು 150 ವರ್ಷಗಳಿಗೂ ಹಳೆಯದಾದ ಈ ದೇವಸ್ಥಾನದಲ್ಲಿ ಹಲವು ವರ್ಷಗಳಿಂದ ‘ಪುಷ್ಪಯಾಗ’ ನಡೆಸಿಕೊಂಡು ಬರುತ್ತಿದ್ದು, ಈ ವರ್ಷ ಸುಮಾರು 1,000 ಕೆ.ಜಿ.ಯಷ್ಟು ವಿವಿಧ ಬಗೆಯ ಪುಷ್ಪಗಳಿಂದ ಈ ಯಾಗ ನಡೆಸಲಾಗುತ್ತದೆ ಎಂದು ವಜ್ರಕ್ಷೇತ್ರದ ಟ್ರಸ್ಟಿ ವಾದಿರಾಜ್ ಆಚಾರ್ ಅವರು ತಿಳಿಸಿದ್ದಾರೆ.

‘ಪುಷ್ಪಯಾಗದಲ್ಲಿ ಹೂವುಗಳನ್ನು ಹೋಮದ ಕುಂಡಕ್ಕೆ ಹಾಕುವುದಿಲ್ಲ. ಐದು ಬಗೆಯ ಬಣ್ಣಗಳ ಹೂವಿನ ರಾಶಿಗೆ ಪೂಜೆ, ಅರ್ಚನೆ ಮಾಡಿ ಪಟ್ಟಾಭಿರಾಮನಿಗೆ ಸಮರ್ಪಿಸಲಾಗುವುದು’ ಎಂದು ಅವರು ಹೇಳಿದ್ದಾರೆ. ಶ್ರೀಪಟ್ಟಾಭಿರಾಮ ದೇವಸ್ಥಾನ, #152/1, 7ನೇ ಅಡ್ಡ ರಸ್ತೆ, 3ನೇ ಬ್ಲಾಕ್, ತ್ಯಾಗರಾಜ ನಗರ, ಸಂಪರ್ಕಕ್ಕೆ: 9448850552/ 7019475877

‘ಇಂದ್ರಿಯಾ’ ಮಳಿಗೆ ಆರಂಭ

ಬೆಂಗಳೂರು: ಡಿಕನ್ಸನ್ ರಸ್ತೆಯಲ್ಲಿ ಆದಿತ್ಯ ಬಿರ್ಲಾ ಜ್ಯುವೆಲ್ಲರಿ ‘ಇಂದ್ರಿಯಾ’ ಹೆಸರಿನ ನಾಲ್ಕನೇ ಮಳಿಗೆಯನ್ನು ತೆರೆಯುವ ಮೂಲಕ ತನ್ನ ಬ್ರ್ಯಾಂಡ್‌ನ ಮಾರುಕಟ್ಟೆಯನ್ನು ವಿಸ್ತರಿಸಿದೆ.

ಈ ಸಂದರ್ಭದಲ್ಲಿ ಮಾತನಾಡಿದ, ‘ಇಂದ್ರಿಯಾ’ದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂದೀಪ್ ಕೊಹ್ಲಿ, ‘ಬೆಂಗಳೂರು ನಮಗೆ ಪ್ರಮುಖ ಮಾರುಕಟ್ಟೆಯಾಗಿದೆ. ಇಲ್ಲಿನ ಗ್ರಾಹಕರು ಕಲಾತ್ಮಕವಾದ ಮತ್ತು ವಿವಿಧ ವಿನ್ಯಾಸದ ಆಭರಣಗಳಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ನಾಲ್ಕನೇ ಮಳಿಗೆಯನ್ನು ಆರಂಭಿಸುವ ಮೂಲಕ ನಾವು ಗ್ರಾಹಕರಿಗೆ ಇನ್ನಷ್ಟು ಹತ್ತಿರವಾಗಲು ಮುಂದಾಗಿದ್ದೇವೆ’ ಎಂದರು.

ಆದಿತ್ಯ ಬಿರ್ಲಾ ಜ್ಯುವೆಲ್ಲರಿ ರಾಷ್ಟ್ರ ಮಟ್ಟದಲ್ಲಿ ತನ್ನ ಚಟುವಟಿಕೆಗಳನ್ನು ವಿಸ್ತರಿಸುತ್ತಲೇ ಬಂದಿದೆ. ಬೆಂಗಳೂರು ನಗರದಲ್ಲಿ ಈಗ ನಾಲ್ಕನೇ ಮಳಿಗೆಯನ್ನು ತೆರೆಯುವ ಮೂಲಕ ಇಲ್ಲೂ ತನ್ನ ಜಾಲವನ್ನು ಇನ್ನಷ್ಟು ವಿಸ್ತರಿಸಿದೆ. ದೇಶದ ಪ್ರಮುಖ ಮೆಟ್ರೊಪಾಲಿಟನ್ ನಗರಗಳಲ್ಲಿ ‘ಇಂದ್ರಿಯಾ’ ಮಳಿಗೆಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಇದು ಹೆಮ್ಮೆಯ ವಿಷಯ ಎಂದು ತಿಳಿಸಿದರು.

‘ಸಾಂಪ್ರದಾಯಿಕವಾದ ಆಭರಣಗಳಿಗೆ ನಗರದಲ್ಲಿ ಹೆಚ್ಚಿನ ಬೇಡಿಕೆ ಇದೆ. ಇದರ ಜೊತೆಗೆ ಹೊಸ ವಿನ್ಯಾಸದ ಆಭರಣಗಳಿಗೂ ಆದ್ಯತೆ ನೀಡಲಾಗಿದೆ. 32 ಸಾವಿರಕ್ಕೂ ಹೆಚ್ಚಿನ ಆಭರಣಗಳು ಇಲ್ಲಿ ಲಭ್ಯ ಇವೆ. ಇಲ್ಲಿಗೆ ಭೇಟಿ ನೀಡುವ ಗ್ರಾಹಕರು ವಿಶಿಷ್ಟ ರೀತಿಯ ಅನುಭವ ಪಡೆಯಲಿದ್ದಾರೆ. ನಮ್ಮ ಬ್ರ್ಯಾಂಡ್‌ನ ಉತ್ಪನ್ನಗಳು ಗ್ರಾಹಕರನ್ನು ಸೆಳೆಯಲಿವೆ’ ಎಂದರು.

ಹೈದರಾಬಾದ್ ರೇಸ್

ಪೈರೈಟ್ ಗೆಲ್ಲುವ ನಿರೀಕ್ಷೆ

ಗೋಲ್ಕಂಡ ಸೆಂಟ್ ಲೆಗೆರ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪೈರೈಟ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಕ್ವಾಟೋನ್ 3, ಸಿಪ್ರೆಸ್ 4, ಶೂಟಿಂಗ್ ಸ್ಟಾರ್ 2
2ನೇ ರೇಸ್: ಯಾಲಿ 5, ಕ್ವಾಟ್ರೊ 10, ತ್ರಿಷಿಕ 11
3ನೇ ರೇಸ್: ರಾಕ್ಸೇನ್ 3, ಕ್ಲಾರಿಟಿ 4, ಬ್ರಿಯರ್ ರಿಡ್ಜ್ 1
4ನೇ ರೇಸ್: ಶರಂಗ 6, ಎನ್‌ಆರ್‌ಐ ಪವರ್ 2, ದುಬಾಯ್ ಟಚ್ 1
5ನೇ ರೇಸ್: ಪೈರೈಟ್ 5, ಸ್ಟಾರ್ ಆಫ್ ನೈಟ್ 6, ಡಿಫ್ 1
6ನೇ ರೇಸ್: ನೈಟ್ ರಿಜೆಂಟ್ 4, ಲೈಫ್ಸ್ ಜರ್ನಿ 6, ಗ್ಲೋರಿಯಾ 2
7ನೇ ರೇಸ್: ಇಲೀನ್ 7, ಜಿನೀ 2, ಟೇಕ್ ಎ ಬ್ರೆತ್ 1

ಉತ್ತಮ ಬೆಟ್: ಯಾಲಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

25 ಸಾವಿರ ಮನೆಗೆ ಪಿಎನ್‌ಜಿ

ಅನುಮೋದನೆ ನೀಡಿದ ಸರ್ಕಾರ
ಎಲ್‌ಪಿಜಿ ಸಮಸ್ಯೆ ನೀಗಿಸುವ ಪ್ರಯತ್ನ

• ನವೀನ್ ಮಿನೇಜಸ್

ಬೆಂಗಳೂರು: ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯಾಗಿರುವ ಕಾರಣ ನಗರದಲ್ಲಿ ಕೊಳವೆ ಮೂಲಕ ಅನಿಲ (ಪಿಎನ್‌ಜಿ) ಪೂರೈಸುವ ಸಂಪರ್ಕವನ್ನು ವಿಸ್ತರಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ನಾಲ್ಕು ಪಾಲಿಕೆಗಳ ವ್ಯಾಪ್ತಿಯಲ್ಲಿ 25 ಸಾವಿರಕ್ಕೂ ಹೆಚ್ಚು ಮನೆಗಳು ಮತ್ತು 69 ಸಂಸ್ಥೆಗಳಿಗೆ ಪಿಎನ್‌ಜಿ ಪೂರೈಸುವ ಗುರಿ ಹೊಂದಲಾಗಿದೆ.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಮಾರ್ಚ್ 17ರಂದು ಜಿಬಿಎಗೆ ಪತ್ರ ಬರೆದಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಐದು ಪಾಲಿಕೆಗಳ ಪೈಕಿ ನಾಲ್ಕರಲ್ಲಿ ಗೇಲ್ (ಜಿಎಐಎಲ್) ಜಾಲ ವಿಸ್ತರಣೆಗೆ 'ಆದ್ಯತೆ ಮತ್ತು ತುರ್ತು ಆಧಾರದ ಮೇಲೆ' ರಸ್ತೆ ಕತ್ತರಿಸಲು ಅನುಮತಿ ನೀಡುವಂತೆ ಸೂಚಿಸಿದ್ದಾರೆ. ಅಲ್ಲದೆ, ಏಜೆನ್ಸಿಯಿಂದ



ಪೈಪ್ಡ್ ನ್ಯಾಚುರಲ್ ಗ್ಯಾಸ್ (ಸಾಂದರ್ಭಿಕ ಚಿತ್ರ)

₹50 ಲಕ್ಷದ ಬ್ಯಾಂಕ್ ಖಾತರಿ ಪಡೆದು-ಕೊಳ್ಳುವಂತೆ ಸಲಹೆ ನೀಡಿದ್ದಾರೆ.

ಒಂದು ವರ್ಷದಿಂದ ರಸ್ತೆ ಕತ್ತರಿಸುವ ಸಂಬಂಧ ಯಾವುದೇ ಅರ್ಜಿಗಳನ್ನು ಜಿಬಿಎ ಅಥವಾ ಪಾಲಿಕೆಗಳು ಸ್ವೀಕರಿಸುವುದನ್ನು ನಿಲ್ಲಿಸಿದ್ದವು. ಈಗ ಮುಖ್ಯಕಾರ್ಯದರ್ಶಿ ಅವರೇ ಪತ್ರ ಬರೆದಿರುವುದರಿಂದ ಅನುಮತಿ ನೀಡಬೇಕಾಗುತ್ತದೆ. ಈ ಯೋಜನೆಯಡಿ ಪೈಪ್‌ಲೈನ್ ಹಾಕಲು ರಸ್ತೆ ಅಗೆಯ ಬೇಕಾಗಿರುವುದರಿಂದ ವಾಹನ ಚಾಲಕ ರಿಗೆ ಕಿರಿಕಿರಿ ಉಂಟಾಗುವ ಸಾಧ್ಯತೆಯಿದೆ.

ಬೆಂಗಳೂರು ದಕ್ಷಿಣ, ಉತ್ತರ, ಪೂರ್ವ ಮತ್ತು ಪಶ್ಚಿಮ ಪಾಲಿಕೆಗಳಲ್ಲಿ ರಸ್ತೆ ಕತ್ತರಿಸಲು ಅನುಮತಿ ನೀಡುವಂತೆ ಉಲ್ಲೇಖಿಸಲಾಗಿದೆ. ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಗೆ ಬರುವ ಯಾವುದೇ ಅಪಾರ್ಟ್‌ಮೆಂಟ್, ಸಂಕೀರ್ಣ ಅಥವಾ ವಾಣಿಜ್ಯ ಕಟ್ಟಡ ಗಳನ್ನು ಗುರುತಿಸಲಾಗಿಲ್ಲ.

ಬೇಡಿಕೆ ಹೆಚ್ಚಿರುವ ನಗರದ ಹೊರವಲಯದಲ್ಲಿರುವ ದೊಡ್ಡ ವಸತಿ ಸಮೂಹಗಳಿಗೆ ಪಿಎನ್‌ಜಿ ಪೂರೈಸಲು ಗೇಲ್ ಪ್ರಸ್ತಾಪಿಸಿದೆ. ಸಲಾಪುರಿಯಾ ಲಾರೆಲ್ ಹೈಟ್ಸ್, ವೈಷ್ಣವಿ ಗಾರ್ಡೇನಿಯಾ, ಶಾಂತಿನಿಕೇತನ್, ಬಲ್ಡೋಟಾ ಸೆರೆನಿಟಿ, ಜೆಆರ್‌ಸಿ ವೈಲ್ಡ್‌ವುಡ್ಸ್, ವಾಲ್‌ಮಾರ್ಕ್ ಅಪಾಸ್, ಶೋಭಾ ಇಂದ್ರಪ್ರಸ್ಥ, ಪ್ರೆಸ್ಟೀಜ್ ಜಿಂದಾಲ್ ಸಿಟಿ, ಪ್ರೆಸ್ಟೀಜ್ ಬಾಗ್ಮನೆ ಟೆಂಪಲ್ ಬೆಲ್ಸ್, ಶೋಭಾ ಓಯಸಿಸ್ ಸೇರಿವೆ.

ಇದಲ್ಲದೆ, ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು ಮತ್ತು ಕೆಫೆಗಳು ಸೇರಿದಂತೆ 69 ವಾಣಿಜ್ಯ ಸಂಸ್ಥೆಗಳನ್ನು ನಕ್ಷೆ ಮಾಡಲಾಗಿದೆ. ಇವುಗಳ ಒಟ್ಟು ಎಲ್‌ಪಿಜಿ ಬಳಕೆ ದಿನಕ್ಕೆ 6,561 ಕೆ.ಜಿ.ಯಾಗಿದೆ. ಇವುಗಳಲ್ಲಿ ಹಲವು ಸರ್ಜಾಪುರ ಮುಖ್ಯ ರಸ್ತೆ, ಎಚ್‌ಎಸ್‌ಆರ್ ಲೇಔಟ್, ಜೆ.ಪಿ. ನಗರ, ಮಲ್ಲೇಶ್ವರ ಮತ್ತು ಯಲಹಂಕದಂತಹ ಪ್ರಮುಖ ಪ್ರದೇಶಗಳಲ್ಲಿವೆ.

ರಸ್ತೆಯಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಸಿದ ಬಳಿಕ ರಸ್ತೆಯನ್ನು ಮೊದಲಿನ ಸ್ಥಿತಿಗೆ ತರುವುದು ಗೇಲ್ ಸಂಸ್ಥೆಯ ಜವಾಬ್ದಾರಿಯಾಗಿದೆ.

ಕಳೆದ ವರ್ಷ, ರಾಜ್ಯ ಸರ್ಕಾರವು ನಗರದಲ್ಲಿ ಅನಿಲ ವಿತರಣೆಯ ಹೊಸ ನೀತಿಯನ್ನು ಅನುಮೋದಿಸಿತ್ತು. ಇದು ಪೈಪ್‌ಲೈನ್ ಅಳವಡಿಕೆ ಶುಲ್ಕವನ್ನು ಮೀಟರ್‌ಗೆ ₹1,957ರಿಂದ ಕೇವಲ ₹1ಕ್ಕೆ ಇಳಿಸಿತ್ತು. ರಸ್ತೆಗಳ ಅಭಿವೃದ್ಧಿಗೆ ತಗುಲುವ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳದ ಕಾರಣ ಈ ನೀತಿಯು ನಗರ ಪಾಲಿಕೆಗಳಿಗೆ ಆರ್ಥಿಕವಾಗಿ ಹೊರೆಯಾಗಲಿದೆ.

'ಈಗಿನವು ನಿಜ ವಚನಗಳಲ್ಲ'

ಸುಭಾಷ್ಚಂದ್ರ ಪಾಟೀಲ ಟ್ರಸ್ಟ್‌ನಿಂದ ಬಸವ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: '15ನೇ ಶತಮಾನದ ನಂತರ ಬಂದ ವಚನಗಳು ಛಾಯಾ ರಚನೆಯೇ ಹೊರತು ಅವು ನಿಜ ವಚನಗಳಲ್ಲ' ಎಂದು ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ ಹೇಳಿದರು.

ಕಲಬುರಗಿ ಜಿಲ್ಲೆ ಪಾಳಾದ ಸುಭಾಷ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಸವ ಪ್ರಶಸ್ತಿಯನ್ನು ಸ್ವೀಕರಿಸಿ ಅವರು ಮಾತನಾಡಿದರು.

'12ನೇ ಶತಮಾನದ ಶರಣ ಚಳವಳಿ, ಆಗ ಮೂಡಿ ಬಂದ ವಚನಗಳೇ ನಿಜವಾದವು. ಚಾತುರ್ವಣ್ಯದ ಶಾಪಮುಕ್ತಿಯ ಆಶಯದೊಂದಿಗೆ ವಚನಗಳು ಒಡಮೂಡಿದವು. ಆಗ ಬಸವಪ್ರಜ್ಞೆಯನ್ನು ಮಹಾಮನೆ ಹುಟ್ಟುಹಾಕಿತು. ತಮ್ಮ ಮನೆಯನ್ನೇ ಅನುಭವ ಮಂಟಪ ಮಾಡಿಕೊಂಡವರು ಶರಣರು' ಎಂದು ತಿಳಿಸಿದರು.

'ನನಗಿಂತ ವಚನಗಳ ಮೇಲೆ ನಿಖರವಾಗಿ ಕೆಲಸ ಮಾಡಿರುವ ಸಾಹಿತಿ ಜಿ.ಎಸ್.ಸಿದ್ದಲಿಂಗಯ್ಯ ಅವರಿಗೆ ಬಸವ ಪ್ರಶಸ್ತಿ ನೀಡಿದ್ದರೆ ಹೆಚ್ಚು ಅರ್ಥಪೂರ್ಣವಾಗುತ್ತಿತ್ತು. ಆದರೆ ಸಂಸ್ಥೆಯವರ ಪ್ರೀತಿಯ ಒತ್ತಾಯಕ್ಕೆ ಮಣಿದು ಈ ಬಾರಿ ಪ್ರಶಸ್ತಿ ಸ್ವೀಕರಿಸುವೆ' ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಬಿ.ಆರ್.ಪಾಟೀಲ ಮಾತನಾಡಿ, 'ಸಮಾಜದಲ್ಲಿ ಎಷ್ಟೇ ಬದಲಾವಣೆ



ಬೆಂಗಳೂರಿನ ಗಾಂಧಿಭವನದಲ್ಲಿ ಕಲಬುರಗಿ ಪಾಳಾದ ಸುಭಾಷ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್‌.ಜಿ. ಸಿದ್ದರಾಮಯ್ಯ ಅವರಿಗೆ 'ಬಸವ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಸಿದ್ದರಾಮಯ್ಯ ಅವರ ಪತ್ನಿ ಪ್ರೇಮಲೀಲ, ಜಯಶ್ರೀ ವೀರಣ್ಣ ದಂಡೆ, ಬಿ.ಆರ್. ಪಾಟೀಲ, ವೂಡೇ ಪಿ. ಕೃಷ್ಣ, ಮಹಾಂತ ಸ್ವಾಮೀಜಿ, ಶರಣಗೌಡ ಪಾಟೀಲ ಪಾಳಾ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಆಗಿದೆ ಅಂದುಕೊಂಡರೂ ಈಗಲೂ ಕಂದಾಚಾರ, ಮೂಢನಂಬಿಕೆ ದೂರವಾಗಿಲ್ಲ. ಭೇದ-ಭಾವಗಳು ಇನ್ನೂ ಇವೆ. ವಿಚಾರವಂತಿಕೆಯ ಮೂಲಕವೇ ಕಲ್ಯಾಣ ಕರ್ನಾಟಕದ ನಾಡನ್ನು ಕಟ್ಟಲು ಶ್ರಮಿಸೋಣ' ಎಂದು ಸಲಹೆ ನೀಡಿದರು.

ತಿಮ್ಮಾಪುರದ ಮುದಗಲ್ಲ ಕಲ್ಯಾಣಾಶ್ರಮದ ಮಹಾಂತ ಸ್ವಾಮೀಜಿ ಮಾತನಾಡಿ, 'ಜಗತ್ತಿನಲ್ಲಿ ಯುದ್ಧದ ಸಂಘರ್ಷದಿಂದ ಅಶಾಂತಿ ನೆಲಸಿದೆ. ಬಸವಣ್ಣನವರ ವಿಚಾರಧಾರೆ, ಶರಣರ ಪ್ರಜ್ಞೆಯಿಂದ ಸಂಘರ್ಷ ತಪ್ಪಿಸಬಹುದು' ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಪ್ರಜಾವಾಣಿ 'ಅಭಿಮತ'ದ ಸಂಪಾದಕ ರಘುನಾಥ ಚ.ಹ., ಚಿಂತಕಿ ಜಯಶ್ರೀ ವೀರಣ್ಣ ದಂಡೆ, ಲೇಖಕ ರುದ್ರೇಶ್ ಅದರಂಗಿ, ಟ್ರಸ್ಟ್ ಅಧ್ಯಕ್ಷ ಶರಣಗೌಡ ಪಾಟೀಲ ಪಾಳಾ, ಕಾರ್ಯದರ್ಶಿ ಈರಮ್ಮ ಪಾಟೀಲ, ಆನಂದ ಪಾಟೀಲ ಸಿದ್ದಾಮಣಿ, ವೀರಶೆಟ್ಟಿ ಗಾರಂಪಳ್ಳಿ ಉಪಸ್ಥಿತರಿದ್ದರು.

ಸರಣಿ ಪ್ರತಿಭಟನೆ ಸಂಚಾರ ಮಾರ್ಪಾಡು

ಬೆಂಗಳೂರು: ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರದಿಂದ ಇದೇ 25ರವರೆಗೆ ವಿವಿಧ ಸಂಘಟನೆಗಳು ಪ್ರತಿಭಟನೆ ಹಮ್ಮಿಕೊಂಡಿರುವ ಕಾರಣ ಸಂಚಾರ ಮಾರ್ಗದಲ್ಲಿ ಮಾರ್ಪಾಡು ಮಾಡಲಾಗಿದೆ.

ಸಂಚಾರ ನಿರ್ಬಂಧ: ಶಾಂತಲಾ ಜಂಕ್ಷನ್ ಮತ್ತು ಖೋಡೆ ಸರ್ಕಲ್‌ನಿಂದ ಆನಂದರಾವ್ ಮೇಲ್ಸೇತುವೆ, ಹಳೆ ಜೆಡಿಎಸ್ ಕ್ರಾಸ್, ಶೇಷಾದ್ರಿ ರಸ್ತೆಯಿಂದ ಸ್ವಾತಂತ್ರ್ಯ ಉದ್ಯಾನದವರೆಗೆ

ಪರ್ಯಾಯ ಮಾರ್ಗ: ಲುಲು ಮಾಲ್, ಕೆಎಫ್‌ಎಂ, ರಾಜೀವ್ ಗಾಂಧಿ ಸರ್ಕಲ್, ಮಂತ್ರಿ ಮಾಲ್, ಸ್ವಸ್ತಿಕ್ ಸರ್ಕಲ್, ಶೇಷಾದ್ರಿಪುರಂ, ನೆಹರೂ ಸರ್ಕಲ್, ರೇಸ್ ಕೋರ್ಸ್ ಮೇಲ್ಸೇತುವೆ, ರೇಸ್ ಕೋರ್ಸ್ ರಸ್ತೆ.

ಮೈಸೂರು ಬ್ಯಾಂಕ್ ಕಡೆಯಿಂದ ಚಾಲುಕ್ಯ ಸರ್ಕಲ್ ಕಡೆಗೆ ಕೆ.ಜಿ. ರಸ್ತೆ, ಮೈಸೂರು ಬ್ಯಾಂಕ್ ಜಂಕ್ಷನ್, ಸಾಗರ್ ಜಂಕ್ಷನ್, ಕೆ.ಜಿ.ಜಂಕ್ಷನ್, ಟಿಬಿ ರಸ್ತೆ, ರಾಜೀವ್ ಗಾಂಧಿ ಸರ್ಕಲ್, ಸ್ವಸ್ತಿಕ್, ರೇಸ್ ಕೋರ್ಸ್ ಮೇಲ್ಸೇತುವೆ ರಸ್ತೆ ಮೂಲಕ ಸಂಚರಿಸಬೇಕು.

ಚಾಲುಕ್ಯ ಸರ್ಕಲ್‌ನಿಂದ ಮೈಸೂರು ಬ್ಯಾಂಕ್ ಕಡೆಗೆ, ರಾಜಭವನ ರಸ್ತೆ, ಇನ್‌ಫೆಂಟ್ರಿ ರಸ್ತೆ, ಇಂಡಿಯನ್ ಎಕ್ಸ್‌ಪ್ರೆಸ್‌ನಿಂದ ತೆರಳಬಹುದು.

ಕಾಳಿದಾಸ ರಸ್ತೆ ಕನಕದಾಸ ಜಂಕ್ಷನ್ ಕಡೆಯಿಂದ ಫ್ರೀಡಂ ಪಾರ್ಕ್ ಕಡೆಗೆ ಹಾಗೂ ಸುಬ್ಬಣ್ಣ ಜಂಕ್ಷನ್‌ನಿಂದ ಬಲ ತಿರುವು ಪಡೆದು ಆನಂದ್ ರಾವ್ ಸರ್ಕಲ್ ಕಡೆಗೆ ಸಾಗಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

ರಸ್ತೆಯಲ್ಲಿ ಕಸ



ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದ ಅರೆಕೆಂಪನಹಳ್ಳಿಯ ಸಿ ಕ್ರಾಸ್ ರಸ್ತೆ ತುಂಬ ಕಸ ಆವರಿಸಿಕೊಂಡಿದೆ. ಇಲ್ಲಿ ಕಸವನ್ನು ನಿಯಮಿತವಾಗಿ ವಿಲೇವಾರಿ ಮಾಡದ ಪರಿಣಾಮ, ಕಸ ಎಲ್ಲೆಂದರಲ್ಲಿ ಬಿದ್ದು ಚೆಲ್ಲಾಪಿಲ್ಲಿಯಾಗಿದೆ. ಕೆಲವರು ಇಲ್ಲಿ ಹಸಿ ಹಾಗೂ ಒಣ ಕಸವನ್ನು ಎಸೆಯುತ್ತಿದ್ದು, ವಾಸನೆಯಿಂದ ಸ್ಥಳೀಯರು ಸಮಸ್ಯೆ ಎದುರಿಸುತ್ತಿದ್ದಾರೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ಕಸ ವಿಲೇವಾರಿಗೆ ಕ್ರಮವಹಿಸಬೇಕು.

ಅರೆಕೆಂಪನಹಳ್ಳಿ ನಿವಾಸಿಗಳು

'ರಸ್ತೆಯುದ್ದಕ್ಕೂ ಗುಂಡಿಗಳು'

ಇಟ್ಟಮಡು ಮುಖ್ಯರಸ್ತೆಯಿಂದ ಸಪ್ತಗಿರಿ ಲೇಔಟ್ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಮಾರ್ಸ್ ಮೌಂಟ್ ಅಪಾರ್ಟ್‌ಮೆಂಟ್ ಸಮುಚ್ಚಯದಿಂದ ದಿ ಪ್ರೊಮೊಂಟ್ ಟಾಟಾ ಹೌಸಿಂಗ್ ಅಪಾರ್ಟ್‌ಮೆಂಟ್ ಸಮುಚ್ಚಯದವರೆಗೂ ಎಲ್ಲೆಂದರಲ್ಲಿ



ಗುಂಡಿಗಳಿದ್ದು, ಇದನ್ನು ತಪ್ಪಿಸಲು ದ್ವಿಚಕ್ರ ವಾಹನ ಸವಾರರು ಹರಸಾಹಸ ಪಡಬೇಕಾಗಿದೆ. ರಸ್ತೆಯ ಒಂದು ಭಾಗದಲ್ಲಿ ಕೆಲ ದಿನಗಳಿಂದ ವಾಹನಗಳನ್ನು ನಿಲ್ಲಿಸಲಾಗುತ್ತಿದೆ. ಇದರಿಂದ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ರಸ್ತೆಯಲ್ಲಿ ವಾಹನ ನಿಲ್ಲಿಸದಂತೆ ಹಾಗೂ ಗುಂಡಿಗಳನ್ನು ಮುಚ್ಚಲು ಜಿಬಿಎ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು.

ಮಂಜುನಾಥ್
ವಾಹನ ಸವಾರ

ಬಾಯಿ ತೆರೆದ ಒಳಚರಂಡಿ



ಗೋವಿಂದರಾಜನಗರ ವಾರ್ಡ್‌ನ ಪಿ. ಎಫ್.ಲೇಔಟ್‌ನ (ವಿಜಯನಗರ) 20ನೇ ಮುಖ್ಯರಸ್ತೆಯಲ್ಲಿ ಒಳಚರಂಡಿಗೆ ಹಾನಿಯಾಗಿದ್ದು, ತ್ಯಾಜ್ಯ ನೀರಿನ ವಾಸನೆ ಸುತ್ತಮುತ್ತ ಆವರಿಸಿ ಕೊಂಡಿದೆ. ಸಮೀಪದಲ್ಲೇ ಇರುವ ಚಹಾ ಅಂಗಡಿ ಮತ್ತು ಅಧ್ಯಯನ ಕೇಂದ್ರದಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಹತ್ತಿರದಲ್ಲೇ ಇರುವ ಹೋಟೆಲ್‌ನಲ್ಲಿ ಆಹಾರ ಸೇವಿಸುವುದಕ್ಕೂ ಕಷ್ಟವಾಗುತ್ತಿದ್ದು, ಅನಾರೋಗ್ಯದ ಅಪಾಯ ಎದುರಾಗಿದೆ. ಈ ಬಗ್ಗೆ ಜಿಬಿಎ ಅಧಿಕಾರಿಗಳ ಗಮನಕ್ಕೆ ತಂದರೂ ಕ್ರಮ ಕೈಗೊಂಡಿಲ್ಲ. ಸುತ್ತಮುತ್ತಲಿನ ಜನರು ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದು, ಅಪಾಯ ಸಂಭವಿಸುವ ಮೊದಲು ಕ್ರಮ ಕೈಗೊಳ್ಳಬೇಕು.

ಶ್ರೀಧರ್ ಬಿ.ಎಂ.,
ಅಧ್ಯಯನ ಕೇಂದ್ರದ ವಿದ್ಯಾರ್ಥಿ

ಕಸ ತೆರವುಗೊಳಿಸಿ



ಬಸವನಗುಡಿಯ ರಾಮಕೃಷ್ಣ ಮಠದ ಎದುರಿನಲ್ಲಿರುವ ಬಿಎಂಟಿಸಿ ಬಸ್ ನಿಲ್ದಾಣದ ಪಕ್ಕದಲ್ಲಿ ಮರವೊಂದರ ಬುಡದಲ್ಲಿ ತರಗೆಲೆ ಸೇರಿ ಒಣಕಸದ ರಾಶಿ ಬಿದ್ದಿದೆ. ಇಲ್ಲಿನ ಕಸವನ್ನು ತೆರವುಗೊಳಿಸದ ಕಾರಣ, ದಿನದಿಂದ ದಿನಕ್ಕೆ ಈ ಕಸದ ರಾಶಿ ಬೆಳೆಯುತ್ತಿದೆ. ಪ್ಲಾಸ್ಟಿಕ್ ಕವರ್, ಲೋಟಗಳನ್ನೂ ಇಲ್ಲಿ ಎಸೆಯಲಾಗುತ್ತಿದೆ. ಗಾಳಿ ಬೀಸಿದಾಗ ಈ ಕಸ ರಸ್ತೆಗೂ ವ್ಯಾಪಿಸಿಕೊಳ್ಳುತ್ತಿದೆ. ಆದ್ದರಿಂದ ಇಲ್ಲಿ ಕಸ ಹಾಕದಂತೆ ಹಾಗೂ ಈಗ ಇರುವ ಕಸವನ್ನು ತುರ್ತಾಗಿ ವಿಲೇವಾರಿ ಮಾಡಲು ಜಿಬಿಎ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಬೈರಮಂಗಲ ರಾಮೇಗೌಡ, ಪುಷ್ಪಗಿರಿನಗರ

ಮರದ ತುಂಡು ಸ್ಥಳಾಂತರಿಸಿ



ಹನುಮಂತನಗರದ ಭಾರತ್ ಮಾತಾ ಶಾಲೆಯ ಕಾಂಪೌಂಡಿನ ಮುಂದೆ ಹಲವು ದಿನಗಳಿಂದ ಮರದ ತುಂಡುಗಳಿವೆ. ಪಾದಚಾರಿ ಮಾರ್ಗದಲ್ಲಿ ಇರುವ ಈ ತುಂಡುಗಳು ಜನರ ಓಡಾಟಕ್ಕೆ ಅಡ್ಡಿಪಡಿಸುತ್ತಿವೆ. ಸಂಬಂಧಪಟ್ಟವರು ಈ ಮರದ ತುಂಡುಗಳನ್ನು ಬೇರೆಡೆಗೆ ಸ್ಥಳಾಂತರಿಸಿ, ಪಾದಚಾರಿ ಮಾರ್ಗವನ್ನು ಜನರ ಓಡಾಟಕ್ಕೆ ಮುಕ್ತಗೊಳಿಸಬೇಕು.

ಕೆ.ಎಸ್.ನಾಗರಾಜ್,
ಹನುಮಂತನಗರದ ಮೂರನೇ ಅಡ್ಡರಸ್ತೆ

ದಲಿತ ಸಾಹಿತ್ಯ: ದೊಡ್ಡ ಇತಿಹಾಸ

‘ಕನ್ನಡ ಸಾಹಿತ್ಯದಲ್ಲಿ ದಲಿತ ಪ್ರಜ್ಞೆ’ ಉಪನ್ಯಾಸದಲ್ಲಿ ಮುಕುಂದರಾಜ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮೂಲ ನಿವಾಸಿಗಳ ಸಾಹಿತ್ಯಕ್ಕೆ ಆರಂಭದಲ್ಲಿ ಸಿಗದ ಮಾನ್ಯತೆ
- ಜನಪದವು ಈ ನೆಲದ ಮೂಲನಿವಾಸಿಗಳ ಶಕ್ತಿ: ಮುಕುಂದರಾಜ್

ಬೆಂಗಳೂರು: ‘ದಲಿತ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸ ಇದೆ. ಆದರೆ ನಾವು ಐವತ್ತು ವರ್ಷಗಳನ್ನಷ್ಟೇ ಹೇಳುತ್ತಿದ್ದೇವೆ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಬೇಸರ ವ್ಯಕ್ತಪಡಿಸಿದರು.

ದಲಿತ ಸಾಹಿತ್ಯ ಪರಿಷತ್ತು ಬೆಂಗಳೂರು ನಗರ ಜಿಲ್ಲಾ ಸಮಿತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಭಾನುವಾರ ಹಮ್ಮಿಕೊಂಡಿದ್ದ ‘ಕನ್ನಡ ಸಾಹಿತ್ಯದಲ್ಲಿ ದಲಿತ ಪ್ರಜ್ಞೆ’ ಉಪನ್ಯಾಸ, ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಮೂಲನಿವಾಸಿಗಳ ಮೌಖಿಕ ಸಾಹಿತ್ಯವನ್ನು ಮಾನವರ ಸಾಹಿತ್ಯವಲ್ಲ ಎಂದು ಮೇಲೆ ಕುಳಿತ ಶಿಷ್ಟರು ತೀರ್ಮಾನಿಸಿದ್ದರಿಂದ ಈ ಸಾಹಿತ್ಯಗಳಿಗೆ ಮಾನ್ಯತೆ ಸಿಗಲಿಲ್ಲ. ಸಿದ್ಧಲಿಂಗಯ್ಯ, ದೇವನೂರ ಮಹದೇವ ಅಂತಹವರು ಬರೆಯುವುದಕ್ಕೆ ಶುರು ಮಾಡಿದ ಮೇಲಿನದ್ದಷ್ಟೇ ದಲಿತ ಸಾಹಿತ್ಯ ಎಂದು ತಿಳಿದುಕೊಂಡಿದ್ದೇವೆ’ ಎಂದು ಹೇಳಿದರು.

ದಲಿತ ಸಂಗೀತದಲ್ಲಿರುವ ಲಯ ವಿನ್ಯಾಸ, ಸ್ವರ ವಿನ್ಯಾಸಗಳು ಯಾವ ಶಿಷ್ಟ ಸಂಗೀತಗಳಲ್ಲೂ ಇಲ್ಲ. ಶಿಷ್ಟ ಸಂಗೀತದಲ್ಲಿ ಏಳು ಸ್ವರಗಳಿದ್ದರೆ, ದಲಿತರಿಗೆ 70 ಸ್ವರಗಳಿವೆ. ಅಷ್ಟರ ಮಟ್ಟಿಗೆ ವಿವಿಧ ವಿನ್ಯಾಸಗಳಲ್ಲಿ ದಲಿತ ಸಾಹಿತ್ಯ ಮುಂದುವರಿದಿದೆ. ಜನಪದವು ಈ ನೆಲದ ಮೂಲನಿವಾಸಿಗಳ ಶಕ್ತಿ ಎಂದರು.

ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಸುಬ್ಬು ಹೊಲೆಯಾರ್ ಮಾತನಾಡಿ, ‘ಪ್ರಸ್ತುತ ದಲಿತ ಸಾಹಿತ್ಯವನ್ನು ಬಿಟ್ಟು ಭಾರತೀಯ ಸಾಹಿತ್ಯದ ಬಗ್ಗೆ ಮಾತನಾಡಲು ಸಾಧ್ಯವಿಲ್ಲದಷ್ಟು ಅಗಾಧವಾಗಿ ದಲಿತ ಸಾಹಿತ್ಯ ದೇಶದಲ್ಲಿ ತುಂಬಿಹೋಗಿದೆ. ವರ್ತಮಾನಕ್ಕೆ ಸ್ಪಂದಿಸುವ ಸಾಹಿತ್ಯ ದಲಿತ ಸಾಹಿತ್ಯ. ಎಲ್ಲ ನೊಂದವರ ಪರವಾದ ಧ್ವನಿಯಾಗಿ ಈ ಸಾಹಿತ್ಯ ಮತ್ತು ದಲಿತ ಚಳವಳಿ ಇದೆ’ ಎಂದು ಹೇಳಿದರು.

ಕನ್ನಡ ಉಪನ್ಯಾಸಕಿ ಹಾಜಿರಾ ಖಾನಂ ಉಪನ್ಯಾಸ ನೀಡಿದರು. ದಲಿತ ಸಾಹಿತ್ಯ ಪರಿಷತ್ತು ಬೆಂಗಳೂರು ಜಿಲ್ಲೆ ಅಧ್ಯಕ್ಷ ಗೌಡಗೆರೆ ಮಾಯುಶ್ರೀ ಆಶಯ ನುಡಿಗಳನ್ನಾಡಿದರು. ವಾಣಿಜ್ಯ ತೆರಿಗೆ ಅಧಿಕಾರಿ ಗೋಪಾಲಕೃಷ್ಣ, ರಕ್ಷಣಾ ವೇದಿಕೆಯ ಮಂಜುಳಾ ಉಪಸ್ಥಿತರಿದ್ದರು.



ದಲಿತ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗೌಡಗೆರೆ ಮಾಯುಶ್ರೀ, ಹಾಜಿರಾ ಖಾನಂ, ಎಲ್.ಎನ್. ಮುಕುಂದರಾಜ್, ಮಾವಳ್ಳಿ ಶಂಕರ್ ಅವರು ಬುದ್ಧ, ಬಸವಣ್ಣ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು ಪ್ರಜಾವಾಣಿ ಚಿತ್ರ

‘ವೈದಿಕಶಾಹಿಯ ಹಿಡಿತದಲ್ಲಿ ಒಳಮೀಸಲಾತಿ’

ಒಳಮೀಸಲಾತಿ ವಿಚಾರವು ದಲಿತರ ಕೈತಪ್ಪಿ ಹೋಗಿದ್ದು, ವೈದಿಕಶಾಹಿಗಳ ಹಿಡಿತದಲ್ಲಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ತಿಳಿಸಿದರು.

‘ನಾವು ಹಂಚಿಕೊಂಡು ತಿನ್ನುತ್ತೇವೆ. ಪರಿಶಿಷ್ಟ ಜಾತಿಯ ಎಲ್ಲ 101 ಜಾತಿಗಳಿಗೂ ಮೀಸಲಾತಿ ಸೌಲಭ್ಯ ಸಿಗಬೇಕು. ಆದರೆ, ಒಳಮೀಸಲಾತಿ ವಿಚಾರವನ್ನು ಇಟ್ಟುಕೊಂಡು ನಮ್ಮನ್ನು ಒಡೆಯುವ ಕೆಲಸವನ್ನು ಮಾಡಲಾಗುತ್ತಿದೆ. ಆರ್‌ಎಸ್‌ಎಸ್‌ನ ವ್ಯಕ್ತಿಯೊಬ್ಬರು ಒಳಮೀಸಲಾತಿ ವಿಚಾರವನ್ನು ನಿಯಂತ್ರಿಸುತ್ತಿದ್ದಾರೆ’ ಎಂದು ಆರೋಪಿಸಿದರು.

ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ಎಚ್.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ ಸಹಿತ ಸಮುದಾಯದ ಎಲ್ಲ ಸಚಿವರು, ಶಾಸಕರು ಕುಳಿತು ಒಮ್ಮತಕ್ಕೆ ಬರಬೇಕು. ಸಮುದಾಯದ ಹೋರಾಟಗಾರರು, ಚಿಂತಕರನ್ನು ಕರೆಸಿ ಒಗ್ಗೂಡಿಸಿ ಒಳಮೀಸಲಾತಿ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಮನವಿ ಮಾಡಿದರು.

ಗೋಶಾಲೆಯ ಹುಲ್ಲಿಗೆ ಬೆಂಕಿ

₹2 ಕೋಟಿಗೂ ಹೆಚ್ಚು ನಷ್ಟ–ದೂರು ದಾಖಲಿಸಿದ ಸಂಸ್ಥಾಪಕ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಹೊಸೂರು ಬಂಡೆ ಸಮೀಪವಿರುವ ಶ್ರೀ ಕೃಷ್ಣ ಗೋಶಾಲೆಯಲ್ಲಿ ಸಂಭವಿಸಿದ ಅವಘಡದಲ್ಲಿ ಸಾವಿರಕ್ಕೂ ಹೆಚ್ಚು ದನಗಳಿಗೆ ಶೇಖರಿಸಿ ಇಡಲಾಗಿದ್ದ ಒಣಹುಲ್ಲು ಸಂಪೂರ್ಣ ಭಸ್ಮವಾಗಿದ್ದು, ಬಾಗಲೂರು ಠಾಣೆಯಲ್ಲಿ ದೂರು ದಾಖಲಾಗಿದೆ.

ಕಸಾಯಿಖಾನೆಗೆ ಸಾಗಿಸುತ್ತಿದ್ದ ದನಗಳನ್ನು ರಕ್ಷಣೆ ಮಾಡಿ ಕೆಲ ಸಂಘಟನೆಗಳು ಹಾಗೂ ಪೊಲೀಸರು ತಂದು ಬಿಟ್ಟಿರುವ ವಿವಿಧ ತಳಿಯ 1,158 ಪಶುಗಳ ಜೊತೆಗೆ ಒಂಟೆ, ಕುರಿ, ಕುದುರೆ, ಎಮ್ಮೆಗಳನ್ನು ಇಲ್ಲಿ ಏಳು ವರ್ಷಗಳಿಂದ ಪಾಲನೆ ಮಾಡಲಾಗುತ್ತಿದೆ.

‘ದೊಡ್ಡಬಳ್ಳಾಪುರ, ದೇವನಹಳ್ಳಿ, ಬಾಗಲೂರು ಸುತ್ತಮುತ್ತಲಿನ 17 ಗ್ರಾಮಗಳಿಂದ ಒಂದು ವರ್ಷಕ್ಕೆ ಬೇಕಾಗುವಷ್ಟು ರಾಗಿ ಹುಲ್ಲನ್ನು ಖರೀದಿ ಮಾಡಿ ಶೇಖರಿಸಲಾಗಿತ್ತು. ಗೋಶಾಲೆಯಲ್ಲಿ ಯಾರೂ ಇಲ್ಲದ್ದನ್ನು ಗಮನಿಸಿ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಕಿಟಕಿ ಗಾಜು ಒಡೆದು ಒಣಹುಲ್ಲು ಘಟಕಕ್ಕೆ ಬೆಂಕಿ ಇಟ್ಟಿದ್ದಾರೆ’ ಎಂದು ಗೋಶಾಲಾ ಸಂಸ್ಥಾಪಕ ಪುಖ್ ರಾಜ್ ಮಹಾರಾಜ್ ದೂರಿನಲ್ಲಿ ತಿಳಿಸಿದ್ದಾರೆ.



ಹುಲ್ಲಿನ ಗೋದಾಮಿನಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು

‘ಕಸಾಯಿಖಾನೆಗೆ ರವಾನೆಯಾಗುತ್ತಿದ್ದ ಗೋವು ಸಾಕುತ್ತಿರುವುದರಿಂದ ಉದ್ದೇಶಪೂರ್ವಕವಾಗಿ ಕಿಡಿಗೇಡಿಗಳು ಗೋಶಾಲೆಯಲ್ಲಿ ಒಣಹುಲ್ಲು ಗೋದಾಮಿಗೆ ಬೆಂಕಿ ಹಚ್ಚಿದ್ದಾರೆ. ಬೆಂಕಿಯಿಂದ ಗೋದಾಮು ಕೂಡ ಹಾಳಾಗಿದ್ದು, ₹2 ಕೋಟಿಗೂ ಹೆಚ್ಚು ನಷ್ಟವಾಗಿದೆ’ ಎಂದು ಅವರು ತಿಳಿಸಿದ್ದಾರೆ.

ಅರವಿಂದ ಲಿಂಬಾವಳಿ ಭೇಟಿ: ಗೋಶಾಲೆಯಲ್ಲಿ ಬೆಂಕಿ ಅವಘಡ ಸಂಭವಿಸಿದ ಸ್ಥಳಕ್ಕೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ನಂತರ ಮಾತನಾಡಿದ ಅವರು, ‘ಬೆಂಕಿ ಅವಘಡದಲ್ಲಿ ಗೋಶಾಲೆಗೆ ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದ್ದು, ಗೋಶಾಲೆಯ ನವೀಕರಣ ಕಾಮಗಾರಿ ಕೈಗೊಳ್ಳಲು ಸಹಕಾರ ನೀಡಲಾಗುವುದು. ಮಾರ್ಚ್ 29ರಂದು ಕರಸೇವೆ ನಡೆಸಲಿದ್ದೇವೆ’ ಎಂದು ತಿಳಿಸಿದರು.

ನಗರಮಂಡಲ ಅಧ್ಯಕ್ಷ ಎಚ್.ಎಸ್. ಪಿಳ್ಳಪ್ಪ, ಗೋಶಾಲೆಯ ಮುಖ್ಯಸ್ಥ ಪುಖ್ ರಾಜ್ ಮಹಾರಾಜ್, ಕಣ್ಣೂರು ಅಶೋಕ್ ಇದ್ದರು.

ತೇಜಸ್ವಿನಿಗೆ ‘ಅಕ್ಕ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ): ಸಮೀಪದ ಚಿಮ್ಮಡ ಗ್ರಾಮದ ವಿರಕ್ತಮಠದಿಂದ ಅಕ್ಕ ಮಹಾದೇವಿ ಜಯಂತಿ ಅಂಗವಾಗಿ ಪ್ರತಿ ವರ್ಷ ನೀಡುವ ರಾಜ್ಯಮಟ್ಟದ ‘ಅಕ್ಕ ಪ್ರಶಸ್ತಿ’ಗೆ ಕೇಂದ್ರದ ಮಾಜಿ ಸಚಿವ ದಿ. ಅನಂತಕುಮಾರ್ ಅವರ ಪತ್ನಿ ತೇಜಸ್ವಿನಿ ಅನಂತಕುಮಾರ್ ಭಾಜನರಾಗಿದ್ದಾರೆ.



ತೇಜಸ್ವಿನಿ ಅನಂತಕುಮಾರ್

ತೇಜಸ್ವಿನಿ ಅನಂತಕುಮಾರ್ ಅವರ ಸಾಮಾಜಿಕ ಸೇವೆ ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಏ.2ರಂದು ಶ್ರೀಮಠದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಿರಕ್ತಮಠದ ಪ್ರಭು ಸ್ವಾಮೀಜಿ ತಿಳಿಸಿದ್ದಾರೆ.

‘ಸಾಹಿತ್ಯ ಕ್ಷೇತ್ರಕ್ಕೆ ಅಧಿಕಾರಿಗಳಿಂದಲೂ ಕೊಡುಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಅಧಿಕಾರಿಗಳು ಆಸಕ್ತಿದಾಯಕ ಸಾಹಿತ್ಯ ರಚಿಸಿ ಆ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವ್ ಸಿಂಘ್ ಹೇಳಿದರು.

ಚಿತ್ರಕಲಾ ಪರಿಷತ್‌ನಲ್ಲಿ ಅಭಿರುಚಿ ಪ್ರಕಾಶನ, ಕಾಡುಮಲ್ಲೇಶ್ವರ ಗೆಳೆಯರ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಐಜಿಪಿ ಚಂದ್ರಶೇಖರ್ ಅವರ ಆತ್ಮಕಥೆ ‘ರೀಸನ್ ಪಾಯಿಸನ್ಸ್ ಫ್ಯಾಷನ್’ ಪುಸ್ತಕ ಜನಾರ್ಪಣೆ ಮಾಡಿ ಮಾತನಾಡಿದರು.

‘ಅಧಿಕಾರಿಗಳು ಸಾಹಿತ್ಯ ರಚಿಸಿದ ಸಾಲಿಗೆ ಸಿ.ಚಂದ್ರಶೇಖರ್ ಸೇರ್ಪಡೆಯಾಗಿದ್ದಾರೆ. ಅವರ ಈ ಕೃತಿ ಆಸಕ್ತಿದಾಯಕವಾಗಿದ್ದು, ಇವರ ಬರವಣಿಗೆಯಲ್ಲಿ ಸಾಹಿತ್ಯದ ಅಂಶ ಗಟ್ಟಿಯಾಗಿದೆ ಎಂದರು.



ಪುಸ್ತಕ ಜನಾರ್ಪಣೆ ಕಾರ್ಯಕ್ರಮದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ.ಶಿವರಾಂ, ಪ್ರಕಾಶಕ ಅಭಿರುಚಿ ಗಣೇಶ್, ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವ್ ಸಿಂಘ್, ಸುಚಿತ ಶ್ರೀನಾಗೇಶ್, ನಿವೃತ್ತ ಐಪಿಎಸ್ ಅಧಿಕಾರಿ ಸಿ.ಚಂದ್ರಶೇಖರ್ ಹಾಗೂ ಅವರ ಪತ್ನಿ ರೂಪಾ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಲೇಖಕ ಸಿ.ಚಂದ್ರಶೇಖರ್ ಮಾತನಾಡಿ, ‘ಇದು ನನ್ನ ಜೀವನದ ಕಥೆ ಅನ್ನುವ ಬದಲು ನಾನು ನೋಡಿದ ವ್ಯಕ್ತಿಗಳು, ನೈಜ ಘಟನೆಗಳು, ರೈತ ಹೋರಾಟವನ್ನು ಒಳಗೊಂಡಿದೆ. ಇದು ನನ್ನ ನಾಲ್ಕನೇ ಪುಸ್ತಕವಾಗಿದೆ. 1974ರಲ್ಲಿ ಭೂ ಕಾಯ್ದೆ ಬಂದಾಗ ರೈತರ ಬೇಡಿಕೆಗಳಿಗೆ ಸರ್ಕಾರ ಹೇಗೆ ಸ್ಪಂದಿಸಿತು. ಪೊಲೀಸ್ ಅಧಿಕಾರಿಯಾಗಿ ಯಾವ ರೀತಿಯಲ್ಲಿ ಮಧ್ಯಸ್ಥಿಕೆ ವಹಿಸಿದೆ ಎನ್ನುವ ವಿವರಗಳು ಇದರಲ್ಲಿವೆ’ ಎಂದರು.

‘ರೈತ ಹೋರಾಟಗಾರರಾದ ಎಂ.ಡಿ. ನಂಜುಂಡಸ್ವಾಮಿ, ಎಚ್.ಎಸ್.ರುದ್ರಪ್ಪ, ಸುಂದರೇಶ್, ಕಡಿದಾಳು ಶಾಮಣ್ಣ ಅವರೊಂದಿಗಿನ ಒಡನಾಟದಿಂದ ರೈತ ಚಳವಳಿ, ರೈತರ ಸಮಸ್ಯೆಗಳು ಅರ್ಥವಾಯಿತು. ಎಲ್ಲ ರೈತರ ಸಮಸ್ಯೆ ಒಂದೇ ಆಗಿರುವುದಿಲ್ಲ. ಸಾಧನೆ ಮಾಡಿದ ವ್ಯಕ್ತಿಗಳ ಆದರ್ಶಗಳನ್ನು ಯುವ ಸಮುದಾಯ ಮೈಗೂಡಿಸಿಕೊಳ್ಳಬೇಕು’ ಎಂದರು.

ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ.ಶಿವರಾಂ ಮಾತನಾಡಿ, ‘ಸಿ.ಚಂದ್ರಶೇಖರ್ ಅವರು ಪೊಲೀಸ್ ಇಲಾಖೆಯ ಸಾಂಸ್ಕೃತಿಕ ಪ್ರತಿನಿಧಿಯಾಗಿದ್ದಾರೆ. ಕಾಡು ಮಲ್ಲೇಶ್ವರ ಗೆಳೆಯರ ಬಳಗ ಕಲೆ, ಸಾಹಿತ್ಯ, ಜನಪದ, ಸಂಗೀತಕ್ಕೆ ಪ್ರೋತ್ಸಾಹ ಮತ್ತು ಕಲಾವಿದರಿಗೆ ಸಹಕಾರ ನೀಡುತ್ತಾ ಬಂದಿದೆ. ಇದನ್ನು ನಿರಂತರವಾಗಿ ಮುಂದುವರಿಸುತ್ತದೆ’ ಎಂದು ಹೇಳಿದರು.

ಚಿತ್ರಾವಳಿ



ಈ ಹೊತ್ತಿಗೆ ಟ್ರಸ್ಟ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕಥೆಗಾರ ಎಂ. ಮನೋಹರ ಪೈ ಅವರಿಗೆ‘ಈ ಹೊತ್ತಿಗೆ ಕಥಾ ಪ್ರಶಸ್ತಿ’ ಹಾಗೂ ವಿಮರ್ಶಕಿ ತಾರಿಣಿ ಶುಭದಾಯಿನಿ ಅವರಿಗೆ ‘ಈ ಹೊತ್ತಿಗೆ ಕಾವ್ಯ ಪ್ರಶಸ್ತಿ’ ಪ್ರದಾನ ಮಾಡಿ ಗೌರವಿಸಲಾಯಿತು. (ಎಡದಿಂದ) ಕವಿ ಆನಂದ ಝುಂಜರವಾಡ, ಈ ಹೊತ್ತಿಗೆ ಅಧ್ಯಕ್ಷೆ ಜಯಲಕ್ಷ್ಮಿ ಪಾಟೀಲ, ಲೇಖಕಿ ಜಯಶ್ರೀ ದೇಶಪಾಂಡೆ ಮತ್ತು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ ಉಪಸ್ಥಿತರಿದ್ದರು



ಸಿಲಿಂಡರ್ ಪೂರೈಸುವಂತೆ ಆಗ್ರಹಿಸಿ ಇಂಡಿಯನ್ ವೆಹಿಕಲ್ ಡ್ರೈವರ್ಸ್ ಟ್ರೇಡ್ ಯೂನಿಯನ್, ಸಂಚಾರಿ ಚಾಲಕರ ಸೇವಾ ಟ್ರಸ್ಟ್ ಹಾಗೂ ಸ್ನೇಹಜೀವಿ ಚಾಲಕರ ಸಂಘದ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು



ಅಬ್ಬಿಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಶ್ರೀ ಮಧುಸೂದನ್ ಸಾಯಿ ಮೆಡಿಕಲ್ ಸೈನ್ಸ್ ಮತ್ತು ಆರೋಗ್ಯ ಭಾರತಿಯಿಂದ ಉಚಿತ ಎಚ್‌ಪಿವಿ ಲಸಿಕೆಗೆ ಶಾಸಕ ಎಸ್. ಮುನಿರಾಜು ಅವರೊಂದಿಗೆ ಡಾ. ಪುಣ್ಯವತಿ ಚಾಲನೆ ನೀಡಿದರು

ಕ್ಯಾನ್ಸರ್ ತಡೆಗಟ್ಟುವ ಎಚ್‌ಪಿವಿ ಲಸಿಕೆಗೆ ಚಾಲನೆ

ಪೀಣ್ಯ ದಾಸರಹಳ್ಳಿ: ‘4 ಸಾವಿರ ವೆಚ್ಚದ ಎಚ್‌ಪಿವಿ ಲಸಿಕೆಯನ್ನು ಕೇಂದ್ರ ಸರ್ಕಾರ ಉಚಿತವಾಗಿ 1.5 ಕೋಟಿ ಹೆಣ್ಣು ಮಕ್ಕಳಿಗೆ ನೀಡುತ್ತಿದ್ದು, ಎರಡನೇ ಹಂತದಲ್ಲಿ 2.5 ಕೋಟಿ ಮಂದಿಗೆ ನೀಡಲಾಗುತ್ತದೆ' ಎಂದು ವೈದ್ಯೆ ಡಾ. ಪುಣ್ಯವತಿ ತಿಳಿಸಿದರು.

ಅಬ್ಬಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಮಧುಸೂದನ್ ಸಾಯಿ ಮೆಡಿಕಲ್ ಸೈನ್ಸ್ ಮತ್ತು ಆರೋಗ್ಯ ಭಾರತಿ ವತಿಯಿಂದ ಹೆಣ್ಣು ಮಕ್ಕಳಿಗೆ ಕ್ಯಾನ್ಸರ್ ತಡೆಗಟ್ಟುವ ಎಚ್‌ಪಿವಿ ಲಸಿಕೆ ನೀಡುವ ಚಟುವಟಿಕೆಗೆ ಚಾಲನೆ ನೀಡಿ ಮಾತನಾಡಿದರು.

ಕ್ಯಾನ್ಸರ್ ಚಿಕಿತ್ಸೆಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಲಸಿಕೆಯಿಂದ ಶೇ 90ಕ್ಕೂ ಹೆಚ್ಚು ಮಹಿಳೆಯರನ್ನು ಕ್ಯಾನ್ಸರ್‌ನಿಂದ ಕಾಪಾಡಬಹುದು. ಇದರಿಂದ ಯಾವುದೇ ಅಡ್ಡ ಪರಿಣಾಮ ಇಲ್ಲ ಎಂದರು.

ಶಾಸಕ ಎಸ್. ಮುನಿರಾಜು ಮಾತನಾಡಿ, ‘ಮಹಿಳೆಯರ ಸುರಕ್ಷತೆ ಮನಗಂಡು ಪ್ರಧಾನಿ ನರೇಂದ್ರ ಮೋದಿ ಅವರು ಕ್ಯಾನ್ಸರ್ ತಡೆಗಟ್ಟುವ ಲಸಿಕೆ ಉಚಿತವಾಗಿ ನೀಡುವ ತೀರ್ಮಾನ ಕೈಗೊಂಡಿದ್ದಾರೆ. ಲಸಿಕೆ ಪಡೆದವರು ಸ್ನೇಹಿತರು, ಸಂಬಂಧಿಕರು ಮತ್ತು ಅಕ್ಕ ಪಕ್ಕದವರಿಗೆ ತಿಳಿಸಿ ಜಾಗೃತಿ ಮೂಡಿಸಬೇಕು' ಎಂದು ಮನವಿ ಮಾಡಿದರು.

ಬಿಜೆಪಿ ಮುಖಂಡರಾದ ರಾಜೇಂದ್ರ, ಅಬ್ಬಿಗೆರೆ ಮಂಜು, ಲಾರಿ ಮಂಜಣ್ಣ, ಗಂಗಾಧರ್ ಉಪಸ್ಥಿತರಿದ್ದರು.

ಕಾಶಿಯಾತ್ರೆಗೆ ಹೊರಟಿದ್ದ ಮೂವರು ಸಾವು

ತಿಪಟೂರಿನಿಂದ ಹೊರಟಿದ್ದ ಟಿ.ಟಿ. ವಾಹನ: ದೇವನಹಳ್ಳಿ ಬಳಿ ಲಾರಿಗೆ ಡಿಕ್ಕಿ

ಪ್ರಜಾವಾಣಿ ವಾರ್ತೆ


ಜಯಮ್ಮ


ಗಂಗಮ್ಮ


ಯಶೋದಮ್ಮ

ದೇವನಹಳ್ಳಿ: ಕಾಶಿಯಾತ್ರೆಗೆ ಹೊರಟಿದ್ದ ಯಾತ್ರಿಗಳನ್ನು ತುಮಕೂರು ಜಿಲ್ಲೆಯ ತಿಪಟೂರಿನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಿಡಲು ಬರುತ್ತಿದ್ದ ಟಿ.ಟಿ ವಾಹನ ಮತ್ತು ಲಾರಿ ನಡುವೆ ಭಾನುವಾರ ಬೆಳಗಿನ ಜಾವ ಸಂಭವಿಸಿದ ಭೀಕರ ಅಪಘಾತದಲ್ಲಿ ಮೂವರು ಮಹಿಳೆಯರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತಿಪಟೂರಿನ ವಿದ್ಯಾನಗರದ ನಿವಾಸಿಗಳಾದ ಜಯಮ್ಮ(65), ಯಶೋದಮ್ಮ (60) ಮತ್ತು ಗಂಗಮ್ಮ (40) ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಟಿ.ಟಿ ವಾಹನದಲ್ಲಿದ್ದ 11 ಮಹಿಳೆಯರು ಗಾಯಗೊಂಡಿದ್ದು, ಆ ಪೈಕಿ ಮೂವರ ಸ್ಥಿತಿ ಗಂಭೀರವಾಗಿದೆ.

ಚಂದ್ರಕಲಾ, ಚಂದ್ರಮ್ಮ, ವೈಷ್ಣವಿ, ಕೆಂಪಮ್ಮ ಗಂಭೀರವಾಗಿ ಗಾಯಗೊಂಡಿದ್ದು, ತುರ್ತು ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸುಶೀಲಮ್ಮ, ಪ್ರಿಯಾಂಕ, ರಾಣಿ ಅಮ್ಮ, ಜಯಮ್ಮ, ಪದ್ಮಮ್ಮ, ಶ್ರೀಕಾಂತ್, ಉಮಾಮ್ಮ ಎಂಬುವರಿಗೆ ತೀವ್ರ ಪೆಟ್ಟಾಗಿದ್ದು, ದೇವನಹಳ್ಳಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ತಿಪಟೂರಿನಿಂದ ರಾತ್ರಿ 10ಕ್ಕೆ ಟಿ.ಟಿ ವಾಹನವು ಯಾತ್ರಿಗಳನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಿಡಲು ಹೊರಟಿತ್ತು. ಚಾಲಕ ಸೇರಿದಂತೆ ಟಿ.ಟಿ ವಾಹನದಲ್ಲಿ ಒಟ್ಟು 15 ಪ್ರಯಾಣಿಕರು ಇದ್ದರು. ಆ ಪೈಕಿ 12 ಮಂದಿ ಕಾಶಿಯಾತ್ರೆಗೆ ಹೊರಟಿದ್ದರು. ಇಬ್ಬರು ತಮ್ಮ ಸಂಬಂಧಿಕರನ್ನು ವಿಮಾನ ನಿಲ್ದಾಣಕ್ಕೆ ಬಿಟ್ಟು ಬರಲು ಬಂದಿದ್ದರು.

ದೇವನಹಳ್ಳಿ ಹೊರವಲಯದ ರಾಣಿ ಕ್ರಾಸ್ ಸಮೀಪ ಎಸ್‌ಟಿಆರ್‌ಆರ್ ರಸ್ತೆಯಲ್ಲಿ ಭಾನುವಾರ ಬೆಳಗಿನ ಜಾವ ಟಿ.ಟಿ.ವಾಹನ ಯೂ-ಟರ್ನ್ ಪಡೆಯುವಾಗ ಲಾರಿಗೆ ಡಿಕ್ಕಿ ಹೊಡೆದು ಅವಘಡ ಸಂಭವಿಸಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಗೂಗಲ್ ಮ್ಯಾಪ್ ತೋರಿಸಿದ್ದ ತಿರುವು ತಪ್ಪಿಸಿಕೊಂಡು ಮುಂದಕ್ಕೆ ಹೋಗಿದ್ದ ಟಿ.ಟಿ. ವಾಹನ ಯೂ-ಟರ್ನ್ ಪಡೆಯುವಾಗ ಎದುರಿನಿಂದ ಬಂದ ಲಾರಿಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೇವನಹಳ್ಳಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಕಾಶಿಯಾತ್ರೆಗೆ ಹೊರಟ್ಟಿದ್ದ ತಿಪಟೂರಿನ ತಂಡ

ಚಾಲಕ ಸೇರಿ ಮೂವರ ಸಾವು

ಹಳೇ ಮದ್ರಾಸ್ ರಸ್ತೆಯ ಮೇಡಹಳ್ಳಿ ಬಳಿ ಮೇಲ್ಸೇತುವೆ ಮೇಲೆ ನಿಂತಿದ್ದ ಕ್ಯಾಂಟರ್ ವಾಹನಕ್ಕೆ ಸರಕು ಸಾಗಣೆ ವಾಹನ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಸೇರಿ ಮೂವರು ಮೃತಪಟ್ಟಿರುವ ಘಟನೆ ಕೆ.ಆರ್.ಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ವೈಟ್‌ಫೀಲ್ಡ್ ನಿವಾಸಿಗಳಾದ ಗೂಡ್ಸ್ ವಾಹನ ಚಾಲಕ ಸುರೇಶ್ (32), ಸಹ ಪ್ರಯಾಣಿಕರಾದ ಮಣಿಕಂಠ (39) ಮತ್ತು ಶ್ರೀನಿವಾಸ್ (35) ಮೃತರು. ಕ್ಯಾಂಟರ್ ಚಾಲಕ ಅಮ್ಜದ್ ಪಾಷಾನನ್ನು ವಶಕ್ಕೆ ಪಡೆಯಲಾಗಿದೆ. ಮಾರ್ಚ್ 21ರಂದು ರಾತ್ರಿ 11.30ರ ಸುಮಾರಿಗೆ ದುರ್ಘಟನೆ ನಡೆದಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಆರೋಪಿ ಅಮ್ಜದ್, ಮುಂಜಾಗ್ರತಾ ಕ್ರಮಗಳನ್ನು ಅನುಸರಿದೆ ಬ್ಯಾರಿಕೇಡ್ ಕೂಡ ಇಡದೆ ಅಜಾಗರೂಕತೆಯಿಂದ ತನ್ನ ಕ್ಯಾಂಟರ್ ವಾಹನ ನಿಲುಗಡೆ ಮಾಡಿದ್ದ. ಹೊಸಕೋಟೆಯಿಂದ ಕೆ.ಆರ್.ಪುರ ಕಡೆ ಬರುತ್ತಿದ್ದ ಗೂಡ್ಸ್ ವಾಹನದ ಚಾಲಕ ಸುರೇಶ್ ನಿಯಂತ್ರಣ ತಪ್ಪಿ ನಿಂತಿದ್ದ ಕ್ಯಾಂಟರ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾರೆ. ಅಪಘಾತದ ರಭಸಕ್ಕೆ ವಾಹನದ ಮುಂಭಾಗ ಸಂಪೂರ್ಣ ಜಖಂಗೊಂಡಿದ್ದು, ಚಾಲಕ ಸುರೇಶ್ ಸೇರಿ ಮೂವರು ಗಂಭೀರವಾಗಿ ಗಾಯಗೊಂಡಿದ್ದರು. ಬಳಿಕ ಸ್ಥಳೀಯರು ಮೂವರನ್ನೂ ಸಮೀಪದ ಆಸ್ಪತ್ರೆಗೆ ದಾಖಲಿಸಿದರು. ಪರೀಕ್ಷಿಸಿದ ವೈದ್ಯರು, ಮಾರ್ಗ ಮಧ್ಯೆಯೇ ಮೂವರು ಮೃತಪಟ್ಟಿದ್ದಾರೆ ಎಂದು ದೃಢಪಡಿಸಿದ್ದಾರೆ.

ಪ್ರಾಥಮಿಕ ಮಾಹಿತಿ ಪ್ರಕಾರ ಗೂಡ್ಸ್ ವಾಹನ ಮೇಲ್ಸೇತುವೆ ಮೇಲೆ ಬರುವಾಗ ಟೈರ್ ಸ್ಫೋಟಗೊಂಡಿದ್ದರಿಂದ ನಿಯಂತ್ರಣ ತಪ್ಪಿ ಕ್ಯಾಂಟರ್‌ಗೆ ಡಿಕ್ಕಿ ಹೊಡೆದಿದೆ ಎಂಬುದು ಗೊತ್ತಾಗಿದೆ. ಈ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಸಂಚಾರ ಠಾಣೆ ಪೊಲೀಸರು ಮಾಹಿತಿ ನೀಡಿದರು. ಈ ಸಂಬಂಧ ಕೆ.ಆರ್. ಪುರಂ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಮಾರಗೊಂಡನಹಳ್ಳಿಯಲ್ಲಿ ಅಂಬಿಗರ ಚೌಡಯ್ಯ ಪುತ್ಥಳಿ ಲೋಕಾರ್ಪಣೆಗೊಳಿಸಲಾಯಿತು

ಅಂಬಿಗರ ಚೌಡಯ್ಯ ಪುತ್ಥಳಿ ಲೋಕಾರ್ಪಣೆ

ಕೆ.ಆರ್.ಪುರ: 'ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಅವರು ಎಲ್ಲಾ ಸಮುದಾಯದವರ ಸ್ವತ್ತು' ಎಂದು ಗಂಗಾಮತಸ್ಥ ಯುವ ಮುಖಂಡ ಮಧು ಹೇಳಿದರು.

ಕೆ.ಆರ್.ಪುರ ಸಮೀಪದ ಮಾರಗೊಂಡನಹಳ್ಳಿ ಗ್ರಾಮದಲ್ಲಿ ಶ್ರೀನಿಜಶರಣ ಅಂಬಿಗರ ಚೌಡಯ್ಯನವರ ಪುತ್ಥಳಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

'ಅಂಬಿಗರ ಚೌಡಯ್ಯ ಅವರು 12ನೇ ಶತಮಾನದ ವಚನಕಾರರು. ನೇರ ನುಡಿಯ ನಿಜಶರಣ ಎನಿಸಿದ್ದರು. ಅವರ ವಚನಗಳು ಎಲ್ಲ ಕಾಲಕ್ಕೂ ಮಾದರಿಯಾಗಿವೆ. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದರು.

ತಂಗಡಗಿಗೆ ಹಠಾತ್ ಎದೆನೋವು: ಚಿಕಿತ್ಸೆ

ತುಮಕೂರು: ಕೊಪ್ಪಳದಿಂದ ಬೆಂಗಳೂರಿಗೆ ಪಯಣಿಸುತ್ತಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಆರೋಗ್ಯದಲ್ಲಿ ಭಾನುವಾರ ರಾತ್ರಿ ಹಠಾತ್ ಏರುಪೇರಾಗಿ, ನಗರದ ಸಿದ್ಧಗಂಗಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ಬೆಂಗಳೂರಿಗೆ ತೆರಳಿದರು.

ಕೊಪ್ಪಳದಿಂದ ಬೆಂಗಳೂರಿಗೆ ತೆರಳುವಾಗ ಶಿರಾ ಬಳಿ ಎದೆನೋವು ಕಾಣಿಸಿಕೊಂಡಿತ್ತು. ಕೂಡಲೇ ಸಿದ್ಧಗಂಗಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾದರು. ಚಿಕಿತ್ಸೆ ನಂತರ ಚೇತರಿಸಿಕೊಂಡರು.

ಚಿಕಿತ್ಸೆ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಯಾವತ್ತೂ ಈ ತರಹ ಆಗಿರಲಿಲ್ಲ. ಎದೆನೋವು ಕಾಣಿಸಿಕೊಂಡ ತಕ್ಷಣ ಕುಟುಂಬದ ವೈದ್ಯರ ಬಳಿ ಮಾತನಾಡಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಯಾವುದೇ ತೊಂದರೆ ಇಲ್ಲ ಎಂದು ವೈದ್ಯರು ತಿಳಿಸಿದ್ದಾರೆ. ಅವರು ಹೇಳಿದ ನಂತರ ಬೆಂಗಳೂರಿಗೆ ತೆರಳುತ್ತಿದ್ದೇನೆ' ಎಂದು ಹೇಳಿದರು.

'ಯಾವುದೇ ಗಂಭೀರ ಸಮಸ್ಯೆ ಇಲ್ಲ. ಕೊಪ್ಪಳದಲ್ಲಿ ಬೆಳಿಗ್ಗೆಯಿಂದ ಸಂಜೆಯ ತನಕ ನಿರಂತರವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ತಡವಾಗಿ ಊಟ ಮಾಡಿದ್ದರಿಂದ ಸಮಸ್ಯೆಯಾಗಿತ್ತು. ಈಗ ಯಾವುದೇ ತೊಂದರೆ ಇಲ್ಲ' ಎಂದರು.

'ಸಚಿವರಿಗೆ ಹೃದಯ ಸಂಬಂಧಿ ಸಮಸ್ಯೆ ಇಲ್ಲ. ಆರೋಗ್ಯ ಚೆನ್ನಾಗಿದೆ. ಅಗತ್ಯ ಚಿಕಿತ್ಸೆ ನೀಡಲಾಗಿದೆ' ಎಂದು ಸಿದ್ಧಗಂಗಾ ಆಸ್ಪತ್ರೆ ವೈದ್ಯ ಶರತ್ ಕುಮಾರ್ ಹೇಳಿದರು.

ಕಾರು ವಶ: ರಿಕ್ಕಿ ರೈಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿ ರಸ್ತೆಯ ಅನಿಲ್ ಕುಂಬ್ಳೆ ವೃತ್ತದ ಬಳಿ ಅಪಾಯಕಾರಿಯಾಗಿ ಚಾಲನೆ ಮಾಡಿದ ಲ್ಯಾಂಬೋರ್ಗಿನಿ ಕಾರನ್ನು ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕಾರನ್ನು ಅಪಾಯಕಾರಿ ರೀತಿಯಲ್ಲಿ ಚಾಲನೆ ಮಾಡುತ್ತಿದ್ದನ್ನು ಸ್ಥಳೀಯರು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ಮಾಹಿತಿ ಆಧರಿಸಿ ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು ಕಾರು ಚಾಲಕನ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡರು.

ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ ವೇಳೆ ಕೆಎ-05 ಎನ್‌ಆರ್0009 ಸಂಖ್ಯೆಯ ಲ್ಯಾಂಬೋರ್ಗಿನಿ ಕಾರು ಮುತ್ತಪ್ಪ ರೈ ಅವರ ಪುತ್ರ ರಿಕ್ಕಿ ರೈಗೆ ಸೇರಿದೆ ಎಂಬುದು ಗೊತ್ತಾಗಿದ್ದು, ಸದಾಶಿವನಗರದಲ್ಲಿರುವ ಅವರ ನಿವಾಸದಲ್ಲಿ ಕಾರು ವಶಕ್ಕೆ ಪಡೆಯಲಾಗಿದೆ.

'ರಿಕ್ಕಿ ರೈ ಅವರ ನಿವಾಸದಿಂದ ಕಾರು ವಶಕ್ಕೆ ಪಡೆಯಲಾಗಿದೆ. ವಿಚಾರಣೆಗೆ ಹಾಜರಾಗುವಂತೆ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಘಟನೆ ನಡೆದಾಗ ಯಾರು ಕಾರು ಚಾಲನೆ ಮಾಡುತ್ತಿದ್ದರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ಕಾರಿನ ದಾಖಲೆಗಳು ಯಾರ ಹೆಸರಿನಲ್ಲಿದೆ ಎಂದು ಪರಿಶೀಲಿಸಲು ಪ್ರಾದೇಶಿಕ ಸಾರಿಗೆ ಇಲಾಖೆಗೆ ಪತ್ರ ಬರೆಯಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.



'ರಿಕ್ಕಿ ರೈ ಅವರಿಗೆ ಕಾರು ಸೇರಿದ್ದು. ಆದರೆ, ಘಟನೆ ನಡೆದಾಗ ಅವರು ವಿದೇಶದಲ್ಲಿದ್ದರು. ಅವರ ಕಾರು ಚಾಲಕ ರಾತ್ರಿ ವಾಹನವನ್ನು ತೆಗೆದುಕೊಂಡು ಹೋಗಿದ್ದ ವೇಳೆ ವೃತ್ತದ ಬಳಿ ಬ್ರೇಕ್ ಹಾಕಿದ ಪರಿಣಾಮ ಈ ಘಟನೆ ಸಂಭವಿಸಿದೆ' ಎಂದು ರಿಕ್ಕಿ ಅವರ ವಕೀಲರು ತಿಳಿಸಿದ್ದಾರೆ.

ಶನಿವಾರ ಬೆಳಗಿನ ಜಾವ 2ರಿಂದ 3 ಗಂಟೆ ಸುಮಾರಿಗೆ ಕಾರನ್ನು ಅಪಾಯಕಾರಿ ರೀತಿಯಲ್ಲಿ ಚಾಲನೆ ಮಾಡಲಾಗಿದೆ. ಅಜಾಗರೂಕತೆ ಮತ್ತು ಅಪಾಯಕಾರಿ ಚಾಲನೆಯಡಿ ಪ್ರಕರಣ ದಾಖಲಿಸಲಾಗಿದೆ. ಪ್ರಕರಣ ಸಂಬಂಧ ಆರ್‌.ಸಿ ರದ್ದು ಮಾಡಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆದು ಶಿಫಾರಸು ಮಾಡಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿಗಳು

ಬಾಲಕಿ ಕೊಂದಿದ್ದ ಆರೋಪಿ ಸೆರೆ


ಸೈಯದ್ ಶಬೀಲ್

ನಿಶ್ಚಿತಾರ್ಥ ಮಾಡಿಕೊಂಡಿದ್ದ ಬಾಲಕಿಯ ಕತ್ತು ಸೀಳಿ ಹತ್ಯೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ದೇವರ ಜೀವನಹಳ್ಳಿ (ಡಿ.ಜಿ) ಠಾಣೆ ಪೊಲೀಸರು ಬಂಧಿಸಿದ್ದಾರೆ.

ಡಿ.ಜಿ.ಹಳ್ಳಿ ನಿವಾಸಿ ಸೈಯದ್ ಶಬೀಲ್ (20) ಬಂಧಿತ. ಆರೋಪಿ ಶಬೀಲ್‌ನ ಜತೆ ಕೊಲೆಯಾದ ಬಾಲಕಿಯ ಮದುವೆ ನಿಶ್ಚಯವಾಗಿತ್ತು. ಬಾಲಕಿಯ ನಡತೆ ಮೇಲೆ ಅನುಮಾನಗೊಂಡು ಕೊಲೆ ಮಾಡಿ, ರಾಜಸ್ಥಾನಕ್ಕೆ ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಲಾಗಿದೆ ಎಂದು ಡಿ.ಜೆ.ಹಳ್ಳಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ತಂದೆಯ ಈರುಳ್ಳಿ ಅಂಗಡಿ ನೋಡಿಕೊಳ್ಳುತ್ತಿದ್ದ ಶಬೀಲ್ ಮತ್ತು ಕೆ.ಜಿ.ಹಳ್ಳಿಯ ಚಿಕ್ಕಮ್ಮನ ಮನೆಯಲ್ಲಿ ವಾಸವಾಗಿದ್ದ ಬಾಲಕಿ ಒಂದು ವರ್ಷದಿಂದ ಪರಸ್ಪರ ಪ್ರೀತಿಸುತ್ತಿದ್ದರು. ಹತ್ಯೆಯಾದ ಸ್ಥಳದಲ್ಲೇ ಇಬ್ಬರು ನಿತ್ಯ ಭೇಟಿಯಾಗುತ್ತಿದ್ದರು. ಕೆಲ ದಿನಗಳ ಹಿಂದಷ್ಟೇ ಕುಟುಂಬ ಸದಸ್ಯರು ಮದುವೆಗೆ ಒಪ್ಪಿಕೊಂಡು ಇಬ್ಬರಿಗೂ ನಿಶ್ಚಿತಾರ್ಥ ಮಾಡಿ, ಬಕ್ರೀದ್ ಹಬ್ಬದ ಬಳಿಕ ಮದುವೆ ನಿಶ್ಚಯಿಸಿದ್ದರು ಎಂದು ಪೊಲೀಸರು ತಿಳಿಸಿದರು.

ಈ ಮಧ್ಯೆ ಯಾವ ವಿಚಾರಕ್ಕೆ ಗಲಾಟೆ ನಡೆದಿದೆ ಎಂಬುದು ತಿಳಿದುಬಂದಿಲ್ಲ. ಶಬೀಲ್‌ನನ್ನು ಮದುವೆಯಾಗಲು ನಿರಾಕರಿಸಿದ್ದಳು. ಅದರಿಂದ ಕೋಪಗೊಂಡಿದ್ದ ಆರೋಪಿ, ಮಾರ್ಚ್ 17ರಂದು ಬೆಳಿಗ್ಗೆ 7 ಗಂಟೆ ಸುಮಾರಿಗೆ ಸಕ್ಕರೆ ಮಂಡಿ ಬಳಿಯ ಪಾಳು ಬಿದ್ದ ಮನೆ ಬಳಿ 17 ವರ್ಷದ ಬಾಲಕಿಯನ್ನು ಕರೆಸಿಕೊಂಡಿದ್ದಾನೆ. ಸ್ಥಳಕ್ಕೆ ಬಂದ ಬಾಲಕಿಯನ್ನು ಚಾಕುವಿನಿಂದ ಕತ್ತು ಕೊಯ್ದು ಪರಾರಿಯಾಗಿದ್ದ.

ಸ್ಥಳಕ್ಕೆ ಸೋಕೋ ತಂಡ, ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದರು. ಬಳಿಕ ಬಾಲಕಿ ಪೋಷಕರಿಂದ ದೂರು ಪಡೆದು ಪ್ರಕರಣ ದಾಖಲಿಸಿಕೊಂಡು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ರಾಜಸ್ಥಾನಕ್ಕೆ ಪರಾರಿ

ಕೊಲೆ ಬಳಿಕ ಆರೋಪಿ ಶಬೀಲ್, ಪಶ್ಚಾತ್ತಾಪದಿಂದ ರಾಜಸ್ಥಾನದ ಅಜ್ಮೇರ್ ದರ್ಗಾಕ್ಕೆ ಹೋಗಿದ್ದ. ದರ್ಗಾದಲ್ಲಿ ಪ್ರಾರ್ಥನೆ ಮಾಡಿ ಪ್ರಾಯಶ್ಚಿತ್ತಕ್ಕಾಗಿ ಬೇಡಿಕೊಂಡಿದ್ದ. ಶಬೀಲ್‌ನ ಬೆನ್ನು ಬಿದ್ದಿದ್ದ ವಿಶೇಷ ತಂಡದ ಸಿಬ್ಬಂದಿ ದರ್ಗಾ ಬಳಿಯೇ ಆತನನ್ನು ಬಂಧಿಸಿ ಬೆಂಗಳೂರಿಗೆ ಕರೆತಂದಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಚಾಲಕನ ಕೊಲೆ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ


ಕಿರಣ್


ಯುವರಾಜ್


ಗಂಗರಾಜ್

ಬೆಂಗಳೂರು: ಹಣಕಾಸು ವಿಚಾರಕ್ಕೆ ನಡೆದ ಜಗಳದಲ್ಲಿ ಆಟೊ ಚಾಲಕನನ್ನು ದುಷ್ಕರ್ಮಿಗಳು ಕೊಲೆ ಮಾಡಿರುವ ಘಟನೆ ಕೆ.ಆರ್. ಪುರದ ಬಳಿಯ ಟಿ.ಸಿ.ಪಾಳ್ಯದಲ್ಲಿ ಭಾನುವಾರ ನಡೆದಿದೆ.

ಕೆ.ಆರ್.ಪುರದ ಬೋವಿ ಕಾಲೊನಿಯ ಕಿರಣ್ (25) ಕೊಲೆಯಾದ ಚಾಲಕ.

ಕೋಲಾರಕ್ಕೆ ಪರಾರಿಯಾಗಿದ್ದ ಆರೋಪಿಗಳಾದ ಯುವರಾಜ್ (28) ಮತ್ತು ಗಂಗರಾಜ್‌ನನ್ನು (26) ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ ಎಂದು ರಾಮಮೂರ್ತಿನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮದ್ಯವ್ಯಸನಿಯಾದ ಕಿರಣ್, ಭಾನುವಾರ ಬೆಳಗಿನ ಜಾವ ಟಿ.ಸಿ. ಪಾಳ್ಯದಲ್ಲಿ ಯುವರಾಜ್ ಮತ್ತು ಗಂಗರಾಜ್‌ನನ್ನು ಅಡ್ಡಗಟ್ಟಿ ಮದ್ಯಕ್ಕೆ ಹಣ ಕೊಡುವಂತೆ ಬೆದರಿಕೆ ಹಾಕಿದ್ದಾನೆ. ನಂತರ ಪರಸ್ಪರರ ಮಧ್ಯೆ ಹಣಕಾಸು ವಿಚಾರಕ್ಕೆ ಜಗಳವಾಗಿದೆ. ಬಳಿಕ ಜಗಳ ವಿಕೋಪಕ್ಕೆ ತಿರುಗಿ ಯುವರಾಜ್ ಮತ್ತು ಗಂಗರಾಜ್ ಒಟ್ಟಾಗಿ ಕಿರಣ್‌ಗೆ ಹಿಗ್ಗಾಮುಗ್ಗಾ ಥಳಿಸಿ, ಕಬ್ಬಿಣದ ಸಲಾಕೆಯಿಂದ ತಲೆಗೆ ಹೊಡೆದು ಕೊಲೆ ಮಾಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಕೊಲೆ ಮಾಡಿರುವ ದೃಶ್ಯಾವಳಿ ಘಟನಾ ಸ್ಥಳದ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಅಪರಾಧ ಹಿನ್ನೆಲೆಯುಳ್ಳ ಕಿರಣ್ ವಿರುದ್ಧ ಹಲ್ಲೆ, ಗಲಾಟೆ, ದೊಂಬಿ, ಬೆದರಿಕೆ ಸಂಬಂಧ ಕೆ.ಆರ್.ಪುರ ಹಾಗೂ ರಾಮಮೂರ್ತಿನಗರ ಠಾಣೆಯಲ್ಲಿ 10ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವು. ಅಲ್ಲದೆ, ಆತ ಬಂಧಿತನಾಗಿ ಜೈಲಿಗೂ ಹೋಗಿ ಬಂದಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

40 ಗ್ರಾಂ ಚಿನ್ನದ ಗಟ್ಟಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನ ಹಾಗೂ ಚಿನ್ನಾಭರಣಗಳನ್ನು ಕಳವು ಮಾಡುತ್ತಿದ್ದ ಆರೋಪಿ ಹಾಗೂ ಕಳವು ಮಾಲು ಸ್ವೀಕರಿಸಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ಜೆ.ಸಿ. ನಗರ ಠಾಣೆ ಪೊಲೀಸರು ಬಂಧಿಸಿ, ಎರಡು ದ್ವಿಚಕ್ರ ವಾಹನ ಹಾಗೂ 40 ಗ್ರಾಂ ಚಿನ್ನದ ಗಟ್ಟಿ ವಶಪಡಿಸಿಕೊಂಡಿದ್ದಾರೆ.

ಗೋವಿಂದಪುರ ನಿವಾಸಿಗಳಾದ ಸೈಯದ್ ಸಾಹಿದ್, ಶುಭಾಂಗ್ ಷರೀಫ್ ಎಂಬುವವರನ್ನು ಬಂಧಿಸಿ, ₹6 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಗೋವಿಂದಪುರ 14ನೇ ಕ್ರಾಸ್ ಉಮರ್ ನಗರದಲ್ಲಿ ಅನುಮಾನಾಸ್ಪದವಾಗಿ ನಿಂತಿದ್ದ ಸೈಯದ್ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ದ್ವಿಚಕ್ರ ವಾಹನ ಕಳವು ಮಾಡಿರುವುದಾಗಿ ತಿಳಿಸಿದ. ಬಳಿಕ ಆತನನ್ನು ಸುದೀರ್ಘ ವಿಚಾರಣೆಗೆ ಒಳಪಡಿಸಿದಾಗ, ಶಿವಾಜಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನವನ್ನು ಕಳವು ಮಾಡಿದ್ದು, ಅದರ ಡಿಕ್ಕಿಯಲ್ಲಿದ್ದ ಸುಮಾರು 40 ಗ್ರಾಂ ಚಿನ್ನಾಭರಣವನ್ನು ತನ್ನ ದೂರದ ಸಂಬಂಧಿಯ ಮೂಲಕ ಮಾರಾಟ ಮಾಡಿರುವುದಾಗಿ ಮಾಹಿತಿ ನೀಡಿದ ಎಂದು ಪೊಲೀಸರು ತಿಳಿಸಿದರು.

ಚಿನ್ನಾಭರಣಗಳನ್ನು ಮಾರಾಟ ಮಾಡಿದ ದೂರದ ಸಂಬಂಧಿ ಶುಭಾಂಗ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಗೋವಿಂದಪುರದಲ್ಲಿರುವ ಎರಡು ಆಭರಣ ಅಂಗಡಿಗಳಿಗೆ ಮಾರಾಟ ಮಾಡಿರುವುದಾಗಿ ತಪ್ಪೊಪ್ಪಿಕೊಂಡ. ಬಳಿಕ ಎರಡು ಅಂಗಡಿಗಳಿಂದ ಆಭರಣಗಳನ್ನು ಜಪ್ತಿ ಮಾಡಲಾಗಿದೆ ಎಂದು ಹೇಳಿದರು.

ಆರೋಪಿಗಳ ಬಂಧನದಿಂದ ಜೆ.ಸಿ.ನಗರ ಪೊಲೀಸ್ ಠಾಣೆಯ ಒಂದು ದ್ವಿಚಕ್ರ ವಾಹನ ಕಳವು ಹಾಗೂ ಶಿವಾಜಿ ನಗರ ಪೊಲೀಸ್ ಠಾಣೆಯ ಒಂದು ದ್ವಿಚಕ್ರ ವಾಹನ ಮತ್ತು ಚಿನ್ನಾಭರಣ ಕಳವು ಪ್ರಕರಣ ಪತ್ತೆಯಾಗಿದೆ. ಮೊದಲ ಆರೋಪಿ ಈ ಹಿಂದೆ ಕಳ್ಳತನ ಪ್ರಕರಣದಲ್ಲಿ ಭಾಗಿಯಾಗಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

ಎಂಡಿಎಂಎ ಮಾತ್ರೆ, ಗಾಂಜಾ ವಶ

ಮಾದಕ ವಸ್ತು ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಿರುವ ರಾಮಮೂರ್ತಿ ನಗರ ಠಾಣೆ ಪೊಲೀಸರು, ₹52 ಸಾವಿರ ಮೌಲ್ಯದ 14 ಗ್ರಾಂ ಎಂಡಿಎಂಎ ಮಾತ್ರೆ ಹಾಗೂ 94 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಕೆ.ಆರ್.ಪುರ ರೈಲ್ವೆ ನಿಲ್ದಾಣದ ಸಮೀಪ ಪೊಲೀಸರು ದಾಳಿ ಮಾಡಿ, ಡ್ರಗ್ಸ್ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದರು. ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಈ ಕೃತ್ಯವೆಸಗಿರುವುದಾಗಿ ವಿಚಾರಣೆ ವೇಳೆ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದರು. ಆರೋಪಿ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ. ಡ್ರಗ್ಸ್ ಎಲ್ಲಿಂದ ಪೂರೈಕೆಯಾಗಿದೆ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ ಎಂದರು.

ಪರಿಸರ ಮಾಲಿನ್ಯ: ಇಂದು ಪ್ರತಿಭಟನೆ

ಬೆಂಗಳೂರು: ಕೊಪ್ಪಳ ಜಿಲ್ಲೆಯಲ್ಲಿ ಪರಿಸರ ಮಾಲಿನ್ಯವನ್ನು ತಡೆಯುವಂತೆ ಆಗ್ರಹಿಸಿ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣೆ ವೇದಿಕೆ ವತಿಯಿಂದ ಮಾರ್ಚ್ 23ರ ಬೆಳಿಗ್ಗೆ 11.30ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

'ಜಿಲ್ಲೆಯ ಪರಿಸರ, ರೈತರ ಬದುಕು ಮತ್ತು ಸಾರ್ವಜನಿಕ ಆರೋಗ್ಯದ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು, ನಡೆಯುತ್ತಿರುವ ಹೋರಾಟ 134ನೇ ದಿನಕ್ಕೆ ತಲುಪಿದೆ. ಇದರ ಮುಂದುವರಿದ ಭಾಗವಾಗಿ ರಾಜ್ಯ ಮಟ್ಟದ ಪ್ರತಿಭಟನೆ ನಡೆಸಲಾಗುತ್ತಿದೆ' ಎಂದು ಸಂಘಟಕರು ತಿಳಿಸಿದ್ದಾರೆ.

'ಬಲ್ಡೋಟ ಸೇರಿದಂತೆ ಯಾವುದೇ ಹೊಸ ಕಾರ್ಖಾನೆಗಳನ್ನು ಕೊಪ್ಪಳ ತಾಲ್ಲೂಕಿನಲ್ಲಿ ವಿಸ್ತರಣೆ ಮಾಡಬಾರದು, ಕೈಗಾರಿಕೆಗಳ ಅತಿಯಾದ ಕೇಂದ್ರೀಕರಣವನ್ನು ನಿಲ್ಲಿಸಬೇಕು, ತುಂಗಭದ್ರಾ ನದಿಯನ್ನು ಮಾಲಿನ್ಯಗೊಳಿಸುತ್ತಿರುವ ಕಾರ್ಖಾನೆಗಳನ್ನು ತಕ್ಷಣ ಸ್ಥಗಿತಗೊಳಿಸಬೇಕು' ಎಂಬ ಬೇಡಿಕೆಗಳನ್ನು ಹೋರಾಟಗಾರರು ಮುಂದಿಟ್ಟಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷ: ಸಂಸದ ಡಾ.ಸಿ.ಎನ್. ಮಂಜುನಾಥ್ ಕಳವಳ

'ಅರ್ಥವ್ಯವಸ್ಥೆ ಮೇಲೆ ಪರಿಣಾಮ ಸಾಧ್ಯತೆ'

ಪ್ರಜಾವಾಣಿ ವಾರ್ತೆ


ಡಾ.ಸಿ.ಎನ್. ಮಂಜುನಾಥ್

ಬೆಂಗಳೂರು: 'ಪಶ್ಚಿಮ ಏಷ್ಯಾ ಸಂಘರ್ಷವು ರಾಸಾಯನಿಕ ಯುದ್ಧವಾಗಿ ಮಾರ್ಪಡುವ ಸಾಧ್ಯತೆಯಿದ್ದು, ಯುದ್ಧವು ಹೀಗೆಯೇ ಮುಂದುವರಿದಲ್ಲಿ ಭಾರತ ಸೇರಿದಂತೆ ಹಲವು ರಾಷ್ಟ್ರಗಳ ಆರ್ಥಿಕ ವ್ಯವಸ್ಥೆ ಹಾಗೂ ಅಗತ್ಯ ವಸ್ತುಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ' ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟರು.

ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಸಂಘವು ನಗರದಲ್ಲಿ ಹಮ್ಮಿಕೊಂಡಿದ್ದ 13ನೇ ತ್ರೈವಾರ್ಷಿಕ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, 'ಇಸ್ರೇಲ್–ಅಮೆರಿಕಾ ಮತ್ತು ಇರಾನ್ ನಡುವಿನ ಸಂಘರ್ಷ ಮುಂದುವರಿದಿದೆ. ಜಗತ್ತಿನ ಒಳಿತಿಗಾಗಿ ಈ ರಾಷ್ಟ್ರಗಳು ಪರಸ್ಪರ ಒಪ್ಪಂದದ ಮೂಲಕ ಯುದ್ಧವನ್ನು ನಿಲ್ಲಿಸಬೇಕಿದೆ' ಎಂದರು.

'ಬದಲಾಗುತ್ತಿರುವ ಜೀವನಶೈಲಿ, ಅತಿಯಾದ ಒತ್ತಡ, ಅನಿಯಂತ್ರಿತ ಆಹಾರ ಪದ್ಧತಿಯಿಂದ ಯುವಜನರಲ್ಲಿಯೂ ಹೃದಯಾಘಾತ ಮತ್ತು ಪಾರ್ಶ್ವವಾಯು ಸಮಸ್ಯೆ ಹೆಚ್ಚುತ್ತಿದೆ. ಈ ಹಿಂದೆ ವೃದ್ಧರು ಈ ಸಮಸ್ಯೆಗಳಿಗೆ ಒಳಗಾಗುತ್ತಿದ್ದರು. ಆದರೆ, ಈಗ ಎಲ್ಲ ವಯೋಮಾನದವರಲ್ಲಿಯೂ ಈ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ' ಎಂದು ಹೇಳಿದರು.

'ದಶಕದ ಹಿಂದೆ ಯುವಕರು ತಮ್ಮ ವೃದ್ಧ ತಂದೆ-ತಾಯಿಯನ್ನು ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಆದರೆ, ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ವೃದ್ಧ ತಂದೆ-ತಾಯಿಗಳು ತಮ್ಮ ಮಕ್ಕಳನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿರುವುದು ಸಾಮಾನ್ಯವಾಗಿದೆ. ಇದು ಕೇವಲ ಬದಲಾವಣೆಯಾಗಿರದೆ, ಎಚ್ಚರಿಕೆಯ ಘಂಟೆಯಾಗಿದೆ' ಎಂದು ಹೇಳಿದರು.


ಕೆನರಾ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ಎಸ್.ಕೆ. ಮಜುಂದಾರ್, ಮಾನವ ಸಂಪನ್ಮೂಲ ವಿಭಾಗದ ಮಹಾಪ್ರಬಂಧಕ ಕೆ.ವಿ. ರಮಣ ಮೂರ್ತಿ, ಕೆನರಾ ಬ್ಯಾಂಕ್ ಅಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಕೆ. ರವಿಕುಮಾರ್, ಸಂಘದ ಅಧ್ಯಕ್ಷ ಎ.ಎನ್. ಕೃಷ್ಣ ಮೂರ್ತಿ, ಪ್ರಧಾನ ಕಾರ್ಯದರ್ಶಿ ಜೆ.ಎಸ್. ಜಗದೀಶ್, ಮಾಜಿ ಪ್ರಧಾನ ಕಾರ್ಯದರ್ಶಿ ಸುಧಾಕರ್ ಶೆಟ್ಟಿ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಸಂಘದ ಸಮ್ಮೇಳನ
- ಜಗತ್ತಿನ ಒಳಿತಿಗಾಗಿ ಯುದ್ಧ ನಿಲ್ಲಿಸುವುದು ಅಗತ್ಯ: ಅಭಿಪ್ರಾಯ
- ಯುವ ಜನರಲ್ಲೂ ಹೃದಯಾಘಾತ: ಆತಂಕ

ಪ್ಲಾಸ್ಟಿಕ್ ಸರ್ಜರಿ

ಆತ್ಮವಿಶ್ವಾಸ ಹೆಚ್ಚಿಸುವ ಮಾದರಿ



• ಪ್ರದೀಪ್ ಎಸ್. ವೆಂಕಟರಾಮ್

ಪಿಯುಸಿ ಮುಂದೇನು? ಭಾಗ –6

ವರ್ಷಗಳ ಹಿಂದೆ ನಡೆದ ರಸ್ತೆ ಅಪಘಾತವೊಂದರಲ್ಲಿ ಒಬ್ಬ ಯುವಕನ ಮುಖದ ಭಾಗ ಗಂಭೀರವಾಗಿ ಹಾನಿಗೊಳಗಾಗಿತ್ತು. ಚೇತರಿಕೆಯ ನಂತರ ಅವನು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದಕ್ಕೂ ಸಾಮಾನ್ಯ ಜೀವನಕ್ಕೆ ಮರಳುವುದಕ್ಕೂ ಮುಜುಗರ ಪಟ್ಟುಕೊಳ್ಳುತ್ತಿದ್ದ. ಆದರೆ, ಪ್ಲಾಸ್ಟಿಕ್ ಮತ್ತು ಪುನರ್‌ನಿರ್ಮಾಣ ಶಸ್ತ್ರಚಿಕಿತ್ಸೆ (ಪ್ಲಾಸ್ಟಿಕ್ ಆ್ಯಂಡ್ ರೀಕನ್‌ಸ್ಟ್ರಕ್ಟಿವ್ ಸರ್ಜರಿ) ಮೂಲಕ ವೈದ್ಯರು ಅವನ ಮುಖದ ಭಾಗಗಳನ್ನು ಯಶಸ್ವಿಯಾಗಿ ಮರುನಿರ್ಮಿಸಿದರು. ಬಳಿಕ ಅವನು ತನ್ನ ಉದ್ಯೋಗಕ್ಕೆ ಹಾಗೂ ಸಾಮಾನ್ಯ ಜೀವನಕ್ಕೆ ಮರಳಿದ. ಆ ಸಂದರ್ಭದಲ್ಲಿ ಅವನು ವೈದ್ಯರಿಗೆ ಹೇಳಿದ ಮಾತು: 'ನನ್ನ ಮುಖವನ್ನಷ್ಟೇ ಅಲ್ಲ, ನನ್ನ ಆತ್ಮವಿಶ್ವಾಸವನ್ನೂ ನೀವು ಮರಳಿ ಕೊಟ್ಟಿದ್ದೀರಿ'.

ಇದು ಒಂದು ಉದಾಹರಣೆ ಮಾತ್ರ. ಜನ್ಮತಃ ತುಟಿಯ ದೋಷ (ಕ್ಲೆಫ್ಟ್ ಲಿಪ್) ಹೊಂದಿದ್ದ ಬಾಲಕನಿಗೆ ಶಸ್ತ್ರಚಿಕಿತ್ಸೆಯ ನಂತರ ಸ್ಪಷ್ಟವಾಗಿ ಮಾತನಾಡಲು ಮತ್ತು ಸಹಜವಾಗಿ ನಗಲು ಸಾಧ್ಯವಾಯಿತು. ಮತ್ತೊಂದು ಉದಾಹರಣೆಯಲ್ಲಿ, ಕ್ಯಾನ್ಸರ್ ಚಿಕಿತ್ಸೆಯ ನಂತರ ಮುಖದ ಭಾಗಕ್ಕೆ ಹಾನಿಯಾಗಿದ್ದ ರೋಗಿಗೆ ಪುನರ್‌ನಿರ್ಮಾಣ ಶಸ್ತ್ರಚಿಕಿತ್ಸೆಯಿಂದ ಮತ್ತೆ ಸಾಮಾನ್ಯ ಜೀವನ ನಡೆಸುವ ಅವಕಾಶ ದೊರಕಿತು.

ಈ ರೀತಿ, ಹಾನಿಗೊಳಗಾದ ದೇಹದ ಅಂಗಾಂಶಗಳು ಮತ್ತು ಅಂಗಗಳ ಕಾರ್ಯಕ್ಷಮತೆ ಹಾಗೂ ರೂಪವನ್ನು ಮರುಸ್ಥಾಪಿಸುವುದರ ಜೊತೆಗೆ, ಅಚ್ಚರಿ ಹುಟ್ಟಿಸುವ ಪರಿವರ್ತನೆಗಳನ್ನು ಸಾಧ್ಯವಾಗಿಸುವ ವೈದ್ಯಕೀಯ ವಿಭಾಗವೇ ಪ್ಲಾಸ್ಟಿಕ್ ಮತ್ತು ಪುನರ್‌ನಿರ್ಮಾಣ ಶಸ್ತ್ರಚಿಕಿತ್ಸೆ.

ಬಹುತೇಕರು ಪ್ಲಾಸ್ಟಿಕ್ ಸರ್ಜರಿ ಎಂದರೆ ಬರೀ ಸೌಂದರ್ಯ ಹೆಚ್ಚಿಸುವ ಚಿಕಿತ್ಸೆ ಎಂದು ಭಾವಿಸುತ್ತಾರೆ. ಆದರೆ ವಾಸ್ತವದಲ್ಲಿ, ಈ ವಿಭಾಗವು ಅಪಘಾತಗಳು, ಸುಟ್ಟ ಗಾಯಗಳು, ಜನ್ಮಜಾತ ದೋಷಗಳು ಹಾಗೂ ಕ್ಯಾನ್ಸರ್ ಚಿಕಿತ್ಸೆಯ ನಂತರದ ಸಂದರ್ಭಗಳಲ್ಲಿ ದೇಹದ ಭಾಗಗಳ ಪುನರ್‌ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಈ ಕ್ಷೇತ್ರದ ವೈದ್ಯರು ದೇಹದ ಪುನರ್‌ನಿರ್ಮಾಣದ ಮೂಲಕ ರೋಗಿಗಳ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಅವರ ಬದುಕಿನ ಗುಣಮಟ್ಟವನ್ನು ಉತ್ತಮಗೊಳಿಸುತ್ತಾರೆ. ಆದ್ದರಿಂದ, ಪ್ಲಾಸ್ಟಿಕ್ ಸರ್ಜನ್‌ಗಳನ್ನು 'ಜೀವನವನ್ನು ಮರುರೂಪಿಸುವ ಶಿಲ್ಪಿಗಳು' ಎಂದು ಕರೆಯಬಹುದು.

ಶಿಕ್ಷಣ, ಉದ್ಯೋಗ

ಪರಿಣತ ಪ್ಲಾಸ್ಟಿಕ್ ಸರ್ಜನ್ ಆಗಲು ದೀರ್ಘಾವಧಿಯ ವೈದ್ಯಕೀಯ ಶಿಕ್ಷಣ ಮತ್ತು ತರಬೇತಿ ಅಗತ್ಯ

1. ಎಂಬಿಬಿಎಸ್ (5½ ವರ್ಷ)
2. ಎಂಎಸ್ (3 ವರ್ಷ)
3. ಎಂಸಿಎಚ್ (ಸೂಪರ್ ಸ್ಪೆಷಲೈಸೇಶನ್– 3 ವರ್ಷ)

ಶಿಕ್ಷಣದ ನಂತರ ಪ್ಲಾಸ್ಟಿಕ್ ಸರ್ಜನ್, ಕಾಸ್ಮೆಟಿಕ್ ಸರ್ಜನ್, ಪುನರ್‌ನಿರ್ಮಾಣ ಸರ್ಜನ್, ಬರ್ನ್ ಸ್ಪೆಷಲಿಸ್ಟ್, ಅಧ್ಯಾಪನದಂತಹ ಉದ್ಯೋಗಾವಕಾಶಗಳಿವೆ.

ಸೌಂದರ್ಯ ಮತ್ತು ಆತ್ಮವಿಶ್ವಾಸ

ಪ್ಲಾಸ್ಟಿಕ್ ಸರ್ಜರಿಯ ವಿಭಾಗಗಳಲ್ಲಿ ಕಾಸ್ಮೆಟಿಕ್ ಸರ್ಜರಿ ಪ್ರಮುಖವಾಗಿದೆ. ದೇಹದ ಸಣ್ಣಪುಟ್ಟ ದೋಷಗಳನ್ನು ಸರಿಪಡಿಸಿ, ರೂಪವನ್ನು ಸುಂದರಗೊಳಿಸುವುದರ ಜೊತೆಗೆ ವ್ಯಕ್ತಿಯ ಆತ್ಮವಿಶ್ವಾಸವನ್ನು ಹೆಚ್ಚಿಸುವುದು ಇದರ ಉದ್ದೇಶ. ಚರ್ಮದ ಕಸಿ, ಮೂಗಿನ ಆಕಾರವನ್ನು ಸರಿಪಡಿಸುವ ರೈನೋಪ್ಲಾಸ್ಟಿ, ಮುಖದ ಮಡಚುಗಳನ್ನು ಕಡಿಮೆ ಮಾಡುವ ಫೇಸ್ ಲಿಫ್ಟ್, ಕಣ್ಣು ಮತ್ತು ತುಟಿಗಳ ಸೌಂದರ್ಯ ಹೆಚ್ಚಿಸುವ ಚಿಕಿತ್ಸೆಗಳು ಹಾಗೂ ಚರ್ಮದ ಮರುಯೌವನಕ್ಕಾಗಿ ಲೇಸರ್ ವಿಧಾನಗಳು... ಈ ವಿಭಾಗದಲ್ಲಿ ಸೇರಿವೆ. ಇದರ ಜೊತೆಗೆ, ವೈದ್ಯಕೀಯ ತಂತ್ರಜ್ಞಾನದಲ್ಲಿನ ಪ್ರಗತಿ– ಫ್ಲ್ಯಾಪ್ ಸರ್ಜರಿ, ಮೈಕ್ರೋಸರ್ಜರಿ, ಲೇಸರ್ ತಂತ್ರಜ್ಞಾನ, 3D ಇಮೇಜಿಂಗ್‌ನಂತಹ ವಿಧಾನಗಳು– ಈ ಚಿಕಿತ್ಸೆಯನ್ನು ಹೆಚ್ಚು ಸುರಕ್ಷಿತ ಮತ್ತು ಪರಿಣಾಮಕಾರಿಯಾಗಿಸಿವೆ. ಹೀಗಾಗಿ, ಈ ಕ್ಷೇತ್ರವು ವೇಗವಾಗಿ ಬೆಳೆಯುತ್ತಿರುವ ವೈದ್ಯಕೀಯ ವಿಭಾಗವಾಗಿದೆ.

ಚಿಕಿತ್ಸೆಗಳಲ್ಲಿ ತಜ್ಞ ವೈದ್ಯರ ಜೊತೆಗೆ ಅರೆವೈದ್ಯಕೀಯ (ಪ್ಯಾರಾಮೆಡಿಕಲ್) ಸಿಬ್ಬಂದಿಯ ಪಾತ್ರ ಮಹತ್ವದ್ದಾಗಿದೆ. ಉದಾಹರಣೆಗೆ: ಆಪರೇಷನ್ ಥಿಯೇಟರ್ ಟೆಕ್ನಾಲಜಿಸ್ಟ್, ಅನಸ್ತೇಷಿಯಾ ಟೆಕ್ನೀಷಿಯನ್, ಸರ್ಜಿಕಲ್ ನರ್ಸ್, ಫಿಸಿಯೋಥೆರಪಿಸ್ಟ್, ಮೆಡಿಕಲ್ ಇಮೇಜಿಂಗ್ ತಜ್ಞರು ಇತ್ಯಾದಿ. ಈ ವೃತ್ತಿಗಳನ್ನು ಅನುಸರಿಸಲು 'ನೀಟ್' ಪ್ರವೇಶ ಪರೀಕ್ಷೆಯ ಮೂಲಕ ಬಿ.ಎಸ್ಸಿ (ಅರೆವೈದ್ಯಕೀಯ) ಮಾಡಬಹುದು.

ತಜ್ಞ ವೈದ್ಯರು ಮತ್ತು ಅರೆವೈದ್ಯಕೀಯ ಪದವೀಧರರು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು, ಮೆಡಿಕಲ್ ಕಾಲೇಜುಗಳು, ವಿಶೇಷ ಕಾಸ್ಮೆಟಿಕ್ ಕ್ಲಿನಿಕ್‌ಗಳು ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಬಹುದು.

ಲೇಖಕ: ಶಿಕ್ಷಣ ತಜ್ಞ, ವೃತ್ತಿ ಸಲಹೆಗಾರ

ಉನ್ನತ ಶಿಕ್ಷಣಕ್ಕಾಗಿ ಪ್ರತಿಷ್ಠಿತ ಸಂಸ್ಥೆಗಳು

ದೆಹಲಿಯ ಏಮ್ಸ್, ಬೆಂಗಳೂರಿನ ಬಿಎಂಸಿ ಮತ್ತು ಸೇಂಟ್ ಜಾನ್ಸ್, ಕೆಎಂಸಿ ಮಂಗಳೂರು, ಸಿಎಂಸಿ ವೆಲ್ಲೂರು, ಜಿಪ್ಮರ್ ಪುದುಚೇರಿ...

ಎಡ್ಯುವರ್ಸ್™ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ನಿಮ್ಮ ಶೈಕ್ಷಣಿಕ ಮೇಳ ಬೆಂಗಳೂರು, ಹುಬ್ಬಳ್ಳಿಯಲ್ಲಿ

ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಲಿರುವ ಕರ್ನಾಟಕದ ಅತಿದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್–2026' ಏಪ್ರಿಲ್‌ನಲ್ಲಿ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ನಡೆಯಲಿದೆ.

ಹದಿನೈದು ವರ್ಷಗಳಿಂದ ಯಶಸ್ವಿಯಾಗಿ ಆಯೋಜಿಸುತ್ತಾ ಬರಲಾಗಿರುವ ಈ ಮೇಳದಲ್ಲಿ, ಶಿಕ್ಷಣ ಕ್ಷೇತ್ರದ ಹಲವು ಪರಿಣತರು ಭಾಗವಹಿಸಲಿದ್ದಾರೆ. ತಜ್ಞರೊಂದಿಗೆ ಸಂವಾದ, ಉಪನ್ಯಾಸ ಹಾಗೂ ಚರ್ಚೆ ನಡೆಯಲಿದೆ. ಸಿಇಟಿ ಮತ್ತು ಕಾಮೆಡ್–ಕೆ ಕುರಿತು ವಿಶೇಷ ಗೋಷ್ಠಿಗಳು ಇರಲಿವೆ. 100ಕ್ಕೂ ಹೆಚ್ಚು ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳು ಪಾಲ್ಗೊಳ್ಳಲಿವೆ.

'ಪಿಯುಸಿ ನಂತರ ಮುಂದೇನು?' ಎಂಬ ಪ್ರಶ್ನೆ ಹೊಂದಿರುವ ವಿದ್ಯಾರ್ಥಿಗಳು ಹಾಗೂ ಪೋಷಕರು ಮೇಳದಲ್ಲಿ ಭಾಗವಹಿಸುವ ಮೂಲಕ ತಕ್ಕ ಉತ್ತರ ಪಡೆಯಬಹುದಾಗಿದೆ. ಶೈಕ್ಷಣಿಕ ಕ್ಷೇತ್ರದಲ್ಲಿನ ಹಲವಾರು ಅವಕಾಶಗಳ ಬಗ್ಗೆ ಒಂದೇ ಸೂರಿನಡಿ ಮಾಹಿತಿ ಲಭಿಸುವುದರಿಂದ ಅವರ ಸಮಯವೂ ಉಳಿಯುತ್ತದೆ.

ಹಲವು ಶೈಕ್ಷಣಿಕ ಸಂಸ್ಥೆಗಳು ಒದಗಿಸುತ್ತಿರುವ ಕೋರ್ಸ್‌ಗಳು, ಅವುಗಳಿಗಿರುವ ಉದ್ಯೋಗ ಅವಕಾಶ, ಸೌಲಭ್ಯ ಹಾಗೂ ಕಾಲೇಜು ಶುಲ್ಕಗಳ ಬಗೆಗಿನ ಮಾಹಿತಿಯನ್ನು ಏಕಕಾಲಕ್ಕೆ ಪಡೆದು, ಸೂಕ್ತವಾಗಿರುವುದನ್ನು ಆಯ್ಕೆ ಮಾಡಿಕೊಳ್ಳಬಹುದು. ಸಿಇಟಿ ಹಾಗೂ ನೀಟ್‌ಗೆ ಸಂಬಂಧಪಟ್ಟಂತೆ ನಡೆಯಲಿರುವ ಅಣಕು ಪರೀಕ್ಷೆಗಳಲ್ಲಿ ಭಾಗವಹಿಸಬಹುದು.

ಮೇಳದಲ್ಲಿ ಪಾಲ್ಗೊಳ್ಳುತ್ತಿರುವ ಸಂಸ್ಥೆಗಳು: ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್, ರೇವಾ ಯೂನಿವರ್ಸಿಟಿ, ಪ್ರೆಸಿಡೆನ್ಸಿ ಯೂನಿವರ್ಸಿಟಿ, ಸಿಎಂಆರ್ ಯೂನಿವರ್ಸಿಟಿ, ಸಪ್ತಗಿರಿ ಎನ್‌ಪಿಎಸ್ ಯೂನಿವರ್ಸಿಟಿ, ಕೆಎಲ್‌ಇ ವೈದ್ಯಕೀಯ ವಿಶ್ವವಿದ್ಯಾಲಯ, ವಿಐಟಿ, ಈಸ್ಟ್ ಪಾಯಿಂಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಕೇಂಬ್ರಿಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ರಾಜರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜು, ಈಸ್ಟ್ ವೆಸ್ಟ್ ಸಮೂಹ ಸಂಸ್ಥೆ, ಸಂಭ್ರಮ್ ಇನ್‌ಸ್ಟಿಟ್ಯೂಷನ್ಸ್, ಎಂಎಸ್ ಎಂಜಿನಿಯರಿಂಗ್ ಕಾಲೇಜು, ಎಬಿಬಿಎಸ್– ಆಚಾರ್ಯ ಬೆಂಗಳೂರು ಬಿ ಸ್ಕೂಲ್, ಎಐಎಂಎಸ್– ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್, ಅಮೃತ ವಿಶ್ವ ವಿದ್ಯಾಪೀಠಂ, ಎಸಿಎಸ್ ಎಂಜಿನಿಯರಿಂಗ್ ಕಾಲೇಜು, ಡಾ. ಎಸ್.ಆರ್. ಚಂದ್ರಶೇಖರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್, ಐಡಿಯಾ ಸ್ಮಾರ್ಟ್ ಲರ್ನಿಂಗ್ (ವಿಷನ್ ಅಕಾಡೆಮಿ), ಪಿಇಎಸ್ ಯೂನಿವರ್ಸಿಟಿ, ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಆರ್‌ಆರ್ ಇನ್‌ಸ್ಟಿಟ್ಯೂಷನ್ಸ್ ಎಂಜಿನಿಯರಿಂಗ್ ಕಾಲೇಜಸ್, ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು (ಮೈಸೂರು), ಕೆಳದಿ ಶಿವಪ್ಪ ನಾಯಕ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಆ್ಯಂಡ್ ಹಾರ್ಟಿಕಲ್ಚರಲ್ ಸೈನ್ಸಸ್ (ಇರುವಕ್ಕಿ), ಎಂಐಟಿ ವರ್ಲ್ಡ್ ಪೀಸ್ ಯೂನಿವರ್ಸಿಟಿ (ಪುಣೆ), ಐಎಎಸ್ ಬಾಬಾ, ಅಮಿಟಿ ಯೂನಿವರ್ಸಿಟಿ, ಬಿರ್ಲಾ ಗ್ಲೋಬಲ್ ಯೂನಿವರ್ಸಿಟಿ, ಐಎಸ್‌ಬಿಆ್ಯಂಡ್‌ಎಂ, ಎಸ್‌ಆರ್‌ಎನ್ ಆದರ್ಶ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಐಸಿಎಫ್‌ಎಐ, ದಿ ಆಕ್ಸ್‌ಫರ್ಡ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್, ಎಸ್‌ಡಿಎಂ ಎಜುಕೇಷನ್ ಸೊಸೈಟಿ (ಉಜಿರೆ), ಪಾರುಲ್ ಯೂನಿವರ್ಸಿಟಿ, ಆರ್‌ವಿ ಯೂನಿವರ್ಸಿಟಿ, ಮಾಹೆ, ಎಸ್‌ಆರ್‌ಎಂ ಯೂನಿವರ್ಸಿಟಿ, ಕಮ್ಮವಾರಿ ಸಂಘಂ, ಸಾಯಿ ವಿದ್ಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಡೆಕ್ಕನ್ ಪಿಯು ಕಾಲೇಜು, ಶೇಷಾದ್ರಿಪುರಂ ಕಾಲೇಜು, ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಹತ್ತು ಹಲವು.

ಸಿಇಟಿ ಮತ್ತು ನೀಟ್ ಅಣಕು ಪರೀಕ್ಷೆ ಬರೆಯಲು ಇಚ್ಛಿಸುವವರು ಪಕ್ಕದ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದು.

ಬೆಂಗಳೂರಿನಲ್ಲಿ

ನಡೆಯುವ ದಿನಾಂಕ: ಏಪ್ರಿಲ್ 4 ಮತ್ತು 5
ಸ್ಥಳ: ಗಾಯತ್ರಿ ವಿಹಾರ, ಅರಮನೆ ಮೈದಾನ
ಸಮಯ: ಬೆಳಿಗ್ಗೆ 9ರಿಂದ ಸಂಜೆ 6
ಉಚಿತ ಪ್ರವೇಶ

ಹುಬ್ಬಳ್ಳಿಯಲ್ಲಿ

ನಡೆಯುವ ದಿನಾಂಕ: ಏಪ್ರಿಲ್ 11 ಮತ್ತು 12
ಸ್ಥಳ: ನೆಹರೂ ಕ್ರೀಡಾಂಗಣ, ಜೆ.ಸಿ. ನಗರ
ಸಮಯ: ಬೆಳಿಗ್ಗೆ 9ರಿಂದ ಸಂಜೆ 6
ಉಚಿತ ಪ್ರವೇಶ

ಹೆತ್ತವರನ್ನೆ ಮರೆಸಿತೇ ಅಮೆರಿಕ ವಾಸ?



ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

• ನಮ್ಮ ಒಬ್ಬಳೇ ಮಗಳು ಎಂಜಿನಿಯರಿಂಗ್ ಓದಿದ ನಂತರ ಹೆಚ್ಚಿನ ಅಧ್ಯಯನಕ್ಕಾಗಿ ಅಮೆರಿಕಕ್ಕೆ ಹೋದಳು. ಅದು ಅಮ್ಮ ಮತ್ತು ಮಗಳ ಕನಸಾಗಿತ್ತು. ಓದಿದ ನಂತರ ವಾಪಸಾಗಿ ಇಲ್ಲಿಯೇ ಒಳ್ಳೆಯ ಕೆಲಸಕ್ಕೆ ಸೇರುತ್ತೇನೆ ಎಂದಿದ್ದಳು. ಆದರೆ ಓದು ಮುಗಿಸಿ ಅಲ್ಲಿಯೇ ಕೆಲಸಕ್ಕೆ ಸೇರಿಕೊಂಡಳು. ಈಗ ಆಕೆ ಅಮೆರಿಕವನ್ನು ಬಿಟ್ಟು ವಾಪಸ್ ನಮ್ಮಲ್ಲಿಗೆ ಬರುತ್ತಾಳೆ ಎಂದು ಅನ್ನಿಸುತ್ತಿಲ್ಲ. ಆಕೆಗೆ ಮದುವೆ ಬಗ್ಗೆ ಆಸಕ್ತಿ ಇದ್ದಂತಿಲ್ಲ. ನಮಗೆ ದಿಗಿಲಾಗಿದೆ. ಆಸ್ತಿಪಾಸ್ತಿ ಇದೆ. ಅವಳನ್ನು ಬಿಟ್ಟರೆ ನಮಗೆ ದಿಕ್ಕಿಲ್ಲ. ಅವಳಿಗೆ ನಮ್ಮ ಮನಃಸ್ಥಿತಿ ಅರ್ಥವಾಗುವುದಿಲ್ಲ. ಮಗಳು ಎಲ್ಲಿ ಬೇಕೋ ಅಲ್ಲಿ ಸುಖವಾಗಿರಲಿ, ನೀವು ಚಿಂತಿಸಬೇಡಿ ಅಂತ ನನ್ನ ಹೆಂಡತಿ ಹೇಳುತ್ತಿರುತ್ತಾಳೆ. ನನಗೆ ಜೀವನದಲ್ಲಿ ನಿರಾಸೆಯಾಗಿದೆ. ವೈರಾಗ್ಯ ಬಂದಿದೆ. ಏನು ಮಾಡಲಿ ತಿಳಿಯುತ್ತಿಲ್ಲ.

ರಾಮ್‌ಚರಣ ಸಾಗರ್, ಗುಂಡ್ಲುಪೇಟೆ

ನಿಮ್ಮ ವಯಸ್ಸಿಗೆ ನಿಮಗಾಗುತ್ತಿರುವ ಮಾನಸಿಕ ಯಾತನೆ, ಅನಾಥಪ್ರಜ್ಞೆ ನನಗೆ ಅರ್ಥವಾಗುತ್ತದೆ. ಜೀವನ ಎಂದರೆ ಹೀಗೇನೆ. ಒಬ್ಬೊಬ್ಬರದ್ದು ಒಂದೊಂದು ವ್ಯಥೆ. ಚಿಂತಿಸುವುದು ಸರಿಯಲ್ಲ. ಚಕ್ರವರ್ತಿಯಾಗಿದ್ದ ದಶರಥನಿಗೆ ಪುತ್ರ ವ್ಯಾಮೋಹದಿಂದ ನರಳುವಂತಾಗಿದ್ದು 'ರಾಮಾಯಣ'. ನಿಮ್ಮ ಮಗಳು ಅಮೆರಿಕಕ್ಕೆ ಹೋದಾಗ ನೀವು ಅನುಭವಿಸಿದ ಹೆಮ್ಮೆ, ಸಡಗರ, ಸಂಭ್ರಮವನ್ನು ನೆನಪಿಸಿಕೊಳ್ಳಿ. ಅವಳಿಗೆ ಬೇಕಾದಂತೆ ಬದುಕುವ ಸ್ವಾತಂತ್ರ್ಯ, ಧೈರ್ಯ ಹಾಗೂ ಅರ್ಹತೆಯನ್ನು ಪಾಲಕರಾಗಿ ನೀವು ಕೊಟ್ಟಿದ್ದೀರಿ. ಅದಕ್ಕಾಗಿ ಖುಷಿಪಡಿ. ಒಳ್ಳೆಯ ಪಾಲಕರಾಗಿದ್ದೀರಿ ಎನ್ನುವ ಸಮಾಧಾನ ನಿಮಗೆ ಇರಬೇಕು. ಇದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳುವ ಅಗತ್ಯವಿಲ್ಲ.

ಪ್ರತಿಕೂಲ ಪರಿಸ್ಥಿತಿಯಲ್ಲಿದ್ದೂ ಅನೇಕರು ಜೀವನದಲ್ಲಿ ಸಾಧನೆ ಮಾಡಿರುತ್ತಾರೆ. ಎಷ್ಟೋ ಒಳ್ಳೊಳ್ಳೆಯ ಸಂಸ್ಕಾರವಂತರ ಮಕ್ಕಳು ಕಿಡಿಗೇಡಿಗಳೂ ಕಿರಾತಕರೂ ಆಗಿರುವುದಿದೆ. ಸಾಧಾರಣ ಸಂಸಾರದಲ್ಲಿ ಹುಟ್ಟಿ ಒಳ್ಳೊಳ್ಳೆಯ ಬದುಕನ್ನು ಕಟ್ಟಿಕೊಂಡವರಿದ್ದಾರೆ. ಇಲ್ಲಿ ಯಾವುದನ್ನೂ ಹೀಗೆಯೇ ಎಂದು ಹೇಳಲಿಕ್ಕಾಗುವುದಿಲ್ಲ.

ಮಗಳು ಎಳವೆಯಿಂದಲೇ ನಿಮ್ಮ ವಾತ್ಸಲ್ಯದಲ್ಲಿ ಬೆಳೆದಿದ್ದಾಳೆ. ದೈವದತ್ತವಾದ ಪ್ರತಿಭೆಯಿಂದ ಚೆನ್ನಾಗಿ ಅಧ್ಯಯನ ಮಾಡಿ, ಒಳ್ಳೆಯ ಸ್ಥಾನವನ್ನು ತಲುಪಿದ್ದಾಳೆ. ಅವಳಿಗೆ ಅಂಥ ವಾತಾವರಣವನ್ನು ಸೃಷ್ಟಿಸಿಕೊಟ್ಟ ನೀವು ನಿಜಕ್ಕೂ ಅಭಿನಂದನಾರ್ಹರು. ಈಗ ಅವಳು ಯಶಸ್ಸಿನ ಕುದುರೆಯ ಮೇಲಿನ ಪ್ರಯಾಣದ ರುಚಿಯನ್ನು ಕಂಡಿದ್ದಾಳೆ. ಗುಡ್ಡದಾಚೆಯ ಗುಡ್ಡವನ್ನೇರುವ ಹುಮ್ಮಸ್ಸಿನಲ್ಲಿದ್ದಾಳೆ. ಅವಳ ಎದುರಿನ ಜಗತ್ತನ್ನು ನೀವು ನೋಡಲಿಕ್ಕೆ ಸಾಧ್ಯವಾಗುವುದಿಲ್ಲ. ನಿಮ್ಮ ಪ್ರಪಂಚವನ್ನು ನೋಡುವ ತಾಳ್ಮೆ, ಜಾಣ್ಮೆ ಅವಳಿಗೆ ಇರುವುದಿಲ್ಲ. ಅವಳು ಸುರಕ್ಷಿತವಾಗಿಯೂ ಯಶಸ್ವಿಯಾಗಿಯೂ ಮುಂದು ವರಿಯುತ್ತಿದ್ದಾಳೆ. ಅವಳ ಬಗ್ಗೆಯಾಗಲೀ ನಿಮ್ಮ ಬಗ್ಗೆಯಾಗಲೀ ವೃಥಾ ನಕಾರಾತ್ಮಕವಾಗಿ ಚಿಂತಿಸಬೇಡಿ. ಅದರಿಂದ ನಿಮ್ಮ ಆರೋಗ್ಯ ಕ್ಷೀಣಿಸುತ್ತದೆ.

ನೀವು ನಿಮ್ಮಷ್ಟಕ್ಕೆ ನಿಮ್ಮ ಕೆಲಸಕಾರ್ಯಗಳನ್ನು ಮಾಡುತ್ತಾ ಇರಿ. ನಿಮ್ಮ ಗೆಳೆಯರ, ಸಂಬಂಧಿಕರ, ಊರು ಕೇರಿಯ ಮಕ್ಕಳನ್ನು ನಿಮ್ಮ ಮಕ್ಕಳಂತೆ ಕಾಣಿ. ಅವರ ಜೀವನ ಉಜ್ವಲಿಸುವಂತೆ ಮಾಡಲು ಪ್ರಯತ್ನಿಸಿ. ಖಂಡಿತವಾಗಿಯೂ ನಿಮ್ಮೂರಿನ ಅನೇಕರಿಗೆ ನಿಮ್ಮಂಥವರ ಆಸರೆ, ಭರವಸೆ ಹಾಗೂ ಪ್ರೋತ್ಸಾಹದ ಅಗತ್ಯವಿರುತ್ತದೆ. ಅದರಿಂದ ನಿಮಗೂ ಒಳ್ಳೆಯದಾಗುತ್ತದೆ. ಮನಸ್ಸಿಗೆ ಉತ್ಸಾಹ ಬರುತ್ತದೆ. ನಿಮ್ಮ ಜೀವನಕ್ಕೂ ಒಂದು ಗುರಿ ಸಿಗುತ್ತದೆ. ಹೊಸ ಹೊಸ ಗುರಿಗಳನ್ನು ಹಾಕಿಕೊಂಡು ಒಂದಾದ ನಂತರ ಇನ್ನೊಂದನ್ನು ಸಾಧಿಸುತ್ತಾ ಹೋಗುವುದೇ ಜೀವನ. ಇದು, ಬದುಕು ನಮಗೆಲ್ಲರಿಗೂ ಕೊಟ್ಟಿರುವ ಅವಕಾಶ.

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ಮಂಡಿ ಸಮರ್ ಇಂಟರ್ನ್‌ಷಿಪ್

ಹಿಮಾಚಲ ಪ್ರದೇಶದ ಮಂಡಿಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು ಸಮರ್ ಇಂಟರ್ನ್‌ಷಿಪ್–2026 ಅವಕಾಶ ನೀಡುತ್ತಿದೆ. ಒಂದರಿಂದ ಎರಡು ತಿಂಗಳ ವಾಸ್ತವ್ಯದ ಜತೆಗೆ ಪ್ರಾಯೋಗಿಕ ಸಂಶೋಧನಾ ತರಬೇತಿಯನ್ನು ನೀಡಲಾಗುತ್ತದೆ.

ಅರ್ಹತೆ: ಬಿ.ಇ./ಬಿ.ಟೆಕ್ 3ನೇ ವರ್ಷದಲ್ಲಿ ಅಥವಾ ಸ್ನಾತಕೋತ್ತರ ಪದವಿಯ ಮೊದಲ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಆರ್ಥಿಕ ನೆರವು: ತಿಂಗಳಿಗೆ ₹ 10,000 ಸ್ಟೈಪೆಂಡ್ ಜೊತೆಗೆ ಇತರ ಪ್ರಯೋಜನಗಳು.

ಅರ್ಜಿ ಸಲ್ಲಿಸಲು ಕೊನೇ ದಿನ: 31-03-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/ITMS2

ಐಎನ್‌ಎಇ ಫೆಲೋಷಿಪ್

ಇಂಡಿಯನ್ ನ್ಯಾಷನಲ್ ಅಕಾಡೆಮಿ ಆಫ್ ಎಂಜಿನಿಯರಿಂಗ್ ನೀಡುವ ಫೆಲೋಷಿಪ್ ಇದಾಗಿದೆ.

ಅರ್ಹತೆ: ಅರ್ಜಿದಾರರು ಭಾರತೀಯ ನಾಗರಿಕರು ಅಥವಾ ಭಾರತೀಯ ಪಾಸ್‌ಪೋರ್ಟ್ ಹೊಂದಿರುವ ಒಸಿಐ (ಓವರ್‌ಸೀಸ್ ಸಿಟಿಜನ್ ಆಫ್ ಇಂಡಿಯಾ) ಕಾರ್ಡ್ ಹೊಂದಿದವರಾಗಿರಬೇಕು. ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಅನುಭವ ಇರಬೇಕು, ಭಾರತದಲ್ಲಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆ ನೀಡಿರಬೇಕು.

ನೆರವು: ಫೆಲೋಷಿಪ್ ಮತ್ತು ಇತರ ಪ್ರಯೋಜನಗಳು.

ಅರ್ಜಿ ಸಲ್ಲಿಸಲು ಕೊನೇ ದಿನ: 31-03-2026

ಅರ್ಜಿ ಸಲ್ಲಿಸುವ ವಿಧಾನ: ಇ–ಮೇಲ್ inaehq@inae.in

ಹೆಚ್ಚಿನ ಮಾಹಿತಿಗೆ: Short Url: www.b4s.in/praja/INAF2

'ನೀಟ್' ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

1) Which of the following statements are correct about Klinefelter's Syndrome?

A. This disorder was first described by Langdon Down (1866).

B. Such an individual has overall masculine development. However, the feminine development is also expressed.

C. The affected individual is short stature.

D. Physical, psychomotor and mental development is retarded.

E. Such individuals are sterile.

Choose the correct answer from the options given below:

a) A and E only b) A and B only
c) C and D only d) B and E only

Ans:- (d) Klinefelter's Syndrome is a genetic disorder that also caused due to the presence of an additional copy of X chromosome resulting into a karyotype of 47, XXY. Such an individual has overall masculine development, however, the feminine development (development of breast, i.e., Gynaecomastia) is also expressed. Such individuals are sterile. Down syndrome was first described by Langdon down (1866). In this disorder affected individual is physically, psychomotorly and mentally retarded.


2) The complex II of mitochondrial electron transport chain is also known as

(a) Cytochrome bc_1
(b) Succinate dehydrogenase
(c) Cytochrome c oxidase
(d) NADH dehydrogenase

Ans:- (b)

Expln:- Complex II of mitochondrial electron transport chain is also known as succinate dehydrogenase. Cytochrome c oxidase (complex IV), NADH dehydrogenase (complex I), cytochrome bc_1 (complex III).

3) Identify the part of the seed from the given figure which is destined to form root when the seed germinates



a) A b) B
c) C d) D

Ans:-c

Expln:- Radicle is destined to form root. In the given diagram 'C' represent radicle

4) Polymerase chain reaction (PCR) amplifies DNA following the equation.

(a) N 2 (b) 2 n
(c) 2n + 1 (d) 2N2

Ans (b)

Expln:- PCR i.e., polymerase chain reaction amplifies DNA as per the equation 2^n, where 'n' refers to number of cycles. Thus, say, if 3 PCR cycles will run, then 2^3 i.e., $2 \times 2 \times 2 \Rightarrow 8$ DNA fragments will be formed.

5) Identify the set of correct statements:

A. The flowers of Vallisneria are colourful and produce nectar

B. The flowers of water lily are not pollinated by water.

C. In most of water-pollinated species, the pollen grains are protected from wetting.

D. Pollen grains of some hydrophytes are long and ribbon like.

E. In some hydrophytes, the pollen grains are carried passively inside water.

Choose the correct answer from the options given below.

(a) C, D and E only (b) A, B, C and D only
(c) A, C, D and E only (d) B, C, D and E only

Ans- (d)

Expln:- Flowers of Vallisneria are not colourful and do not produce nectar. Waterlily is pollinated by insect or wind. In water-pollinated species, pollen grains are protected from wetting by a mucilaginous covering. In some hydrophytes such as Vallisneria pollen grains are carried passively by water current.

6) Assimilatory power is............

a) $NADPH_2$ b) ATP
c) ATP and $NADPH_2$ d) $FADH_2$

Ans:- c;

Expln- The products of the light reaction are ATP, $NADPH_2$, and O_2. The oxygen is liberated from the plants. ATP and $NADPH_2$ are used in the dark reaction for the reduction of carbon dioxide to form carbohydrates (carbon assimilation). Hence, these products of light reaction (ATP and $NADPH_2$) are called assimilatory power.

7) Identify the pair of heterosporous pteridophytes among the following:

a) Equisetum and Salvinia
b) Lycopodium and Selaginella
c) Selaginella and Salvinia
d) Psilolum and Salvinia

Ans:- C

Expl^n:- Genera like Selaginella and Salvinia which produce two kinds of spores, macro (large) and micro (small) spores, are known as heterosporous

ಪಿಯುಸಿ/ ಸಿಇಟಿ ದಿಕ್ಸೂಚಿ

MATHS

MULTIPLE CHOICE QUESTIONS

20) Given 5 line segments of lengths 2, 3, 4, 5, 6 units. Then the number of triangles that can be formed by joining these segments is..................

Ans:- (......Contd)

The no. of triangles formed is $5C_3 - 3$.

21)

$$\frac{d}{dx}\left[\cos^2\left(\cot^{-1}\sqrt{\frac{2+x}{2-x}}\right)\right] \text{ is}$$

A) $-\frac{3}{4}$ B) $-\frac{1}{2}$
C) $\frac{1}{2}$ D) $\frac{1}{4}$

Ans:- D

Expln:-

$$x = 2\cos\theta$$

$$\frac{2+x}{2-x} = \frac{2(1+\cos\theta)}{2(1-\cos\theta)} = \cot^2\frac{\theta}{2}$$

$$\therefore \frac{d}{dx}\frac{1}{2}(1+\cos\theta) = \frac{1}{2}\frac{d}{dx}\left(1+\frac{x}{2}\right)$$

$$= \frac{1}{4}$$

22) An urn contains 9 balls, 2 of which are white, 3 blue and 4 black. 3 balls are drawn at random from the urn. The chance that 2 balls will be of the same colour and the third of a different colour is..............................

(A) $\frac{45}{84}$ (B) $\frac{55}{84}$
(C) $\frac{35}{84}$ (D) $\frac{25}{84}$

Ans : (B) $\frac{55}{84}$

We can have 2 white and 1 blue or 1 black, 2 blue and 1 white or 1 black and 2 black, 1 white or 1 blue.

$$\text{The required probability} = \frac{2C_2(3C_1+4C_1)}{9C_3} + \frac{3C_2(2C_1+4C_1)}{9C_3} + \frac{4C_2(2C_1+3C_1)}{9C_3}$$

$$= \frac{7+18+30}{84} = \frac{55}{84}.$$

23) Which of the following is not correct?

(A) $\cos 5\pi = \cos 4\pi$
(B) $\sin 2\pi = \sin(-2\pi)$
(C) $\sin 4\pi = \sin 6\pi$
(D) $\tan 45° = \tan(-315°)$

Ans.:- A

24) 6 boys and 6 girls sit in a row at random. The probability that all the girls sit together is

(A) $\frac{1}{432}$ (B) $\frac{12}{431}$
(C) $\frac{1}{132}$ (D) None of these

Ans : (C) $\frac{1}{132}$

Expln:-

Suppose 6 boys are seated as in the figure.

↑ □ ↑ □ ↑ □ ↑ □ ↑ □ ↑ □ ↑
B_1 B_2 B_3 B_4 B_5 B_6

There are 7 places for girls which can be considered as 1 unit.

Total 12 persons are there who can be arranged in 12! Ways.

$$\therefore \text{Required probability} = \frac{6! \times 7!}{12!}$$

$$= \frac{6\times5\times4\times3\times2\times1\times7!}{12\times11\times10\times9\times8\times7!} = \frac{1}{132}.$$

25) If an LPP admits optimal solution at two consecutive verties of a feasible region then

a) The required optimal solution is at the midpoint of the line joining the two points

b) The optimal solution occurs at every point on the line joining these two points

c) The LPP under Consideration is not solvable


d) The LPP under Consideration must be reconstructed

Ans:- b

26) Area bounded by the curve $y = x^3$, the x-axis and the ordinates at $x = -2$ and $x = 1$, is

(A) -9 sq.units (B) $-\frac{15}{4}$ sq.units
(C) $\frac{15}{4}$ sq.units (D) $\frac{17}{4}$ sq.units.

Ans : (D) $\frac{17}{4}$ sq.units



$$\text{Required area} = \int_{-2}^{0} x^3\,dx + \int_{0}^{1} x^3\,dx$$

$$= \left[\frac{x^4}{4}\right]_{-2}^{0} + \left[\frac{x^4}{4}\right]_{0}^{1}$$

$$= 0 - \frac{(-2)^4}{4} + \frac{1}{4} = -4 + \frac{1}{4}.$$

Area cannot be negative. $\therefore$ Required area $= 4 + \frac{1}{4} = \frac{17}{4}$.

27) The area in square units bounded by the normal at (1, 2) to the parabola $y^2 = 4x$, x-axis and the curve is given by *(Contd….)*

ಜಾತಿ ಜಗಳ: ಕ್ಷೌರದಂಗಡಿಗಳು ಬಂದ್

ಬಳ್ಳಾರಿ ತಾಲ್ಲೂಕಿನ ಕೊಳಗಲ್ಲು ಗ್ರಾಮ ಜಾತ್ರೆ, ರಥೋತ್ಸವದ ಮೇಲೂ ಪರಿಣಾಮ

• ಹರಿಶಂಕರ್ ಆರ್.

ಬಳ್ಳಾರಿ: ಬಳ್ಳಾರಿ ತಾಲ್ಲೂಕಿನ ಕೊಳಗಲ್ಲಿನ ಜಾತಿ ವೈಷಮ್ಯ ಇಡೀ ಗ್ರಾಮವನ್ನೇ ಇಬ್ಭಾಗ ಮಾಡಿದೆ. ಒಬ್ಬರ ವಿರುದ್ಧ ಇನ್ನೊಬ್ಬರು ದ್ವೇಷ ಕಾರುತ್ತಿದ್ದು, ಇದರಿಂದಾಗಿ ಗ್ರಾಮದಲ್ಲಿದ್ದ ಎಲ್ಲ 8 ಕ್ಷೌರದ ಅಂಗಡಿಗಳನ್ನು ಮಾರ್ಚ್ 1ರಿಂದಲೇ ಬಂದ್ ಮಾಡಲಾಗಿದೆ.

ಗ್ರಾಮದಲ್ಲಿ ಕುರುಬ, ವಾಲ್ಮೀಕಿ ಮತ್ತು ಮಾದಿಗ ಸಮುದಾಯದ ನಡುವೆ ಹಿಂದಿನಿಂದಲೂ ಮನಸ್ತಾಪ ಮನೆ ಮಾಡಿದೆ.

'ಅವರನ್ನು ಕಂಡರೆ ಇವರಿಗೆ, ಇವರ ಕಂಡರೆ ಅವರಿಗಾಗದು. ಕ್ಷೌರ ಮಾಡಿದರೆ, ಇವರ ದ್ವೇಷ ಕಟ್ಟಿ ಕೊಳ್ಳಬೇಕು. ಇವರಿಗೆ ಕ್ಷೌರ ಮಾಡಿದರೆ ಅವರಿಗೆ ಕೋಪ. ಹೀಗಾಗಿ ಅಂಗಡಿ ಬಂದ್ ಮಾಡಿದ್ದೇನೆ' ಎಂದು ಕ್ಷೌರದಂಗಡಿಯ ಮಾಲೀಕರೊಬ್ಬರು ಹೇಳಿದರು.

'ಎರಡೂ ಜಾತಿಯವರ ಜಗಳದಲ್ಲಿ ಬಡವಾಗುವವರು ನಾವು. ವೈಷಮ್ಯ ಕಡಿಮೆ ಆದ ಮೇಲೆ ಅಂಗಡಿ ತೆಗೆಯುತ್ತೇನೆ' ಎಂದು ಮತ್ತೊಬ್ಬ ಕ್ಷೌರಿಕರು ಪ್ರತಿಕ್ರಿಯಿಸಿದರು.

'ನಮಗೆ ಅವರು ಇವರು ಎಂಬ ಭಾವನೆ ಇಲ್ಲ. ಜಗಳದ ಉಸಾಬರಿ ನಮಗೇಕೆ ಎಂದು ದಿನ ಹೊಲದ ಕೆಲಸ ಮಾಡಿಕೊಂಡಿದ್ದೇನೆ' ಎಂದು ಮತ್ತೊಬ್ಬರು ಬೇಸರದಿಂದ ನುಡಿದರು.

ಕ್ಷೌರದಂಗಡಿಗಳು ಬಂದ್ ಆಗಿವೆ. ಅಗತ್ಯವಿದ್ದವರು ಕ್ಷೌರಕ್ಕಾಗಿ ಬಳ್ಳಾರಿ ನಗರಕ್ಕೆ ಹೋಗುತ್ತಾರೆ. ಕೆಲವರು ಮನೆಗಳ ಬಳಿಗೆ ಕ್ಷೌರ ಮಾಡಲು ಕರೆಯುತ್ತಿದ್ದಾರೆ. ಆದರೆ, ಯಾರೂ ಹೋಗುತ್ತಿಲ್ಲ.

ಗ್ರಾಮದ ಹೋಟೆಲ್‌ಗಳಲ್ಲೂ ಇಂಥದ್ದೇ ಸ್ಥಿತಿ ಇದೆ. ಇದರಿಂದ ಪಾರಾಗಲು ಯಾರಿಗೂ ಹೋಟೆಲ್ ಎದುರು ಕುಳಿತುಕೊಳ್ಳಲು ಅವಕಾಶ ನೀಡುತ್ತಿಲ್ಲ. ಗ್ರಾಮದಲ್ಲಿ ಇಷ್ಟರಲ್ಲೇ ಎರ್ರಿತಾತನ ವಾರ್ಷಿಕ ಜಾತ್ರೆ, ರಥೋತ್ಸವ ನಡೆಯಬೇಕಿದೆ. ಉತ್ಸವ ನಡೆಯಬಾರದು ಎಂದು ಒಂದು ಗುಂಪು, ನಡೆಯಬೇಕು ಎಂದು ಮತ್ತೊಂದು ಗುಂಪು ಪ್ರತಿಪಾದಿಸುತ್ತಿದೆ.



> ಗ್ರಾಮದ ಬೆಳವಣಿಗೆಯನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದೆ. ಎರ್ರಿತಾತನ ಜಾತ್ರೆ ಸಂಬಂಧ ಚರ್ಚೆ ನಡೆದಿದೆ. ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು
>
> **ನಾಗೇಂದ್ರ ಪ್ರಸಾದ್ ಕೆ.,** ಜಿಲ್ಲಾಧಿಕಾರಿ, ಬಳ್ಳಾರಿ



ಕೊಳಗಲ್ಲು ಗ್ರಾಮ

ಮದ್ಯದಂಗಡಿ ಗಲಾಟೆಯಿಂದ ಹೆಚ್ಚಿದ ವೈಷಮ್ಯ

ಕೊಳಗಲ್ಲು ಜಾತಿ ಸೂಕ್ಷ್ಮ ಗ್ರಾಮ. ಇಲ್ಲಿರುವ ಎರ್ರಿತಾತನ ಮಠ ಜಾತಿ ಸಂಘರ್ಷದ ಕೇಂದ್ರ. ಮಠಕ್ಕೆ ಸಂಬಂಧಿಸಿದಂತೆ ಈಗಾಗಲೇ ಕುರುಬರು ಮತ್ತು ಮಾದಿಗ ಸಮುದಾಯದ ನಡುವೆ ಹಲವು ಘರ್ಷಣೆಗಳು ನಡೆದಿವೆ.

ಮಾ.1ರಂದು ಬಾರ್‌ನಲ್ಲಿ ಮದ್ಯ ಕುಡಿಯುವ ವಿಚಾರಕ್ಕೆ ಮಾದಿಗ ಜಾತಿಯ ನಾಲ್ವರಿಗೆ ಕುರುಬ, ವಾಲ್ಮೀಕಿ ಸಮುದಾಯದ ಮೂವರು ನಿಂದಿಸಿದ್ದರು. ಈ ಬಗ್ಗೆ ಬಳ್ಳಾರಿ ಗ್ರಾಮೀಣ ಠಾಣೆಯಲ್ಲಿ ಜಾತಿ ನಿಂದನೆ ಪ್ರಕರಣ ದಾಖಲಾಗಿದೆ. ಗ್ರಾಮದಲ್ಲಿ ದ್ವೇಷದ ವಾತಾವರಣ ಮನೆ ಮಾಡಿದೆ.

ದೆಹಲಿಗೆ ಸರ್ವಪಕ್ಷ ನಿಯೋಗ: ಸತೀಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕಳಸಾ–ಬಂಡೂರಿ ನಾಲೆ ತಿರುವು ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಅನುಮತಿ ಕೊಟ್ಟಿಲ್ಲ. ದೆಹಲಿಗೆ ಸರ್ವಪಕ್ಷಗಳ ನಿಯೋಗ ಕರೆದೊಯ್ಯುತ್ತೇವೆ' ಎಂದು ಸಚಿವ ಸತೀಶ ಜಾರಕಿಹೊಳಿ ಭಾನುವಾರ ಹೇಳಿದರು.

'ಹಿಪ್ಪರಗಿ ಬ್ಯಾರೇಜ್‌ನ 22ನೇ ಗೇಟ್ ಮುರಿದ ಪರಿಣಾಮ, 2.5ರಿಂದ 3.5 ಟಿಎಂಸಿ ಅಡಿ ನೀರು ವ್ಯರ್ಥವಾಗಿದ್ದು, ಕೃಷ್ಣಾ ನದಿಪಾತ್ರ-ದಲ್ಲಿ ನೀರಿನ ಸಮಸ್ಯೆ ಇದೆ' ಎಂದು ಹೇಳಿದರು.

ಮಹಾರಾಷ್ಟ್ರ ಸರ್ಕಾರದಿಂದ ಹೆಚ್ಚುವರಿ ನೀರು ಬಿಡುಗಡೆ ಕೋರಿ ರಾಜ್ಯದ ಜನಪ್ರತಿನಿಧಿಗಳ ನಿಯೋಗ ಮಹಾರಾಷ್ಟ್ರಕ್ಕೆ ಭೇಟಿ ನೀಡಲು ನಿರ್ಧರಿಸಿದೆ' ಎಂದು ತಿಳಿಸಿದರು.

ತಂದೆ ಕಣ್ಣೆದುರೇ ಪುತ್ರರು ನೀರುಪಾಲು



ಪ್ರಜ್ವಲ್



ಮನು

ಹರಪನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಹಲುವಾಗಲು ಬಳಿ ತುಂಗಭದ್ರಾ ನದಿಯಲ್ಲಿ ಭಾನುವಾರ ಈಜಲು ಹೋದ ಇಬ್ಬರು ಸಹೋದರರು ತಂದೆ ಕಣ್ಣೆದುರೇ ನೀರುಪಾಲಾಗಿದ್ದಾರೆ. ನೀರಿನಲ್ಲಿ ಮುಳುಗುತ್ತಿದ್ದ ಮತ್ತೊಬ್ಬ ಪುತ್ರನನ್ನು ತಂದೆ ರಕ್ಷಿಸಿದ್ದಾರೆ.

ಗ್ರಾಮದ ನಿವಾಸಿ ಮಂಜಪ್ಪ ಅವರ ಪುತ್ರರಾದ ಎಂ.ಜಿ.ಮನು (19), ಎಂ.ಜಿ. ಪ್ರಜ್ವಲ್ (18) ಮೃತಪಟ್ಟವರು. ಮನು ಬಿ.ಇ. ಮೊದಲ ವರ್ಷ ಮತ್ತು ಪ್ರಜ್ವಲ್ ಪಿಯುಸಿ ಓದುತ್ತಿದ್ದ.

ಮಂಜಪ್ಪ ಅವರು ಮೂವರು ಮಕ್ಕಳೊಂದಿಗೆ ನದಿ ದಂಡೆಗೆ ತೆರಳಿದ್ದರು. ಮಕ್ಕಳು ಆಯತಪ್ಪಿ ಬಿದ್ದು ನೀರಲ್ಲಿ ಕೊಚ್ಚಿಕೊಂಡು ಹೋದರು. ಮೃತದೇಹಗಳನ್ನು ಸರ್ಕಾರಿ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಲಾಗಿದೆ. ಹಲುವಾಗಲು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚುಟುಕು ಸುದ್ದಿ

ನೀರಲ್ಲಿ ಮುಳುಗಿ ಲೆಫ್ಟಿನೆಂಟ್ ಸಾವು

ಬೆಳಗಾವಿ: ಇಲ್ಲಿನ ನಾನಾವಾಡಿಯ ಕಮಾಂಡೊ ವಿಂಗ್‌ನ ಈಜುಕೊಳದಲ್ಲಿ ಶನಿವಾರ ತರಬೇತಿ ಪಡೆಯುತ್ತಿದ್ದ ಹರಿಯಾಣ ಮೂಲದ ಲೆಫ್ಟಿನೆಂಟ್ ಅಮಿತ್‌ಸಿಂಗ್ (23) ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.



ಲೆಫ್ಟಿನೆಂಟ್ ಅಮಿತ್‌ಸಿಂಗ್

'ಈಜುಕೊಳದಲ್ಲಿ ತರಬೇತಿ ಪಡೆಯುತ್ತಿದ್ದ ಅಮಿತ್‌ಸಿಂಗ್ ನೀರಲ್ಲಿ ಮುಳುಗಿದ್ದರು. ಸ್ಥಳದಲ್ಲಿದ್ದವರು ಅವರನ್ನು ರಕ್ಷಿಸಿ ಪ್ರಥಮ ಚಿಕಿತ್ಸೆ ನೀಡಿದ್ದರು. ನಂತರ ಮಿಲಿಟರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಅಷ್ಟೊತ್ತಿಗೆ ಲೆಫ್ಟಿನೆಂಟ್ ಮೃತಪಟ್ಟಿದ್ದರು. ನೀರಿನಲ್ಲಿ ಮುಳುಗಿ ಅಥವಾ ಹೃದಯಾಘಾತದಿಂದ ಸಾವು ಸಂಭವಿಸಿದೆ' ಎಂದು ಟಿಳಕವಾಡಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಗುಂಪು ಹಲ್ಲೆ: ಐವರ ವಿರುದ್ಧ ಎಫ್‌ಐಆರ್

ಗುರುಮಠಕಲ್ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಯಂಪಾಡ ಗ್ರಾಮದಲ್ಲಿ ಇಬ್ಬರು ಪರಿಶಿಷ್ಟರ ಮೇಲೆ ಹಲ್ಲೆ ಮಾಡಿ ಗಾಯಗೊಳಿಸಿದ ಆರೋಪದಡಿ ಕಬ್ಬಲಿಗ ಸಮುದಾಯದ ಐವರ ವಿರುದ್ಧ ಗುರುಮಠಕಲ್ ಠಾಣೆಯಲ್ಲಿ ಶನಿವಾರ ತಡರಾತ್ರಿ ಪ್ರಕರಣ ದಾಖಲಾಗಿದೆ.

ಗಾಯಾಳು ಅನಿಲ್‌ಕುಮಾರ್ ದೂರು ನೀಡಿದ್ದರು. ಯಂಪಾಡದ ಅನಂತಪ್ಪ ಪೆದ್ದಿ, ಲಕ್ಷ್ಮಣ ಕಾಳಪ್ಪ ಪೆದ್ದಿ, ರಮೇಶ ಪೂಜಾರಿ, ಸಣ್ಣ ಲಕ್ಷ್ಮಣ ಪೆದ್ದಿ, ಅಂಜಪ್ಪ ಪೆದ್ದಿ ಸೇರಿ ಇತರರ ವಿರುದ್ಧ ಹಲ್ಲೆ, ಜೀವ ಬೆದರಿಕೆ, ಜಾತಿ ನಿಂದನೆ ಆರೋಪದಡಿ ಪ್ರಕರಣ ದಾಖಲಾಗಿದೆ.

'ಹನುಮಾನ್ ದೇಗುಲ ಮುಂಭಾಗದ ಕಟ್ಟೆ ಮೇಲೆ ಕುಳಿತಿದ್ದಕ್ಕೆ ಅನಿಲ್‌ಕುಮಾರ್, ಸಿದ್ದಲಿಂಗಪ್ಪ ಮೇಲೆ ಹಲ್ಲೆ ಮಾಡಿದ ಆರೋಪವಿದೆ. ಮಾಹಿತಿ ಕಲೆಹಾಕಿದ್ದು, ಶೀಘ್ರವೇ ಆರೋಪಿಗಳನ್ನು ಬಂಧಿಸಲಾಗುವುದು' ಎಂದು ಡಿವೈಎಸ್‌ಪಿ ಸುರೇಶ ನಾಯಕ್ 'ಪ್ರಜಾವಾಣಿ'ಗೆ ತಿಳಿಸಿದರು.

ವೈರಮುಡಿ ಜಾತ್ರೆ: ಇಂದು ಚಾಲನೆ

ಮೇಲುಕೋಟೆ (ಮಂಡ್ಯ ಜಿಲ್ಲೆ): ವೈರಮುಡಿ ಜಾತ್ರಾ ಮಹೋತ್ಸವಕ್ಕೆ ಅಂಕುರಾರ್ಪಣ ಮೂಲಕ ಮಾರ್ಚ್ 23ರಂದು ಚಾಲನೆ ನೀಡಲಾಗುವುದು ಎಂದು ಶ್ರೀ ಚೆಲುವನಾರಾಯಣ ಸ್ವಾಮಿ ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ ಕನ್ನಗೊನಹಳ್ಳಿ ಪರಮೇಶಗೌಡ ತಿಳಿಸಿದ್ದಾರೆ. 28ರಂದು ವೈರಮುಡಿ ಕಿರೀಟಧಾರಣೆ ನಡೆಯಲಿದೆ. ರಥೋತ್ಸವ, ತೆಪ್ಪೋತ್ಸವ, ತೀರ್ಥೋತ್ಸವ ಸೇರಿ ಏಳು ದಿನ ಹೆಚ್ಚು ಭಕ್ತರು ಸೇರುವ ನಿರೀಕ್ಷೆ ಇದೆ' ಎಂದರು. ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಹೊಸ ಎ.ಐ ಆಧಾರಿತ ಡ್ಯಾಶ್‌ಕ್ಯಾಮ್ ವ್ಯವಸ್ಥೆಯು ಅಪಘಾತ ಕಡಿಮೆ ಮಾಡಲು ಸಹಕಾರಿಯಾಗಲಿದೆಯೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

16 ಮಂದಿಗೆ ಬಂಜಾರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯು 2025ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, 'ಶ್ರೀ ಸಂತ ಸೇವಾಲಾಲ್ ಪ್ರಶಸ್ತಿ'ಗೆ ಬಂಜಾರ ಸಮುದಾಯದ ಸಮಾಜ ಸೇವಕ ರೂಪ್ಲಾ ನಾಯಕ್ ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷ ಮೋತಿಲಾಲ ರೂ. ಚವ್ಹಾಣ ಅವರು ವಾರ್ಷಿಕ ಪ್ರಶಸ್ತಿ ಪ್ರಕಟಿಸಿದ್ದಾರೆ. 'ಶ್ರೀ ಸಂತ ಸೇವಾಲಾಲ್ ಪ್ರಶಸ್ತಿ'ಯು ಅಕಾಡೆಮಿ ನೀಡುವ ಅತ್ಯುನ್ನತ ಪ್ರಶಸ್ತಿಯಾಗಿದ್ದು, ಇದು ₹ 1 ಲಕ್ಷ ನಗದು ಒಳಗೊಂಡಿದೆ. ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಶತಾಯುಷಿ ರೂಪ್ಲಾ ನಾಯಕ್ ಅವರು ಇತ್ತೀಚೆಗೆ ನಿಧನರಾಗಿದ್ದಾರೆ.

ಅಕಾಡೆಮಿಯ ಗೌರವ ಪ್ರಶಸ್ತಿಗೆ ಜನಪದ ಸಾಹಿತ್ಯ ಹಾಗೂ ಸಂಶೋಧನೆ ಕ್ಷೇತ್ರದಿಂದ ಧಾರವಾಡದ ಹರಿಲಾಲ್ ಪವಾರ್, ನಗಾರಿ ವಾದ್ಯ ಕ್ಷೇತ್ರದಿಂದ ವಿಜಯಪುರದ ಶಂಕರ್ ಪುನ್ನು ಜಾಧವ್, ಬಂಜಾರ ನಗಾರಿ, ಗೀತೆಗಳು ಕ್ಷೇತ್ರದಿಂದ ಗದಗದ ಪಾಂಡಪ್ಪ ದೇವಲಪ್ಪ ಲಮಾಣಿ, ಸಮಾಜಸೇವೆ ಕ್ಷೇತ್ರದಿಂದ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮಚಂದ್ರ ನಾಯಕ್ ಹಾಗೂ ನೃತ್ಯ ಕ್ಷೇತ್ರದಿಂದ ಧಾರವಾಡದ ಗೌರವ್ವಾ ಶಿವಪ್ಪಾ ಲಮಾಣಿ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಒಳಗೊಂಡಿದೆ.

ವಾರ್ಷಿಕ ಪ್ರಶಸ್ತಿಗೆ ಬಂಜಾರ ಭಜನೆ ಹಾಗೂ ಸಾಹಿತ್ಯ ಕ್ಷೇತ್ರದಿಂದ ವಿಜಯಪುರದ ವಸಂತ ಎಲ್. ಚವ್ಹಾಣ, ಲಂಬಾಣಿ ನೃತ್ಯ ಕ್ಷೇತ್ರದಿಂದ ದಾವಣಗೆರೆಯ ದೇವಿಬಾಯಿ, ವೈದ್ಯಕೀಯ ಕ್ಷೇತ್ರದಿಂದ ಬೆಂಗಳೂರಿನ ಡಾ. ರಾಕೇಶ್ ನಾಯ್ಕ್ ಎಲ್., ತಟ್ಟೆ ವಾದ್ಯ ಕ್ಷೇತ್ರದಿಂದ ಚಾಮರಾಜನಗರದ ಗೋವಿಂದ ನಾಯ್ಕ್, ಸಂಗೀತ ಕ್ಷೇತ್ರದಿಂದ ಹೊಸಪೇಟೆಯ ಶ್ರೀನಿವಾಸ್ ನಾಯ್ಕ್, ಕ್ರೀಡಾ ಕ್ಷೇತ್ರದಿಂದ ಬೆಂಗಳೂರಿನ ಶೇಖರ್ ನಾಯ್ಕ್ ಎಲ್., ಜಾನಪದ ಹಾಡುಗಾರಿಕೆ ಕ್ಷೇತ್ರದಿಂದ ದಾವಣಗೆರೆಯ ಶಾಂತಾನಾಯಕ್, ಜಾನಪದ ಸಂಗೀತ ಕ್ಷೇತ್ರದಿಂದ ರಾಯಚೂರಿನ ಪಾಂಡುರಂಗ (ಸುದೀಪ್), ಬಂಜಾರ ಭಜನೆ ಕ್ಷೇತ್ರದಿಂದ ಕಲಬುರಗಿಯ ಚಂದ್ರಶೇಖರ ಯಶ್ವಂತ ರಾಠೋಡ ಹಾಗೂ ಬಂಜಾರ ನೃತ್ಯ ಕ್ಷೇತ್ರದಿಂದ ಬೀದರ್‌ನ ವಿಜಯಲಕ್ಷ್ಮಿ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ.

ಅಕಾಡೆಮಿಯು ಇದೇ 27ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ.

ರೂಪ್ಲಾ ನಾಯಕ್‌ಗೆ ಪ್ರಶಸ್ತಿ ಪ್ರದಾನ



ರೂಪ್ಲಾ ನಾಯಕ್

ಅಕಾಡೆಮಿಯ 'ಶ್ರೀ ಸಂತ ಸೇವಾಲಾಲ್ ಪ್ರಶಸ್ತಿ'ಯನ್ನು ಅಧಿಕೃತವಾಗಿ ಘೋಷಿಸುವ ಮುನ್ನವೇ ಕೆಲ ದಿನಗಳ ಹಿಂದೆ ರೂಪ್ಲಾ ನಾಯಕ್ ಅವರಿಗೆ ಪ್ರದಾನ ಮಾಡಲಾಗಿದೆ. ವಿಧಾನಸಭೆಯ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ನೇತೃತ್ವದಲ್ಲಿ ಅಕಾಡೆಮಿ ಅಧ್ಯಕ್ಷ ಮೋತಿಲಾಲ ಚವ್ಹಾಣ ಹಾಗೂ ಅಧಿಕಾರಿಗಳು ಅವರ ಮನೆಗೆ ಭೇಟಿ ನೀಡಿ ಪ್ರಶಸ್ತಿ ಪ್ರದಾನ ಮಾಡಿದ್ದರು.

'ಬಂಜಾರ ಸಮುದಾಯಕ್ಕೆ ರೂಪ್ಲಾ ನಾಯಕ್ ಮಹತ್ವದ ಕೊಡುಗೆ ನೀಡಿದ್ದಾರೆ. ಪ್ರಶಸ್ತಿ ಪಟ್ಟಿ ಬಿಡುಗಡೆ ಮಾಡಬೇ-ಕೆನ್ನುವಷ್ಟರಲ್ಲಿ ಅವರ ಆರೋಗ್ಯ ಮತ್ತಷ್ಟು ಹದಗೆಟ್ಟಿರುವ ಬಗ್ಗೆ ಕುಟುಂಬಸ್ಥರು ತಿಳಿಸಿದರು. ಹಾಗಾಗಿ, ಅವರ ಮನೆಗೆ ಹೋಗಿ ಪ್ರಶಸ್ತಿ ವಿತರಿಸಿದೆವು' ಎಂದು ಮೋತಿಲಾಲ ಚವ್ಹಾಣ ತಿಳಿಸಿದರು.

ವಿದ್ಯಾರ್ಥಿಗಳಿಗೆ ಥಳಿತ: ಪ್ರಕರಣ ದಾಖಲು

ಮೂಡಿಗೆರೆ (ಚಿಕ್ಕಮಗಳೂರು): ತಾಲ್ಲೂಕಿನ ಕೊಟ್ಟಿಗೆಹಾರದಲ್ಲಿರುವ ತರುವೆ ಏಕಲವ್ಯ ವಸತಿ ಶಾಲೆಯಲ್ಲಿ ನಡೆದಿದ್ದ ವಿದ್ಯಾರ್ಥಿಗಳಿಗೆ ಥಳಿತ ಪ್ರಕರಣ ಕುರಿತು ಬಣಕಲ್ ಠಾಣೆಯಲ್ಲಿ ಭಾನುವಾರ ಎಸ್‌ಸಿ–ಎಸ್‌ಟಿ ವಿರುದ್ಧದ ದೌರ್ಜನ್ಯ ತಡೆ ಕಾಯ್ದೆಯಡಿ ಹಾಗೂ ಹಲ್ಲೆ ಪ್ರಕರಣ ದಾಖಲಾಗಿದೆ.

ಪೋಷಕ ರಮೇಶ್ ನಾಯ್ಕ್ ದೂರು ನೀಡಿದ್ದು, ಪ್ರಾಂಶುಪಾಲ ಸತೀಶ್, ಸಿಬ್ಬಂದಿ ಶುಭಂ ಅವರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿನಾಯಕ ಬಾಳಿಗಾ ಹತ್ಯೆಗೆ 10 ವರ್ಷ: ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಹರಿಪ್ರಸಾದ್ ವಾಗ್ದಾಳಿ

'ಬಿಜೆಪಿ ಕಾರ್ಯಕರ್ತನ ಹತ್ಯೆ, ನ್ಯಾಯ ಕೊಡಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಹಿಂದುತ್ವ ಮತ್ತು ಬಿಜೆಪಿಯ ಕಾರ್ಯಕರ್ತನೊಬ್ಬನ ಹತ್ಯೆಗೆ ಸಂಬಂಧಿಸಿ, ಕಟ್ಟಾ ಕಾಂಗ್ರೆಸಿಗನಾದ ನಾನು ನ್ಯಾಯ ಕೇಳುತ್ತಿದ್ದೇನೆ. ಆರ್‌ಎಸ್‌ಎಸ್, ಬಿಜೆಪಿಯವರು ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಬೇಕು' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಇಲ್ಲಿ ಆಗ್ರಹಿಸಿದರು.

ಆರ್.ಟಿ.ಐ ಕಾರ್ಯಕರ್ತ ವಿನಾಯಕ ಬಾಳಿಗಾ ಕೊಲೆಯಾಗಿ 10 ವರ್ಷ ಕಳೆದ ಹಿನ್ನಲೆಯಲ್ಲಿ ಇಲ್ಲಿನ ವೆಂಕಟರಮಣ ದೇವಸ್ಥಾನದ ಮುಂದಿನಿಂದ ಬಾಳಿಗಾ ಅವರ ಮನೆಯವರೆಗೆ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡು, ಬಳಿಕ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.

'ಬಿಜೆಪಿ ಕಾರ್ಯಕರ್ತನೊಬ್ಬನ ಕುಟುಂಬಕ್ಕೆ ನ್ಯಾಯ ಒದಗಿಸಲು, ಹುಟ್ಟಾ ಕಾಂಗ್ರೆಸಿಗನಾದ ನಾನು ಹೋರಾಡುವ ದಿನ ಬರಬಹುದು ಎಂದು ಎಂದೂ ಯೋಚಿಸಿರಲಿಲ್ಲ. ಹಿಂದೂಗಳ ಮೇಲೆ ದೌರ್ಜನ್ಯ, ಕೊಲೆಯಾದಾಗ ಹರಿಪ್ರಸಾದ್ ಏಕೆ ಮಾತನಾಡುವುದಿಲ್ಲ ಎಂದು ಆರ್‌ಎಸ್‌ಎಸ್, ಬಿಜೆಪಿ ನಾಯಕರು ಯಾವಾಗಲೂ ಪ್ರಶ್ನಿಸುತ್ತಿರುತ್ತಾರೆ. ಈಗ ಮಂಗಳೂರಿನ ನೆಲದಲ್ಲಿ ಹಿಂದುತ್ವ ಕಾರ್ಯಕರ್ತನ ಕೊಲೆಗೆ ನ್ಯಾಯ ಕೇಳುತ್ತಿದ್ದೇನೆ. ಬಿಜೆಪಿಯವರು ಉತ್ತರಿಸಲಿ' ಎಂದರು.



ಮಂಗಳೂರಿನ ರಥಬೀದಿಯ ವೆಂಕಟರಮಣ ದೇವಸ್ಥಾನದ ಮುಂದಿನಿಂದ ಬಾಳಿಗಾ ಅವರ ಮನೆಯವರೆಗೆ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಮೆರವಣಿಗೆ ನಡೆಯಿತು

'ವಿನಾಯಕ ಬಾಳಿಗಾ ಮಾಹಿತಿ ಹಕ್ಕು ಕಾರ್ಯಕರ್ತರಾಗಿದ್ದರು. ಅವರ ಪರಿಚಯ ನನಗಿಲ್ಲ. ಆರ್‌ಎಸ್‌ಎಸ್ ಹಾಗೂ ನಮೋ ಬ್ರಿಗೇಡ್ ನಾಯಕರು ದೇಗುಲದ ಹಣದಲ್ಲಿ ನಡೆಸಿದ ಭ್ರಷ್ಟಾಚಾರ ಬಯಲಿಗೆಳೆದಿದ್ದಕ್ಕಾಗಿ ಅವರ ಕೊಲೆ ಮಾಡಲಾಯಿತು. ಆರೋಪಿಗಳ ಪೈಕಿ ಮೊದಲನೆಯವರು ನಮೋ ಬ್ರಿಗೇಡ್‌ನ ಅಂದಿನ ಅಧ್ಯಕ್ಷ ಮಂಗಳ್ಪಾಡಿ ನರೇಶ್ ಶೆಣೈ. ಬಿಜೆಪಿಯ ಬಹುತೇಕ ಶಾಸಕರು ನರೇಶ್ ಶೆಣೈಯ ಮುಲಾಜಿನಲ್ಲಿದ್ದಾರೆ. ಅದಕ್ಕಾಗಿಯೇ ಮಂಗಳೂರಿನ ಎಲ್ಲಾ ಜಾತಿ, ಧರ್ಮದವರು ಬಾಳಿಗಾ ಹತ್ಯೆಗೆ ನ್ಯಾಯ ಕೇಳುತ್ತಿದ್ದರೂ ಶಾಸಕರು ಸುಮ್ಮನಿದ್ದಾರೆ' ಎಂದರು.

ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ, 'ವಿನಾಯಕ ಬಾಳಿಗಾ ಅವರ ಕೊಲೆಗಡುಕರನ್ನು ರಕ್ಷಿಸಲು ಪಿತೂರಿ ನಡೆಸಲಾಗಿತ್ತು. ಆ ಸಂದರ್ಭ ಜಿಲ್ಲೆಯ ಜನಪರ ಸಂಘಟನೆಗಳು ಬೀದಿಗೆ ಇಳಿಯದಿದ್ದರೆ ಪ್ರಕರಣ ಮುಚ್ಚಿಹೋಗುತ್ತಿತ್ತು' ಎಂದರು.

ಮುಖ್ಯಾಂಶಗಳು

- 'ಪ್ರಶ್ನೆಗಳಿಗೆ ಆರ್‌ಎಸ್‌ಎಸ್, ಬಿಜೆಪಿ ಉತ್ತರಿಸುವುದೇ?'
- ಹುಂಡಿ ಹಣ ದುರ್ಬಳಕೆ ಪ್ರಶ್ನಿಸಿದ್ದಕ್ಕೆ ಹತ್ಯೆ– ಆರೋಪ
- 'ಸಂಘಟನೆಗಳು ಪ್ರತಿಭಟಿಸದಿದ್ದರೆ ಪ್ರಕರಣ ಮುಚ್ಚಿಹೋಗುತ್ತಿತ್ತು'

ವೆಂಕಟರಮಣ ದೇವಸ್ಥಾನದ ಬಳಿ ಮೆರವಣಿಗೆಗೆ ಪ್ರೊ. ನರೇಂದ್ರ ನಾಯಕ್ ಚಾಲನೆ ನೀಡಿದರು. ಮನೋವೈದ್ಯ ಡಾ. ಪಿ.ವಿ ಭಂಡಾರಿ, ಅಮೃತ ಶೆಣೈ, ಬಿ. ಶೇಖರ್, ಡಿಎಸ್‌ಎಸ್ ಮುಖಂಡ ಎಂ. ದೇವದಾಸ್ ಹಾಗೂ ಕೆಪಿಸಿಸಿ ವಕ್ತಾರ ಎಂ.ಜಿ ಹೆಗಡೆ ಮಾತನಾಡಿದರು.

ವಿನಾಯಕ ಅವರ ಸಹೋದರಿ ಯರಾದ ಅನುರಾಧಾ ಬಾಳಿಗಾ, ಹರ್ಷ ಬಾಳಿಗಾ ಉಪಸ್ಥಿತರಿದ್ದರು. ದೇಶಪ್ರೇಮಿ ಸಂಘಟನೆಗಳ ಒಕ್ಕೂಟದ ಸಂಚಾಲಕ ಸಂತೋಷ್ ಬಜಾಲ್ ಕಾರ್ಯಕ್ರಮ ನಿರೂಪಿಸಿದರು. ಮಂಜುಳಾ ನಾಯಕ್ ವಂದಿಸಿದರು.

'ಗ್ಯಾರಂಟಿ': ₹14,200 ಕೋಟಿ ಹಂಚಿಕೆ

ಒಂದನೇ ಪುಟದಿಂದ...

2024–25ನೇ ಸಾಲಿನಲ್ಲಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದಲ್ಲಿ 'ಗ್ಯಾರಂಟಿ' ಯೋಜನೆಗಳಿಗೆ ₹14,282.68 ಕೋಟಿ, 2025–26 ಸಾಲಿನಲ್ಲಿ ₹13,433.84 ಕೋಟಿಯನ್ನು ಸರ್ಕಾರ ಒದಗಿಸಿತ್ತು.

ಯಾವ ಕಾರಣಕ್ಕೂ ಪರಿಶಿಷ್ಟರ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಬಾರೆಂದು ದಲಿತ ಸಚಿವರು, ಶಾಸಕರು ಮುಖ್ಯಮಂತ್ರಿ ಅವರಿಗೆ ಬಜೆಟ್ ಪೂರ್ವದಲ್ಲಿ ಮನವಿ ಸಲ್ಲಿಸಿದ್ದರು. ಪರಿಶಿಷ್ಟರ ಕಾರ್ಯಕ್ರಮಗಳಿಗೆ ಒದಗಿಸಿದ ಅನುದಾನವನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಸುತ್ತಿರುವುದಕ್ಕೆ ವಿರೋಧ ಪಕ್ಷಗಳ ಸದಸ್ಯರೂ ವಿಧಾನಮಂಡಲದ ಅಧಿವೇ-ಶನದಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿ ನಿಧಿಯಿಂದ 'ಗ್ಯಾರಂಟಿ'ಗಳಿಗೆ ವೆಚ್ಚ (₹ ಕೋಟಿಗಳಲ್ಲಿ)

2023-24	₹ 11,144
2024-25	₹ 14,283
2025-26	₹ 13,434

ಆಯವ್ಯಯ ಅಂದಾಜಿನ ಪ್ರಕಾರ, ಎಸ್‌ಸಿಎಸ್‌ಪಿ ಟಿಎಸ್‌ಪಿ ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಒಟ್ಟು ₹9,163.86 ಕೋಟಿ ಹಂಚಿಕೆ ಮಾಡಲಾಗಿದೆ. ಅದರಲ್ಲಿ ಗೃಹ ಲಕ್ಷ್ಮಿ ಯೋಜನೆಯಡಿ ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳು ₹2,000 ದಂತೆ ನೇರ ನಗದು ವರ್ಗಾವಣೆಗೆ (ಡಿಬಿಟಿ) ₹8,296.32 ಕೋಟಿ ಮೀಸಲಿಡಲಾಗಿದೆ. ಸಾರಿಗೆ ಇಲಾಖೆಯಡಿ ಪರಿಶಿಷ್ಟರ ಕಲ್ಯಾಣಕ್ಕೆ ಒಟ್ಟು ₹2,098.86 ಕೋಟಿ ತೆಗೆದಿರಿಸಲಾಗಿದೆ. ಆ ಮೊತ್ತದಲ್ಲಿ 'ಶಕ್ತಿ' (ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ) ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ₹1,537 ಕೋಟಿ ನೀಡಲಾಗಿದೆ. ಈ ಯೋಜನೆಯಲ್ಲಿ ಪರಿಶಿಷ್ಟ ಫಲಾನುಭವಿಗಳ ನಿಖರ ಸಂಖ್ಯೆ ಲಭ್ಯ ಇಲ್ಲದಿರುವ ಕಾರಣ ಈ ಮೊತ್ತವನ್ನು ಶೇ 24.10ಕ್ಕೆ (ಪರಿಶಿಷ್ಟರ ಜನಸಂಖ್ಯೆ) ಸೀಮಿತಗೊಳಿಸಿ ಈ ಹಿಂದಿನ ಸಾಲುಗಳಲ್ಲಿ ಕ್ರಿಯಾ ಯೋಜನೆ ರೂಪಿಸಲಾಗಿತ್ತು.

ಇಂಧನ ಇಲಾಖೆಯಡಿ ಪರಿಶಿಷ್ಟ ಸಮುದಾಯಗಳಿಗೆ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಗೆ ಸಹಾಯಧನ, 'ಪಿ.ಎಂ ಕುಸುಮ್‌-ಬಿ' ಅಡಿ ಅನುದಾನ ಒದಗಿಸಲಾಗಿದ್ದು, ಮಾಸಿಕ 200 ಯುನಿಟ್‌ಗಳಿಗಿಂತ ಕಡಿಮೆ ವಿದ್ಯುತ್ ಬಳಸುವ ಎಲ್ಲ ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯ (ಗೃಹ ಜ್ಯೋತಿ) ಒದಗಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಎಸ್‌ಸಿಎಸ್‌ಪಿ ಟಿಎಸ್‌ಪಿ ಅಡಿ ಇಂಧನ ಇಲಾಖೆಗೆ ಒಟ್ಟು ₹5,210.78 ಕೋಟಿ ಒದಗಿಸಲಾಗಿದೆ. ಅದರಲ್ಲಿ ₹2,591.61 ಕೋಟಿ 'ಗೃಹ ಜ್ಯೋತಿ' ಯೋಜನೆಗೆ ವೆಚ್ಚ ಆಗಬಹುದೆಂದು ಅಂದಾಜಿಸಿ ಮೀಸಲಿಡಲಾಗಿದೆ. 2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ 21.78 ಲಕ್ಷ, ಪರಿಶಿಷ್ಟ ಪಂಗಡದ 8.76 ಲಕ್ಷ ಕುಟುಂಬಗಳಿವೆ. ಅದನ್ನೇ ಆಧಾರವಾಗಿಟ್ಟು 'ಗೃಹ ಜ್ಯೋತಿ' ಯೋಜನೆಯಡಿ ಅನುದಾನ ತೆಗೆದಿರಿಸಲಾಗಿದೆ.

ಆಹಾರ ಇಲಾಖೆಯಡಿ ಎಸ್‌ಸಿಎಸ್‌ಪಿ ಟಿಎಸ್‌ಪಿ ಅಡಿ ಒಟ್ಟು ₹2,002.14 ಕೋಟಿ ಹಂಚಿಕೆ ಮಾಡಲಾಗಿದ್ದು, ಅದರಲ್ಲಿ ಅನ್ನ ಭಾಗ್ಯ ಯೋಜನೆಯಡಿ ಫಲಾನುಭವಿಗಳ ಖಾತೆಗೆ ಡಿಬಿಟಿಗಾಗಿ ₹1,612 ಕೋಟಿ ಒದಗಿಸಲಾಗಿದೆ. ಎಸ್‌ಸಿ ಮತ್ತು ಎಸ್‌ಟಿ ಫಲಾನುಭವಿಗಳ ಅಂದಾಜು ಸಂಖ್ಯೆಯ ಮೇಲೆ ಪ್ರತಿ ಫಲಾನುಭವಿಗೆ ಪ್ರತಿ ತಿಂಗಳಿಗೆ ₹130ರಂತೆ ಖಾತೆಗೆ ಜಮೆ ಮಾಡಲು ಒಂದು ವರ್ಷಕ್ಕೆ ಅಗತ್ಯ ಅನುದಾನವನ್ನು ಲೆಕ್ಕ ಹಾಕಲಾಗಿದೆ. ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಪರಿಶಿಷ್ಟ ಸಮುದಾಯದವರ ವಿವಿಧ ಕಾರ್ಯಕ್ರಮಗಳಿಗೆ ಒಟ್ಟು ₹166.79 ಕೋಟಿ ಒದಗಿಸಲಾಗಿದೆ. ಆ ಅನುದಾನದಲ್ಲಿ ₹162 ಕೋಟಿಯನ್ನು 'ಯುವನಿಧಿ' ಗ್ಯಾರಂಟಿಗೆ ಒದಗಿಸಲಾಗಿದೆ.

'ಗ್ಯಾರಂಟಿ' ಅಧ್ಯಕ್ಷರ 3ಿಂಗಳ ವೇತನ ₹5.98 ಲಕ್ಷ

ಒಂದನೇ ಪುಟದಿಂದ...

ಉಳಿದಂತೆ, ಉಪಾಧ್ಯಕ್ಷರ ಪೈಕಿ ಎಸ್.ಆರ್. ಪಾಟೀಲ ಅವರ ಕಚೇರಿಯಲ್ಲಿರುವ ಒಟ್ಟು 11 ಸಿಬ್ಬಂದಿಗೆ ಇದೇ ತಿಂಗಳಲ್ಲಿ ಒಟ್ಟು ₹4,51,418, ಸೂರಜ್ ಹೆಗಡೆ ಅವರ ಕಚೇರಿಯ 9 ಸಿಬ್ಬಂದಿಗೆ ಒಟ್ಟು ₹3,89,895, ಪುಷ್ಪಾ ಅಮರನಾಥ್ ಅವರ ಕಚೇರಿಯ 12 ಸಿಬ್ಬಂದಿಗೆ ಒಟ್ಟು ₹5,08,499, ಎಸ್.ಆರ್. ಮೆಹರೋಜ್ ಖಾನ್ ಅವರ ಕಚೇರಿಯ 10 ಸಿಬ್ಬಂದಿಗೆ ಒಟ್ಟು ₹3,87,350, ದಿನೇಶ್ ಗೂಳಿಗೌಡ ಅವರ ಕಚೇರಿಯ 7 ಸಿಬ್ಬಂದಿಗೆ ಒಟ್ಟು ₹3,26,298 ವೇತನ ನೀಡಲಾಗಿದೆ ಎಂದೂ ಮುಖ್ಯಮಂತ್ರಿ ಮಾಹಿತಿ ನೀಡಿದ್ದಾರೆ.

'ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅವಶ್ಯಕತೆ ಇದೆಯೇ' ಎಂಬ ಪ್ರಶ್ನೆಗೆ, 'ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನದ ಮೇಲ್ವಿಚಾರಣೆಯ ಪ್ರಮುಖ ಜವಾಬ್ದಾರಿ ಈ ಪ್ರಾಧಿಕಾರದ್ದಾಗಿದೆ. ಅಲ್ಲದೆ, ನೀತಿ ರಚನೆ, ಸುಧಾರಣಾ ಕ್ರಮಗಳು, ಅನುಷ್ಠಾನದಲ್ಲಿ ಸರಳೀಕರಣ ಹಾಗೂ ತಳಮಟ್ಟದಲ್ಲಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪ್ರಾಧಿಕಾರದ ಅವಶ್ಯಕತೆ ಇದೆ' ಎಂದೂ ಉತ್ತರದಲ್ಲಿ ಮುಖ್ಯಮಂತ್ರಿ ಸಮರ್ಥಿಸಿಕೊಂಡಿದ್ದಾರೆ.

ಇನ್‌ಸ್ಪೆಕ್ಟರ್ ವಿರುದ್ಧ ಅತ್ಯಾಚಾರ, ಸುಲಿಗೆ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮಂಗಳೂರು: ಅಮಾನತುಗೊಂಡಿರುವ ಮೂಡುಬಿದಿರೆ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸಂದೇಶ್ ವಿರುದ್ಧ ಮಹಿಳೆಯೊಬ್ಬರು, ಅತ್ಯಾಚಾರ ವೆಸಗಿದ ದೂರು ನೀಡಿದ್ದು, ವೇಣೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸಂದೇಶ್ ವಿರುದ್ಧ ಅತ್ಯಾಚಾರ ಮತ್ತು ಸುಲಿಗೆ ಪ್ರಕರಣ ದಾಖಲಾಗಿದೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ತಿಳಿಸಿದ್ದಾರೆ.

ಬೆಳ್ತಂಗಡಿಯಲ್ಲಿ ಸಂದೇಶ್ ಸೇವೆ ಸಲ್ಲಿಸುತ್ತಿದ್ದಾಗ ನನ್ನ ಮೇಲೆ ಅತ್ಯಾಚಾರವೆಸಗಿದ್ದಾರೆ ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೂಡುಬಿದಿರೆ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂದೇಶ ಅವರ ವಿರುದ್ಧ ಮಹಿಳೆಯೊಬ್ಬರು ಲೈಂಗಿಕ ಕಿರುಕುಳದ ಆರೋಪ ಮಾಡಿದ್ದರು. ಮಾಧ್ಯಮಗಳಲ್ಲಿ ವರದಿ ಬಿತ್ತರ ಆದಂತೆ ರಾಜ್ಯ ಮಹಿಳಾ ಆಯೋಗ ಮಧ್ಯಪ್ರವೇಶಿಸಿ ವರದಿ ನೀಡುವಂತೆ ಪೊಲೀಸ್ ಕಮಿಷನರ್‌ಗೆ ಸೂಚಿಸಿತ್ತು.

ಮಂಗಳೂರು ಉತ್ತರ ಉಪ ವಿಭಾಗದ ಎಸಿಪಿ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದರು. ಮಹಿಳೆಯರೊಂದಿಗೆ ಅಸಭ್ಯ ವಾಗಿ ವರ್ತಿಸಿದ ಆರೋಪದ ಮೇರೆಗೆ ಸಂದೇಶ್ ಅವರನ್ನು ಮಾ. 17ರಂದು ಅಮಾನತುಗೊಳಿಸಲಾಗಿತ್ತು.

'ಖರಾತ್ ಪ್ರಕರಣ: ಡಿಜಿಪಿ ಮೇಲ್ವಿಚಾರಣೆಯಲ್ಲಿ ತನಿಖೆ'

ನಾಗ್ಪುರ (ಪಿಟಿಐ): 'ಅತ್ಯಾಚಾರ ಪ್ರಕರಣದಲ್ಲಿ ಬಂಧಿಸಲಾಗಿರುವ, ಸ್ವಯಂ ಘೋಷಿತ ದೇವಮಾನವ ಅಶೋಕ್ ಖರಾತ್ ಅವರ ಪ್ರಕರಣ ವನ್ನು ಪೊಲೀಸ್ ಮಹಾನಿರ್ದೇಶಕರ (ಡಿಜಿಪಿ) ಮೇಲ್ವಿಚಾರಣೆಯಲ್ಲಿ ಉನ್ನತ ಮಟ್ಟದ ತನಿಖೆ ನಡೆ ಸಲಾಗುತ್ತಿದೆ' ಎಂದು ಮಹಾರಾಷ್ಟ್ರ ಸಿ.ಎಂ ದೇವೇಂದ್ರ ಫಡಣವೀಸ್ ಭಾನುವಾರ ಹೇಳಿದ್ದಾರೆ.

'ಮರ್ಚೆಂಟ್ ನೌಕಾಪಡೆಯ ನಿವೃತ್ತ ಅಧಿಕಾರಿ' ಎಂದು ಹೇಳಿಕೊಳ್ಳುವ ಅವರು, 'ಕ್ಯಾಪ್ಟನ್' ಎಂದೇ ಗುರುತಿಸಿಕೊಂಡಿದ್ದಾರೆ. ಅವರ ಆಧ್ಯಾತ್ಮಿಕ ಸಲಹೆ ಪಡೆಯಲು ಅನೇಕ ರಾಜಕೀಯ ನಾಯಕರು ಭೇಟಿ ಮಾಡುತ್ತಿದ್ದರು.

'ಮೂರು ವರ್ಷಗಳಲ್ಲಿ ಖರಾತ್ ಅವರು ನನ್ನ ಮೇಲೆ ಅನೇಕ ಬಾರಿ ಅತ್ಯಾಚಾರ ಎಸಗಿದ್ದಾರೆ' ಎಂದು 35 ವರ್ಷದ ಮಹಿಳೆಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ ನಾಸಿಕ್ ಪೊಲೀಸರು ಖರಾತ್ ಅವರನ್ನು ಬಂಧಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ವಿಕಾಸವೇ ಜೀವನ, ಸಂಕೋಚವೇ ಮರಣ. ಎಲ್ಲ ಬಗೆಯ ಪ್ರೀತಿಯೂ ವಿಕಾಸ, ಸ್ವಾರ್ಥವೇ ಸಂಕೋಚ.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಆತಂಕಕಾರಿ ತಿದ್ದುಪಡಿ ಮಸೂದೆ ಲಿಂಗತ್ವ ಅಲ್ಪಸಂಖ್ಯಾತರಿಗೆ ಸಂಕಷ್ಟ

ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಇತ್ತೀಚೆಗೆ ಮಂಡಿಸಿರುವ 'ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆ 2026' ಈವರೆಗಿನ ಪ್ರಗತಿಪರ ವಿಚಾರಗಳು ಹಾಗೂ ಕಾನೂನುಗಳಿಗೆ ಹಿನ್ನಡೆ ತರುವಂತಿದೆ. ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ಸಂರಕ್ಷಣೆ ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ 'ಎನ್‌ಎಎಲ್‌ಎಸ್‌ಎ 2014' ತೀರ್ಪು ಹಾಗೂ 2019ರ ಕಾಯ್ದೆಗಳು ಮೈಲಿಗಲ್ಲುಗಳಾಗಿವೆ. ಇವು, ತೃತೀಯ ಲಿಂಗಿಗಳು ಹಾಗೂ ಲಿಂಗಪರಿವರ್ತಿತರಿಗೆ ತಮ್ಮ ಲೈಂಗಿಕ ಅಸ್ಮಿತೆಯನ್ನು ಸ್ವಯಂ ನಿರ್ಧರಿಸಲು ಅವಕಾಶ ಕಲ್ಪಿಸಿಕೊಡುತ್ತಿದ್ದವು ಹಾಗೂ ಈ ಅವಕಾಶ ಅವರ 'ಜೀವಿಸುವ ಹಕ್ಕು'ಗಳ ಭಾಗವಾಗುತ್ತಿತ್ತು. ಈ ಹಕ್ಕು ಮತ್ತು ಕಾನೂನು, ಲಿಂಗತ್ವ ಅಲ್ಪಸಂಖ್ಯಾತರು ಆತ್ಮಗೌರವ ಹಾಗೂ ಘನತೆಯಿಂದ ತಮ್ಮ ಬದುಕನ್ನು ಕಟ್ಟಿಕೊಳ್ಳಲು ನೆರವಾಗುತ್ತಿದ್ದವು. ಆದರೆ, ಸಂಸತ್‌ನಲ್ಲಿ ಕಳೆದ ವಾರ ಮಂಡಿಸಿದ ತಿದ್ದುಪಡಿ ಮಸೂದೆಯು ಇಲ್ಲಿಯವರೆಗೆ ಜಾರಿಯಲ್ಲಿದ್ದ ಪ್ರಗತಿಪರ ಕ್ರಮಗಳಿಗೆ ಹಿನ್ನಡೆ ಉಂಟುಮಾಡುವ ಆತಂಕ ಸೃಷ್ಟಿಸಿದೆ. ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿ (ಟ್ರಾನ್ಸ್‌ಜೆಂಡರ್ ಪರ್ಸನ್) ಕುರಿತಾದ ವ್ಯಾಖ್ಯೆಯನ್ನು ಮಸೂದೆಯು ಸಂಕುಚಿತಗೊಳಿಸುತ್ತಿದೆ; ಸ್ವಯಂ ಗುರ್ತಿಸಿದ ಲಿಂಗತ್ವದ ಚಹರೆಗಳನ್ನು ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಡುತ್ತದೆ. '....ಅಂತಹ ಗುರ್ತಿಸಿಕೊಳ್ಳುವಿಕೆಯನ್ನು ವೈಯಕ್ತಿಕ ಆಯ್ಕೆಯ ಆಧಾರದ ಮೇಲೆ ಅಥವಾ ವ್ಯಕ್ತಿಯು ಸ್ವಯಂ ಗ್ರಹಿಸಿದ ಗುರುತಿನ ಆಧಾರದ ಮೇಲೆ ವಿಸ್ತರಿಸಲಾಗದು' ಎಂದು ಮಸೂದೆ ಹೇಳುತ್ತದೆ. ಮಸೂದೆ ಕಾಯ್ದೆಯಾದಲ್ಲಿ, ನಿಯೋಜಿತ ವೈದ್ಯಕೀಯ ಮಂಡಳಿಯ ಶಿಫಾರಸುಗಳ ಪರಿಶೀಲನೆಯ ನಂತರ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು ಪ್ರಮಾಣ ಪತ್ರವನ್ನು ನೀಡುವ ವ್ಯವಸ್ಥೆ ಜಾರಿಗೆ ಬರಲಿದೆ. ಉದ್ದೇಶಿತ ತಿದ್ದುಪಡಿಯು ಅನೇಕ ಲಿಂಗತ್ವ ಅಲ್ಪಸಂಖ್ಯಾತರನ್ನು ಪ್ರಸಕ್ತ ಕಾಯ್ದೆ ನೀಡಿರುವ ರಕ್ಷಣೆಗಳ ವ್ಯಾಪ್ತಿಯ ಹೊರಗೆ ಇರಿಸುವುದರ ಜೊತೆಗೆ, ಅವರನ್ನು ಹೆಚ್ಚು ಕಠಿಣ ಹಿಂಸೆ, ವಿಚಾರಣೆಗೆ ಒಳಪಡಿಸಲಿದೆ.



> ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಯು, ಆ ಸಮುದಾಯದ ಹಕ್ಕುಗಳನ್ನು ದುರ್ಬಲಗೊಳಿಸುವ ಹಾಗೂ ಭ್ರಷ್ಟಾಚಾರ, ತಾರತಮ್ಯಕ್ಕೆ ಅವಕಾಶ ಕಲ್ಪಿಸುವ ನಡೆಯಂತಿದೆ.

ದೈಹಿಕ ಹಾಗೂ ವೈದ್ಯಕೀಯ ಪರಿಶೀಲನೆಯ ಮೂಲಕ ಲಿಂಗತ್ವವನ್ನು ಗುರ್ತಿಸುವ ಉದ್ದೇಶಿತ ತಿದ್ದುಪಡಿಯು 2019ರ ಕಾಯ್ದೆಯ ಮಹತ್ವವನ್ನು ಕುಗ್ಗಿಸಲಿದೆ. ಲಿಂಗತ್ವದ ಚಹರೆಗಳನ್ನು ನಿರ್ಣಯಿಸುವ ಅಧಿಕಾರವನ್ನು ಬಾಹ್ಯ ಸಂಸ್ಥೆಗೆ ನೀಡುವುದು ಹಾಗೂ ಆ ಪ್ರಕ್ರಿಯೆಗೆ ಮಾನದಂಡಗಳನ್ನು ಒಳಪಡಿಸುವ ಮೂಲಕ ವ್ಯಕ್ತಿಯ ಭಾವನೆಗಳ ಮೇಲೆ ಹೇರಿಕೆ ಮಾಡಿದಂತಾಗುತ್ತದೆ. ಲಿಂಗತ್ವದ ಅಸ್ಮಿತೆಯನ್ನು ಸ್ವಯಂ ಗುರ್ತಿಸಿಕೊಳ್ಳುವ ಹಾಗೂ ಘೋಷಿಸಿಕೊಳ್ಳುವ ಅವಕಾಶ ಕಲ್ಪಿಸಿರುವುದು ಈಗಿನ ಕಾಯ್ದೆಯ ವಿಶೇಷವಾಗಿದ್ದು, ಆ ಹಕ್ಕನ್ನು ತೆಗೆದುಹಾಕುವ ಪ್ರಯತ್ನವು ಜೀವಪರ ಕಾಯ್ದೆಯನ್ನು ದುರ್ಬಲಗೊಳಿಸುವ ಪ್ರಯತ್ನವಾಗಿದೆ ಹಾಗೂ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧವಾಗಿದೆ. ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿ ಎನ್ನುವುದರ ಪರಿಕಲ್ಪನೆಯನ್ನು ಹೆಚ್ಚು ನಿಖರಗೊಳಿಸುವುದು ತಿದ್ದುಪಡಿಯ ಉದ್ದೇಶವಾಗಿದೆ ಎಂದು ಹೇಳಲಾಗಿದೆ. ಈ ಮೂಲಕ, ಕಾನೂನಿನ ಪ್ರಯೋಜನಗಳು ಸ್ಪಷ್ಟವಾಗಿ ಗುರ್ತಿಸಬಹುದಾದ ವ್ಯಕ್ತಿಗಳಿಗೆ ತಲಪುತ್ತವೆ ಎಂದೂ ಹೇಳಲಾಗುತ್ತಿದೆ. ಆದರೆ, ಲಿಂಗ ಬದಲಾವಣೆಯ ಶಸ್ತ್ರಚಿಕಿತ್ಸೆಗೆ ಒಳಗಾಗುವ ವ್ಯಕ್ತಿಗಳ ವಿವರಗಳನ್ನು ವೈದ್ಯಕೀಯ ಸಂಸ್ಥೆಗಳು ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರೊಂದಿಗೆ ಕಡ್ಡಾಯವಾಗಿ ಹಂಚಿಕೊಳ್ಳಬೇಕೆನ್ನುವುದು ಗೋಪ್ಯತೆಯ ಹಕ್ಕಿನ ಉಲ್ಲಂಘನೆಯಾಗಿದೆ. ಸಾಂವಿಧಾನಿಕ ಹಕ್ಕು ಎಂದು ಸುಪ್ರೀಂ ಕೋರ್ಟ್ ಹೇಳಿರುವ ಸ್ವಯಂ ಗುರ್ತಿಸಿಕೊಳ್ಳುವ ಹಕ್ಕನ್ನು ನಿರಾಕರಿಸುವ ಮಸೂದೆ ಸಾಂವಿಧಾನಿಕ ಪರಿಶೀಲನೆಗೆ ಒಳಪಡಬೇಕಾದ ಅಗತ್ಯವಿದೆ.

ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳಿಗೆ ಕಾನೂನು ಕೊಡಮಾಡಿರುವ ಅನೇಕ ರಕ್ಷಣೆಗಳನ್ನು ತಿದ್ದುಪಡಿಯು ತೆಗೆದುಹಾಕಲಿದೆ. ಏಕೆಂದರೆ, ಮಸೂದೆ ಕಾಯ್ದೆಯಾದಲ್ಲಿ ಈಗ ಟ್ರಾನ್ಸ್‌ಜೆಂಡರ್ ಎಂದು ಗುರ್ತಿಸಿಕೊಂಡಿರುವ ಅನೇಕರು, ಆ ವ್ಯಾಪ್ತಿಯಿಂದ ಹೊರಗುಳಿಯಲಿದ್ದಾರೆ. ಈ ಬದಲಾವಣೆಯು ಸಾಂಸ್ಥಿಕ ಭ್ರಷ್ಟಾಚಾರವನ್ನು ಹೆಚ್ಚಿಸುವುದರ ಜೊತೆಗೆ, ತಾರತಮ್ಯಕ್ಕೂ ಅವಕಾಶ ಮಾಡಿಕೊಡಬಹುದು. ಸಂಬಂಧಪಟ್ಟ ಸಮುದಾಯದ ಜೊತೆ ಯಾವುದೇ ಚರ್ಚೆ ನಡೆಸದೆಯೇ ಮಸೂದೆಯನ್ನು ಸಿದ್ಧಪಡಿಸಿರುವುದು ಆತಂಕ ಹುಟ್ಟಿಸುವಂತಿದೆ. ಲಿಂಗತ್ವ ಅಲ್ಪಸಂಖ್ಯಾತರ ಕಳವಳಗಳಿಗೆ ಸರ್ಕಾರ ಸಹಾನುಭೂತಿಯಿಂದ ಉತ್ತರಿಸಬೇಕಾಗಿದೆ ಹಾಗೂ ತಿದ್ದುಪಡಿ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಗಿದೆ.

ಚಾಟಿ

ಆತ್ಮಹತ್ಯೆ ಪರಿಹಾರವಲ್ಲ



ಯಾರಾದರೂ ಕಿರುಕುಳ ನೀಡಿದರೆ ಧೈರ್ಯದಿಂದ ಕಾನೂನು ಹೋರಾಟ ನಡೆಸಬೇಕು. ಆತ್ಮಹತ್ಯೆ ಮಾಡಿಕೊಂಡರೆ, ಕಿರುಕುಳ ನೀಡುತ್ತಿರುವವರಿಗೆ ಶಿಕ್ಷೆ ಆಗುತ್ತದೆ ಎಂಬುದು ಮೂರ್ಖತನ. ಮಾನಸಿಕ ದೌರ್ಬಲ್ಯಕ್ಕೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡರೆ ಆರೋಪಿಗಳು ಕಾರಣರಲ್ಲ; ಆತ್ಮಹತ್ಯೆ ಮಾಡಿಕೊಂಡವರ ಮಾನಸಿಕ ದೌರ್ಬಲ್ಯವೇ ಕಾರಣವೆಂದು ಸುಪ್ರೀಂ ಕೋರ್ಟ್ ಹಲವು ಪ್ರಕರಣಗಳಲ್ಲಿ ತೀರ್ಪು ನೀಡಿದೆ.

ಸ್ನೇಹಮಯಿ ಕೃಷ್ಣ, ಸಾಮಾಜಿಕ ಹೋರಾಟಗಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಭಾರತಕ್ಕೆ ಕೊಲ್ಲಿ ಯುದ್ಧ ನಿಲ್ಲಿಸುವ ಶಕ್ತಿಯಿದೆಯೆಂದು ಹಲವು ರಾಷ್ಟ್ರಗಳು ಹೇಳುತ್ತಿವೆ ಎಂದು ಮೋಹನ್ ಭಾಗವತ್ ಹೇಳಿದ್ದಾರೆ. ಹಾಗಿದ್ದರೆ ಯುದ್ಧ ನಿಲ್ಲಿಸದೆ 'ವಿಶ್ವಗುರು' ಸುಮ್ಮನೆ ಕಾಲಹರಣ ಮಾಡುತ್ತಿರುವುದೇಕೆ?

ಪ್ರಿಯಾಂಕ್ ಖರ್ಗೆ, ಐ.ಟಿ–ಬಿ.ಟಿ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 23-3-2001

• ಕ್ರಿಕೆಟ್: ಭಾರತಕ್ಕೆ ಸರಣಿ ಗೆಲುವು

ಚೆನ್ನೈ, ಮಾರ್ಚ್ 22– ಭಾರತ ತಂಡ ಆಸ್ಟ್ರೇಲಿಯಾ ವಿರುದ್ಧದ ಮೂರನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್ ಪಂದ್ಯವನ್ನು ಇಂದು ಎರಡು ವಿಕೆಟ್‌ಗಳಿಂದ ಗೆಲ್ಲುವ ಮೂಲಕ ಸರಣಿಯನ್ನು 2–1ರಿಂದ ತನ್ನದಾಗಿಸಿಕೊಂಡಿತು.

ಎರಡನೇ ಟೆಸ್ಟ್‌ನಲ್ಲಿ ತಮ್ಮ ಪರಿಣಾಮಕಾರಿ ಬೌಲಿಂಗ್‌ನಿಂದ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹರಭಜನ್ ಸಿಂಗ್, ಇಂದು ಆಸ್ಟ್ರೇಲಿಯಾದ ಮೂರು ವಿಕೆಟ್‌ಗಳನ್ನು ಉರುಳಿಸಿದ್ದಲ್ಲದೆ ಒಟ್ಟು 84 ರನ್‌ಗಳಿಗೆ 8 ವಿಕೆಟ್ ಪಡೆದು ಜೀವನ ಶ್ರೇಷ್ಠ ಸಾಧನೆ ಮಾಡಿದರು.

ಇಂದು ಕೊನೆಯ ನಿಮಿಷಗಳಲ್ಲಿ ಸಮೀರ್ ದಿಘೆ ಮತ್ತು ಹರಭಜನ್ ಗಳಿಸಿದ ರನ್‌ಗಳು ಪಂದ್ಯಕ್ಕೆ ರೋಮಾಂಚಕ ತಿರುವು ನೀಡಿದ್ದವು.

• ಕೃಷಿ ಪಂಪ್‌ಸೆಟ್‌ಗಳಿಗೆ ಇಡೀ ರಾತ್ರಿ ವಿದ್ಯುತ್

ಬೆಂಗಳೂರು, ಮಾರ್ಚ್ 22– ತಮಿಳುನಾಡಿನಲ್ಲಿ ಇರುವ ಹಾಗೆ ನೀರಾವರಿ ಪಂಪ್‌ಸೆಟ್‌ಗಳಿಗೆ ರಾತ್ರಿ ವೇಳೆಯಲ್ಲಿ ನಿರಂತರ ವಿದ್ಯುತ್ ಪೂರೈಸುವ ಕುರಿತು ಇನ್ನು 15 ದಿನಗಳಲ್ಲಿ ತೀರ್ಮಾನ ಪ್ರಕಟಿಸಲಾಗುವುದು ಎಂದು ಇಂಧನ ಖಾತೆ ರಾಜ್ಯ ಸಚಿವ ವೀರಕುಮಾರ ಪಾಟೀಲ ಇಂದು ವಿಧಾನಸಭೆಗೆ ತಿಳಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 23-3-1951

• ಕಾಶ್ಮೀರದ ಬಗ್ಗೆ ಬ್ರಿಟನ್–ಅಮೆರಿಕಾ ಜಂಟಿ ನಿರ್ಣಯ

ಲೇಕ್‌ಸಕ್ಸಸ್, ಮಾರ್ಚ್ 22– ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿಗಳಾದ ಬೆನಗಲ್ ಶಾಮರಾಯರು ಮುಂದಿನ ಭದ್ರತಾ ಸಮಿತಿಯ ಸಭೆಯಲ್ಲಿ ಉತ್ತರ ಕೊಡಲು ಕಾಶ್ಮೀರ ಪ್ರಶ್ನೆಯ ಬಗ್ಗೆ ಸರ್ ಗ್ಲಾಡ್‌ವಿನ್ ಜೆಬ್ ಮತ್ತು ಅರ್ನೆಸ್ಟ್‌ಗ್ರಾಸ್ ಅವರು ಕೊಟ್ಟ ಭಾಷಣಗಳನ್ನು ಪರಿಶೀಲಿಸುತ್ತಿರುವುದಾಗಿ ತಿಳಿಸಿದರು.

ಅನಾರೋಗ್ಯದ ನಿಮಿತ್ತ ರಾಯರು ನಿನ್ನೆ ಭದ್ರತಾ ಸಮಿತಿಯ ಸಭೆಯಲ್ಲಿ ಭಾಗವಹಿಸಲಿಲ್ಲ.

ಕಾಶ್ಮೀರ ಪ್ರಶ್ನೆಯ ಬಗ್ಗೆ ಪಂಚಾಯಿತಿ, ಏರ್ಪಾಟು, ರಾಜ್ಯಾಂಗ ಸಭೆಯ ರಚನೆ, ಭಾರತದೊಡನೆ ಕಾಶ್ಮೀರದ ಪ್ರಸ್ತುತ ಸಂಬಂಧ ಮತ್ತು ಅದರ ಭವಿಷ್ಯದಲ್ಲಿ ವಿಶ್ವಸಂಸ್ಥೆಯ ಪಾತ್ರ, ಮುಂತಾದ ವಿಷಯಗಳನ್ನು ಕುರಿತು ಬ್ರಿಟನ್ ಮತ್ತು ಅಮೆರಿಕಾ ಪ್ರತಿನಿಧಿಗಳು ಹೆಚ್ಚುಕಮ್ಮಿ ಏಕಾಭಿಪ್ರಾಯವನ್ನೇ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ಚುನಾವಣಾಪರ್ವದ ಒಳದನಿ



ಜನರಾಜಕಾರಣ

ಸಂದೀಪ್ ಶಾಸ್ತ್ರಿ

> ಈ ವರ್ಷದ ಮೊದಲ ಚುನಾವಣಾ ಪರ್ವವು ವಿಭಿನ್ನ ಕಾರಣಗಳಿಂದಾಗಿ ಕುತೂಹಲ ಕೆರಳಿಸಿದೆ. ಪಶ್ಚಿಮ ಹಾಗೂ ಉತ್ತರದ ರಾಜ್ಯಗಳು ಇಲ್ಲದ ಈ ಚುನಾವಣೆಯಲ್ಲಿ ಬಿಜೆಪಿ ತನ್ನ ನೆಲೆ ಉತ್ತಮಪಡಿಸಿಕೊಳ್ಳುವ ಪ್ರಯತ್ನದಲ್ಲಿದ್ದರೆ, ಕಾಂಗ್ರೆಸ್ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸವಾಲು ಎದುರಿಸುತ್ತಿದೆ.

ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗೆ ನಡೆಯುವ ಚುನಾವಣೆಯ ವೇಳಾಪಟ್ಟಿ ಘೋಷಣೆಯೊಂದಿಗೆ 2026ನೆ ಇಸವಿಯ ಚುನಾವಣಾ ಪರ್ವ ಶುರುವಾಗಿದೆ. ಈ ಪರ್ವದಲ್ಲಿ ಎರಡು ಅಂಶಗಳು ಮಹತ್ವ ಪಡೆಯುತ್ತವೆ. ಮೊದಲನೆಯದು, 2024ರಿಂದ 2029ರವರೆಗಿನ ಐದು ವರ್ಷಗಳನ್ನು ಒಟ್ಟಾಗಿ ಪರಿಗಣಿಸಿದರೆ, ಪಶ್ಚಿಮ ಹಾಗೂ ಉತ್ತರದ ರಾಜ್ಯಗಳು ಇಲ್ಲದ ಮೊದಲ ಚುನಾವಣೆ ಇದು.

ಈ ಬಾರಿಯ ಚುನಾವಣೆಯು ಈಶಾನ್ಯ, ಪೂರ್ವ ಮತ್ತು ದಕ್ಷಿಣದ ರಾಜ್ಯಗಳಿಗೆ ಸೀಮಿತವಾಗಿದೆ. ಪ್ರತಿ ರಾಜ್ಯದಲ್ಲಿಯೂ ಚುನಾವಣಾ ಒಳಸುಳಿಗಳು ಭಿನ್ನವಾಗಿವೆ. ಎರಡು ರಾಜ್ಯಗಳಲ್ಲಿ ರಾಜ್ಯಮಟ್ಟದ ಪಕ್ಷಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಪಶ್ಚಿಮ ಬಂಗಾಳದಲ್ಲಿ ರಾಜ್ಯಮಟ್ಟದ ಪಕ್ಷವು ಮೂರು ಅವಧಿಯ ನಂತರ ಮತ್ತೆ ಅಧಿಕಾರಕ್ಕೆ ಬರಲು ಯತ್ನಿಸುತ್ತಿದೆ. ತಮಿಳುನಾಡಿನಲ್ಲಿ ಎರಡು ಎದುರಾಳಿ ಮೈತ್ರಿಕೂಟಗಳ ನೇತೃತ್ವ ವಹಿಸಿರುವುದು ಡಿಎಂಕೆ ಹಾಗೂ ಎಐಎಡಿಎಂಕೆ. ಇಲ್ಲಿ ರಾಷ್ಟ್ರೀಯ ಪಕ್ಷಗಳು ಈ ಪಕ್ಷಗಳ ಕಿರಿಯ ಪಾಲುದಾರನಂತಿವೆ.

ಕೇರಳದಲ್ಲಿ ಆಳವಾಗಿ ಬೇರುಬಿಟ್ಟಿರುವ ಎರಡು ರಾಜಕೀಯ ಮೈತ್ರಿಕೂಟಗಳು ಪರಸ್ಪರರ ವಿರುದ್ಧ ಸೆಣಸಾಟಕ್ಕೆ ಅಣಿಯಾಗಿವೆ. ಬಿಜೆಪಿಯು ಇಲ್ಲಿ ತನ್ನ ಇರುವಿಕೆಯನ್ನು ತೋರಿಸಲು ಮುಂದಾಗಿದೆ. ಅಸ್ಸಾಂನ ಕಣದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಪ್ರಮುಖವಾಗಿವೆ. ಪುದುಚೆರಿಯ ಕಣವು ತಮಿಳುನಾಡಿನ ಮುಂದುವರಿದ ಭಾಗದಂತೆ ಇದ್ದು, ಎನ್‌ಡಿಎ ಮತ್ತು 'ಇಂಡಿಯಾ' ಇಲ್ಲಿ ಪ್ರಮುಖ ಮೈತ್ರಿಕೂಟಗಳಾಗಿವೆ.

ಈ ಚುನಾವಣೆಯ ಫಲಿತಾಂಶವು ರಾಷ್ಟ್ರ ರಾಜಕಾರಣದ ಮೇಲೆ ಹಾಗೂ ರಾಜ್ಯಗಳ ರಾಜಕಾರಣದ ಮೇಲೆ ದೀರ್ಘಾವಧಿಯಲ್ಲಿ ಬೀರುವ ಪರಿಣಾಮವು ಎರಡನೆಯ ಅಂಶ. ನಾಲ್ಕು ರಾಜ್ಯಗಳ ಪೈಕಿ ಅಸ್ಸಾಂನಲ್ಲಿ ಬಿಜೆಪಿ ಈಗ ಅಧಿಕಾರದಲ್ಲಿದೆ, ಅಧಿಕಾರ ಉಳಿಸಿಕೊಳ್ಳುವ ಭರವಸೆ ಹೊಂದಿದೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯಿಂದ ಅಧಿಕಾರ ಕಿತ್ತುಕೊಳ್ಳಲು ಬಹಳ ಪ್ರಯತ್ನ ಮಾಡುತ್ತಿದೆ. ಕೇರಳ ಹಾಗೂ ತಮಿಳುನಾಡಿನ ವಿಚಾರದಲ್ಲಿ, ದೀರ್ಘಾವಧಿಗಾಗಿ ಬಿಜೆಪಿಯು ಒಂದಿಷ್ಟು ಯೋಜನೆಗಳನ್ನು ಹೊಂದಿರುವಂತಿದೆ. ಕೇರಳದಲ್ಲಿ ಮೂರನೆಯ ಶಕ್ತಿಯಾಗಿ ಉದಯಿಸಿ, ಮುಂದೊಂದು ದಿನ ಅಲ್ಲಿನ ಎರಡು ಮೈತ್ರಿಕೂಟಗಳ ಪೈಕಿ ಯಾವುದಾದರೂ ಒಂದರ ಸ್ಥಾನವನ್ನು ತಾನು ಪಡೆದುಕೊಳ್ಳುವ ಇರಾದೆ ಬಿಜೆಪಿಗೆ ಇದೆ.

ತಮಿಳುನಾಡಿನಲ್ಲಿ ಬಲಿಷ್ಠವಾದ ಡಿಎಂಕೆ ವಿರೋಧಿ ಮೈತ್ರಿಕೂಟ ರಚಿಸಲು ತನ್ನ ಹಳೆಯ ಮಿತ್ರನಾದ ಎಐಎಡಿಎಂಕೆ ಜೊತೆ ಬಿಜೆಪಿ ಕೈಜೋಡಿಸಿದೆ. ಕಾಂಗ್ರೆಸ್ಸಿನ ಪಾಲಿಗೆ ಈ ಬಾರಿಯ ಚುನಾವಣೆಗಳು ಅಸ್ತಿತ್ವದ ದೃಷ್ಟಿಯಿಂದ ಮಹತ್ವದ್ದಾಗಿವೆ. ಅಸ್ಸಾಂನಲ್ಲಿ ಗುರುತರ ಏಳಿಗೆ ತೋರದಿದ್ದರೆ, ಅಲ್ಲಿನ ಆಡಳಿತವನ್ನು ಮೂರನೆಯ ಬಾರಿಗೆ ಬಿಜೆಪಿಗೆ ಬಿಟ್ಟುಕೊಟ್ಟಂತೆ ಆಗುತ್ತದೆ. ಕೇರಳದಲ್ಲಿ ಯುಡಿಎಫ್ ಮೈತ್ರಿಕೂಟದ ನಾಯಕನಾಗಿ, ಎಲ್‌ಡಿಎಫ್ ವಿರುದ್ಧದ ಆಡಳಿತ ವಿರೋಧಿ ಅಲೆಯನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಅವಕಾಶ ಕಾಂಗ್ರೆಸ್ಸಿಗೆ ಇರುವಂತಿದೆ.

ಆದರೆ ತಮಿಳುನಾಡಿನಲ್ಲಿ, ಡಿಎಂಕೆ ಪಕ್ಷದ ಕಿರಿಯ ಪಾಲುದಾರ ಆಗುವ ಹೊರತು ಬೇರೆ ಆಯ್ಕೆ ಕಾಂಗ್ರೆಸ್ಸಿಗೆ ಇಲ್ಲ. ಪಶ್ಚಿಮ ಬಂಗಾಳದಲ್ಲಿ ಒಂದೆರಡು ಕಡೆಗಳನ್ನು ಹೊರತುಪಡಿಸಿದರೆ ಕಾಂಗ್ರೆಸ್ ಪಕ್ಷವು ಅಂಚಿಗೆ ಸರಿದುಹೋಗಿದೆ. ಈ ಬಾರಿಯ ಚುನಾವಣೆ ರಾಜ್ಯಮಟ್ಟದ ಪಕ್ಷಗಳು ದೀರ್ಘಾವಧಿಯಲ್ಲಿ ಎಷ್ಟು ಸ್ಥಿರವಾಗಿರಬಲ್ಲವು, ಅದರಲ್ಲೂ ಮುಖ್ಯವಾಗಿ ಪಶ್ಚಿಮ ಬಂಗಾಳ ಹಾಗೂ ತಮಿಳುನಾಡಿನಲ್ಲಿ ಎಷ್ಟು ಸ್ಥಿರತೆ ಒದಗಿಸಬಲ್ಲವು ಎಂಬುದನ್ನು ಪರಿಶೀಲಿಸಲಿದೆ.

ನಾಲ್ಕೂ ರಾಜ್ಯಗಳ ಮೇಲೆ ದೃಷ್ಟಿ ಹಾಯಿಸಿ, ಅಲ್ಲಿನ ಚುನಾವಣಾ ಕಣದ ಪ್ರಮುಖ ಅಂಶಗಳನ್ನು ಉಲ್ಲೇಖಿಸುವುದು ಸೂಕ್ತವಾಗುತ್ತದೆ. ಪಶ್ಚಿಮ ಬಂಗಾಳದಲ್ಲಿನ ಸ್ಪರ್ಧೆಯನ್ನು ಇಡೀ ದೇಶ ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ. ಅಲ್ಲಿನ ಆಡಳಿತಾರೂಢ ಟಿಎಂಸಿ ಪಕ್ಷವು ತನ್ನ ಸಾಧನೆಯನ್ನು ಹೇಳುವ ಬದಲಿಗೆ, ರಾಷ್ಟ್ರೀಯ ವಿಷಯಗಳ ಬಗ್ಗೆ ಹೆಚ್ಚು ಗಮನ ನೀಡುತ್ತಿದೆ. ಇದು ಮಮತಾ ಬ್ಯಾನರ್ಜಿ ಎದುರಿಸುತ್ತಿರುವ ಅತ್ಯಂತ ಕಠಿಣ ಚುನಾವಣೆ. ಈ ರಾಜ್ಯದಲ್ಲಿ ಜಯ ಸಾಧಿಸಲು ಬಿಜೆಪಿಯು ಸರ್ವಪ್ರಯತ್ನ ನಡೆಸಿದೆ. ಆದರೆ ಜನಪ್ರಿಯ ಸ್ಥಳೀಯ ನಾಯಕ ಇಲ್ಲದಿರುವುದು ಆ ಪಕ್ಷಕ್ಕೆ ದೊಡ್ಡ ಸವಾಲು. ಹಿಂದೆ ಆದಂತೆ ಈ ಬಾರಿಯೂ ರಾಷ್ಟ್ರೀಯ ನಾಯಕತ್ವವನ್ನು ಮುಂದಿಟ್ಟುಕೊಂಡೇ ಪಕ್ಷವು ಚುನಾವಣೆ ಎದುರಿಸಬಹುದಾದರೂ, ಮಮತಾ ಅವರಿಗೆ ಸವಾಲು ಹಾಕುವಂತಹ ಸ್ಥಳೀಯ ನಾಯಕತ್ವ ಇಲ್ಲದಿರುವುದು ಅಡ್ಡಿಯಾಗಿ ಪರಿಣಮಿಸಬಹುದು.

ಹಿಂದಿನ ವರ್ಷ ನಡೆದ ಒಡಿಶಾ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿಯೂ ಪರಿಸ್ಥಿತಿ ಸರಿಸುಮಾರು ಹೀಗೇ ಇತ್ತು ಎಂಬುದು ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಸ್ಫೂರ್ತಿಯಾಗಿ ಒದಗಿಬರಬಹುದು. ಆದರೆ ಒಡಿಶಾದಲ್ಲಿ ಚುನಾವಣೆಯು ಲೋಕಸಭಾ ಚುನಾವಣೆಯ ಜೊತೆಯಲ್ಲೇ ನಡೆದಿತ್ತು, ಪಶ್ಚಿಮ ಬಂಗಾಳದ ಚುನಾವಣೆಯು ಇತರ ರಾಜ್ಯಗಳ ಚುನಾವಣೆ ಜೊತೆ ನಡೆಯುತ್ತಿದೆ ಎಂಬುದು ಪ್ರಮುಖವಾದುದು. ಪಶ್ಚಿಮ ಏಷ್ಯಾದಲ್ಲಿನ ಬೆಳವಣಿಗೆಗಳಿಂದ ದೇಶದ ಅರ್ಥವ್ಯವಸ್ಥೆ ಮೇಲೆ ಆಗುವ ಪರಿಣಾಮವನ್ನು ಟಿಎಂಸಿ ತನ್ನ ಅನುಕೂಲಕ್ಕೆ ಬಳಸಬಹುದು.

ನಟ ವಿಜಯ್ ಅವರು ಚುನಾವಣಾ ಕಣ ಪ್ರವೇಶಿಸುವುದರೊಂದಿಗೆ ತಮಿಳುನಾಡಿನ ಹಣಾಹಣಿಯ ಫಲಿತಾಂಶವನ್ನು ಊಹಿಸುವುದು ಬಹಳ ಕಷ್ಟದ ಕೆಲಸವಾಗಿದೆ. ವಿಜಯ್ ಅವರು ಚುನಾವಣಾ ಪರೀಕ್ಷೆಗೆ ಒಡ್ಡಿಕೊಂಡವರಲ್ಲ, ರ‍್ಯಾಲಿಗಳಲ್ಲಿ ಅವರಿಗೆ ಸಿಗುತ್ತಿರುವ ಜನಬೆಂಬಲವು ಮತವಾಗಿ ಪರಿವರ್ತನೆ ಆಗುತ್ತದೆಯೇ ಎಂಬುದು ಖಚಿತವಿಲ್ಲ. ಮೂರನೆಯ ಶಕ್ತಿಯಾಗಿ ಅವರ ಇರುವಿಕೆಯು ಡಿಎಂಕೆ ವಿರೋಧಿ ಮತಗಳನ್ನು ವಿಭಜಿಸುವ ಸಾಧ್ಯತೆ ಇದೆ. ಈ ಕಾರಣದಿಂದಾಗಿಯೇ ಅವರನ್ನು ಎನ್‌ಡಿಎ ತೆಕ್ಕೆಗೆ ತರಲು ಯತ್ನಗಳು ನಡೆದಿವೆ. ಇಲ್ಲಿ ಮೂರು ಬಗೆಯ ಸವಾಲುಗಳಿವೆ: ವಿಜಯ್ ಅವರ ಪಕ್ಷವನ್ನು ಸೇರಿಸಿಕೊಳ್ಳಲು ಎಐಎಡಿಎಂಕೆ ಹಿಂದೇಟು ಹಾಕುತ್ತಿರುವುದು; ವಿಜಯ್ ಅವರು ತಮ್ಮ ಪಕ್ಷಕ್ಕೆ ಬಯಸುತ್ತಿರುವ ಸ್ಥಾನಗಳು ಮತ್ತು ತಮಗಾಗಿ ಅವರು ಕೇಳುತ್ತಿರುವ ಸ್ಥಾನ; ರ‍್ಯಾಲಿಗಳಲ್ಲಿ ಅವರು ಬಿಜೆಪಿಯ ವಿರುದ್ಧವಾಗಿ ತೆಗೆದುಕೊಂಡಿರುವ ತೀವ್ರವಾದ ನಿಲುವು.

ಕೊನೆಯ ಅಂಶವನ್ನು ಮರೆಮಾಚಿಬಿಡಬಹುದು. ಆದರೆ ಮೊದಲ ಎರಡು ಅಂಶಗಳು ಈ ಮೈತ್ರಿಯನ್ನು ಅವಾಸ್ತವಿಕ ಆಗಿಸಬಹುದು. ಜಯಲಲಿತಾ ಅವರ ನಂತರದಲ್ಲಿ ಎಐಎಡಿಎಂಕೆ ಪಕ್ಷವು ಡಿಎಂಕೆ ನಾಯಕತ್ವಕ್ಕೆ ಸವಾಲು ಒಡ್ಡುವಲ್ಲಿ ಸೀಮಿತ ಯಶಸ್ಸು ಕಂಡಿದೆ. ಹೀಗಿದ್ದರೂ ಎಐಎಡಿಎಂಕೆ ಪಕ್ಷದ ಮತಗಳಿಕೆ ಪ್ರಮಾಣವು, ಅದು ಡಿಎಂಕೆ ನೇತೃತ್ವದ ಮೈತ್ರಿಕೂಟಕ್ಕೆ ಒಂದಿಷ್ಟು ಸವಾಲು ಒಡ್ಡುವ ಸ್ಥಾನದಲ್ಲಿರುವಂತೆ ಮಾಡಿದೆ. ಡಿಎಂಕೆ ಹಾಗೂ ಎಐಎಡಿಎಂಕೆ ನೇತೃತ್ವದ ಮೈತ್ರಿಕೂಟಗಳಲ್ಲಿ ಪಕ್ಷಗಳ ನಡುವಿನ ಹೊಂದಾಣಿಕೆ ಹೇಗಿರುತ್ತದೆ, ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡು ಮತಗಳ ವರ್ಗಾವಣೆಯನ್ನು ಸರಿಯಾಗಿ ಆಗುವಂತೆ ಮಾಡಲು ಯಾರಿಗೆ ಸಾಧ್ಯವಾಗುತ್ತದೆ ಎಂಬುದು ಮಹತ್ವದ್ದಾಗುತ್ತದೆ.

ಅಸ್ಸಾಂನಲ್ಲಿ ಹಣಾಹಣಿಯು ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಇರಲಿರುವುದು ಸ್ಪಷ್ಟ. ಅಲ್ಲಿ ಬಿಜೆಪಿಯು ಇಬ್ಬರು ಬೇರೆ ಬೇರೆ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಎರಡು ಅವಧಿಗಳನ್ನು ಪೂರ್ಣಗೊಳಿಸುತ್ತಿದೆ. ಸರ್ಬಾನಂದ ಸೊನೊವಾಲ್ ಹಾಗೂ ಹಿಮಂತ್ ಬಿಸ್ವಾ ಶರ್ಮಾ ಅವರ ಶೈಲಿ ಭಿನ್ನ. ಇಬ್ಬರೂ ಕಟ್ಟಿದ ಸಾಮಾಜಿಕ ಒಕ್ಕೂಟಗಳು ಬೇರೆ ಬೇರೆ. ಸೊನೊವಾಲ್ ಅವರು ಅಲ್ಲಿನ ಮೂಲನಿವಾಸಿಗಳನ್ನು ಒಗ್ಗೂಡಿಸಲು ಆದ್ಯತೆ ನೀಡಿದರೆ, ಶರ್ಮಾ ಅವರು ಹಿಂದೂ ಒಗ್ಗಟ್ಟಿಗೆ ಗಮನ ನೀಡಿದ್ದಾರೆ. ಈ ಬಗೆಯ ಸಾಮಾಜಿಕ ಮೈತ್ರಿಕೂಟವನ್ನು ಎದುರಿಸಲು ಕಾಂಗ್ರೆಸ್ಸಿಗೆ ಎಷ್ಟರಮಟ್ಟಿಗೆ ಆಗುತ್ತದೆ ಎಂಬುದನ್ನು ನೋಡಬೇಕಿದೆ. ಎಐಯುಡಿಎಫ್ ಪಕ್ಷವು ವಿಶ್ವಾಸಾರ್ಹತೆಯನ್ನು ಕಳೆದುಕೊಂಡಂತಿದೆ, ಈ ಪಕ್ಷದ ಜೊತೆಗಿನ ಮೈತ್ರಿಯಿಂದ ಕಾಂಗ್ರೆಸ್ಸಿಗೆ ನಿಜಕ್ಕೂ ಲಾಭವಾಗಲಿದೆಯೇ ಎಂಬುದು ಮಹತ್ವದ ಅಂಶವಾಗುತ್ತದೆ.

ಕೇರಳದಲ್ಲಿ ಜಯ ಹಾಗೂ ಸೋಲಿನ ನಡುವಿನ ವ್ಯತ್ಯಾಸವು ಬಹಳ ಸಣ್ಣ ಪ್ರಮಾಣದಲ್ಲಿರುತ್ತದೆ. ಅಲ್ಲಿ ಯಾವಾಗಲೂ ಎಲ್‌ಡಿಎಫ್ ಹಾಗೂ ಯುಡಿಎಫ್ ನಡುವೆ ಮತಗಳಿಕೆಯಲ್ಲಿನ ಅಂತರವು ಬಹಳ ಕಡಿಮೆ ಇರುತ್ತದೆ. ಇಲ್ಲಿ ಬಿಜೆಪಿಯು ಬಲ ಹೆಚ್ಚಿಸಿಕೊಂಡಿರುವುದು ಎರಡೂ ಮೈತ್ರಿಕೂಟಗಳಿಗೆ ಸಮಸ್ಯೆಯಾಗಬಹುದು. ಬಿಜೆಪಿಯು ದೀರ್ಘಾವಧಿಯಲ್ಲಿ ಎಲ್‌ಡಿಎಫ್ ಮೈತ್ರಿಕೂಟವನ್ನು ದುರ್ಬಲಗೊಳಿಸಿ, ಎರಡನೆಯ ಶಕ್ತಿಯಾಗಿ ಬೆಳೆಯುವ, ನಂತರದಲ್ಲಿ ಕಾಂಗ್ರೆಸ್ಸಿಗೆ ಸವಾಲು ಒಡ್ಡುವ ಗುರಿಯನ್ನು ಹೊಂದಿರುವಂತಿದೆ. ಎಲ್‌ಡಿಎಫ್ ಮೈತ್ರಿಕೂಟವು ಕೇರಳದಲ್ಲಿ ಎರಡು ಅವಧಿಗೆ ಅಧಿಕಾರ ಅನುಭವಿಸಿದೆ, ಆಡಳಿತ ವಿರೋಧಿ ಅಲೆಯ ಪ್ರಯೋಜನ ತನಗೆ ದಕ್ಕಲಿದೆ ಎಂಬ ಸ್ಪಷ್ಟ ಸೂಚನೆಯು ಕಾಂಗ್ರೆಸ್ಸಿಗೆ ಸಿಕ್ಕಿರುವಂತಿದೆ. ಅದೇನೇ ಇದ್ದರೂ, ಕೈಗೆ ಸಿಕ್ಕಿದ ಜಯವನ್ನು ಕಳೆದುಕೊಂಡು, ಸೋಲನ್ನು ತನ್ನದಾಗಿಸಿಕೊಳ್ಳುವ ಬಹುವಿಶಿಷ್ಟವಾದ (ಹರಿಯಾಣದಲ್ಲಿ ಕಂಡಂತಹ) ಕೌಶಲವೊಂದು ಕಾಂಗ್ರೆಸ್ಸಿಗೆ ಇದೆ!

ಕೇರಳ ಕಾಂಗ್ರೆಸ್ಸಿನಲ್ಲಿನ ಒಳಜಗಳವು ಚುನಾವಣೆಯಲ್ಲಿ ದುಬಾರಿಯಾಗಿ ಪರಿಣಮಿಸಬಹುದು. ಅದನ್ನು ವಿರೋಧಿಗಳು ತಮ್ಮ ಅನುಕೂಲಕ್ಕೆ ಬಳಸಿ ಕೊಳ್ಳಬಹುದು. ಪುದುಚೆರಿಯಲ್ಲಿ ಕಾಂಗ್ರೆಸ್ ಹಾಗೂ ಅದರಿಂದ ಒಡೆದು ಹೊರಹೋಗಿರುವ, ಈಗ ಎನ್‌ಡಿಎ ಜೊತೆ ಗುರುತಿಸಿಕೊಂಡಿರುವ, ಈಗ ಅಧಿಕಾರದಲ್ಲಿ ಇರುವ ಪಕ್ಷದ ನಡುವೆ ಸ್ಪರ್ಧೆ ಇರಲಿದೆ. ನಾಲ್ಕು ರಾಜ್ಯಗಳಲ್ಲಿನ ಚುನಾವಣೆಯು ಭಿನ್ನ ರಾಜಕೀಯ ನೆಲೆಗಳಿಂದ ಸಿಗುವ 'ಬಹುತ್ವದ ಲಾಭ'ವನ್ನು ಪಕ್ಷಗಳಿಗೆ ಒದಗಿಸಲಿದೆ. ಪ್ರತಿ ರಾಜ್ಯದ ಚುನಾವಣಾ ಫಲಿತಾಂಶ ಕೂಡ ಸ್ಥಳೀಯ ಅಂಶಗಳನ್ನು ಆಧರಿಸಿ ಇರುವ ನಿರೀಕ್ಷೆಯಿದೆ.

ಅಂತಿಮವಾಗಿ, ರಾಜಕಾರಣದ ಹೊಸ ಕೇಂದ್ರಗಳು ರಾಜ್ಯಗಳು ಎಂಬ ಮಾತಿಗೆ ಈಗ ನಾವು ಸಾಕ್ಷಿಯಾಗಲಿರುವ ಚುನಾವಣೆಗಿಂತ ಹೆಚ್ಚು ಉತ್ತಮವಾದ ಉದಾಹರಣೆಯು ಸಿಗಲಿಕ್ಕಿಲ್ಲ.



ವಾಚಕರ ವಾಣಿ

ಜನಗಣತಿಗೆ ಶಿಕ್ಷಕರ ಬಳಕೆ ನ್ಯಾಯಸಮ್ಮತವೆ?

ಶಿಕ್ಷಕರು ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಸಮಾಜಕ್ಕೆ ಉತ್ತಮ ನಾಗರಿಕರನ್ನು ನೀಡುತ್ತಾರೆ. ಮೂಲಭೂತ ಹಕ್ಕಾದ ಪ್ರಾಥಮಿಕ ಶಿಕ್ಷಣವನ್ನು ಮಕ್ಕಳಿಗೆ ನೀಡಲು ಶಿಕ್ಷಕರಿಗೆ ಸಕಲ ಸೌಕರ್ಯಗಳನ್ನೂ, ಸಮಯವನ್ನೂ, ಅವಕಾಶಗಳನ್ನೂ ನೀಡಬೇಕಾದದ್ದು ಸರ್ಕಾರದ ಕರ್ತವ್ಯ. ಮಕ್ಕಳಿಗೆ ಪಾಠ ಮಾಡಬೇಕು, ಊಟ ನೀಡಬೇಕು, ಮನರಂಜನೆ ಒದಗಿಸಬೇಕು, ರಕ್ಷಣೆ ಕೊಟ್ಟು ಮಕ್ಕಳನ್ನು ಕಾಪಾಡಬೇಕು – ಇದೆಲ್ಲದಕ್ಕಾಗಿ ಸಕಲ ಸಿದ್ಧತೆಗಳನ್ನೂ ಅವರು ಮಾಡಿಕೊಳ್ಳಬೇಕು. ಈ ಶಿಕ್ಷಕರಿಗೆ ಪುರುಸೊತ್ತೆಲ್ಲಿದೆ? ಹೀಗಿರುವಾಗ ಸರ್ಕಾರ ಅವರ ಸಮಯ, ಪರಿಶ್ರಮವನ್ನು ಅವರಿಗೆ ಸಂಬಂಧವೇ ಇಲ್ಲದ ಜನಗಣತಿ ಕೆಲಸಕ್ಕಾಗಿ ಬಳಸುವುದು ಅನ್ಯಾಯ. ನಾಡಿನಲ್ಲಿ ಕೆಲಸ ಸಿಗದೆ ನಿರುದ್ಯೋಗಿ ಯುವಜನತೆ ತೊಳಲಾಡುತ್ತಿದೆ. ಅವರನ್ನು ಇದಕ್ಕೆ ಬಳಸಿಕೊಂಡರೆ ಅವರಿಗೆ ಆರ್ಥಿಕವಾಗಿ ಕೊಂಚ ಅನುಕೂಲ ಆಗುತ್ತದೆ.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಸರ್ಕಾರಗಳ ಪರಿಸರ ವಿರೋಧಿ ನಡವಳಿಕೆ

'ಯೋಜನೆಗಳ ಸಾಲು; ಸೂಕ್ಷ್ಮಪರಿಸರಕ್ಕೆ ಸವಾಲು' ವರದಿಯು (ವಾರದ ವಿಶೇಷ, ಪ್ರ.ವಾ., ಮಾರ್ಚ್ 21) ಸಕಾಲಿಕವಾಗಿದೆ. ಸೂಕ್ಷ್ಮಪರಿಸರಕ್ಕೆ ಧಕ್ಕೆ ತರುವ ಯೋಜನೆಗಳನ್ನು ಒಂದೆಡೆ ತೋರಿಸಿ ಸವಾಲುಗಳ ಗಂಭೀರ ಸ್ಥಿತಿಯ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗಿದೆ. ಆದರೆ, ಅಧಿಕಾರ ರಾಜಕೀಯಕ್ಕೆ ದರೋಡೆಯೇ ಉದ್ದೇಶ. ಅದರಲ್ಲಿ ಎಲ್ಲ ಪಕ್ಷಗಳೂ ತೆರೆಮರೆಯಲ್ಲಿ ಸಹಕರಿಸುತ್ತವೆ. ಇಂಥ ಕೆಲಸ ಮಾಡಲಾಗದಂತೆ ಸಾಂವಿಧಾನಿಕ ತಿದ್ದುಪಡಿ ತರಬೇಕಿದೆ. ರಾಜಕೀಯ ಇಷ್ಟು ಮಾನವವಿರೋಧಿ, ಪರಿಸರ ವಿರೋಧಿ ಹಿಂದೆಂದೂ ಆಗಿರಲಿಲ್ಲ. ಅಖಿಲ ಭಾರತ ಮಟ್ಟದ ಚಿತ್ರಣ ಇನ್ನೂ ಹದಗೆಟ್ಟಿದೆ.

ಕೆ.ಎಸ್. ಪಾರ್ಥಸಾರಥಿ, ಬೆಂಗಳೂರು

ತುಂಗಾ ನದಿ ಒಡಲು; ದುಃಖದ ಕಡಲು

ಕಡಿಮೆ ಜನವಸತಿ ಇರುವ ಶೃಂಗೇರಿಯಂತಹ ಮಲೆನಾಡಿನ ಮಡಿಲಲ್ಲಿ ಹರಿಯುವ ತುಂಗಾ ನದಿ ಹೆಚ್ಚು ಕಲುಷಿತಗೊಂಡಿದೆ. ರಸ್ತೆಯ ಇಕ್ಕೆಲಗಳಲ್ಲಿ ಇರುವ ಗೃಹಗಳು, ವಸತಿಗೃಹ, ಹೋಟೆಲ್, ಕೈಗಾರಿಕೆ, ಕೃಷಿ ತ್ಯಾಜ್ಯ ನದಿಯ ಒಡಲು ಸೇರುತ್ತಿದೆ. ಚರಂಡಿ ನೀರನ್ನು ಸಂಸ್ಕರಿಸದೆ ನೇರವಾಗಿ ಹರಿಸಲಾಗುತ್ತಿದೆ. ಈ ಭಾಗದಲ್ಲಿ ಎಗ್ಗಿಲ್ಲದೇ ನಡೆಯುತ್ತಿರುವ ಮರಳು ಗಣಿಗಾರಿಕೆಯಿಂದ ನದಿಯ ನೈಸರ್ಗಿಕ ಪರಿಸರ ಹದಗೆಟ್ಟಿದೆ. ಮಾನವನ ಈ ಕೃತ್ಯದಿಂದ ಅದೆಷ್ಟೋ ಜಲಚರಗಳು ಮಲೆನಾಡಿನಿಂದ ಕಣ್ಮರೆಯಾಗಿವೆ. ಇನ್ನಾದರೂ ಎಚ್ಚೆತ್ತುಕೊಂಡು ಪರಿಸರಸ್ನೇಹಿಯಾಗಿ ವರ್ತಿಸಬೇಕಿದೆ. ಇಲ್ಲವಾದರೆ ಭವಿಷ್ಯದಲ್ಲಿ ಪ್ರಕೃತಿಯೇ ಮಲೆನಾಡಿಗರಿಗೆ ಪಾಠ ಕಲಿಸುವುದರಲ್ಲಿ ಸಂಶಯವಿಲ್ಲ.

ಸಚಿನ್ ಹೊಳೆಹದ್ದು, ಶೃಂಗೇರಿ

ಪರಿಶಿಷ್ಟರಿಗೆ ನಾರಾಯಣಗುರುವೇ ಆದರ್ಶ

ಯಾದಗಿರಿ ಜಿಲ್ಲೆಯಲ್ಲಿ ಹನುಮಾನ್ ದೇವಾಲಯದ ಕಟ್ಟೆಯ ಮೇಲೆ ಕುಳಿತಿದ್ದ ಪರಿಶಿಷ್ಟರ ಮೇಲೆ ಹಲ್ಲೆ ನಡೆಸಲಾಗಿದೆ (ಪ್ರ.ವಾ., ಮಾರ್ಚ್ 22). ದೇವರನ್ನು ಮುಂದಿಟ್ಟುಕೊಂಡು ಪರಿಶಿಷ್ಟರಿಗೆ ಮಾಡುತ್ತಿರುವ ನಿರಂತರ ಅವಮಾನಕ್ಕೆ ಕೊನೆ ಇಲ್ಲವೆ? 'ನಾವೆಲ್ಲ ಹಿಂದೂ, ನಾವೆಲ್ಲ ಒಂದು' ಎನ್ನುವ ಘೋಷಣೆ ಅನುಷ್ಠಾನದ ಕಡೆಗೆ ತಿರುಗದಿದ್ದರೆ ಹೇಗೆ? ಸಮಾನತೆ ಬಯಸುವ ಪರಿಶಿಷ್ಟ ಸಮಾಜವನ್ನು ಬೇರೆ ಧರ್ಮದ ಕಡೆಗೆ ಹೋಗಲೂ ಬಿಡದೆ, ತಾನೂ ಸಮಾನತೆ ನೀಡದೆ, ಒಳಗೊಳಗೇ ಬೆಳೆಯುತ್ತಿರುವ ಅಸಮಾನತೆಗೆ ಒತ್ತು ಕೊಡುತ್ತಿರುವುದು ಸರಿಯೆ? ಈ ಅಸಹನೆ ಹೋಗಲಾಡಿಸಲು ಆಡಳಿತ ವ್ಯವಸ್ಥೆಯಲ್ಲೂ ಪರಿಣಾಮಕಾರಿ ಸುಧಾರಣೆಗಳಾಗುತ್ತಿಲ್ಲ. ಅಂದಮೇಲೆ, ಪರಿಶಿಷ್ಟರ ನೆರವಿಗೆ ನಿಲ್ಲುವುದು ಕೇರಳದ ನಾರಾಯಣಗುರು ಸಿದ್ಧಾಂತ ಮಾತ್ರ. ಪರಿಶಿಷ್ಟರು ತಮ್ಮದೇ ದೇವಾಲಯ ಕಟ್ಟಿಕೊಂಡು ಹಿಂದೂ ದೇವಾಲಯಗಳ ಹತ್ತಿರ ಸುಳಿಯದೆ ತಮ್ಮ ಪ್ರತಿಭಟನೆ ದಾಖಲಿಸಬೇಕಿದೆ. ಈ ದಿಸೆಯಲ್ಲಿ ದಲಿತ ಸಂಘಟನೆಗಳು ಆಲೋಚಿಸಲಿ.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಕೃಷ್ಣಮೂರ್ತಿ ಪುರಾಣಿಕರ ಪತ್ರಗಳು ಬೇಕು

ಕಾದಂಬರಿಕಾರ ಕೃಷ್ಣಮೂರ್ತಿ ಪುರಾಣಿಕರು 80 ಕಾದಂಬರಿಗಳ ಸಹಿತ 116 ಕೃತಿಗಳನ್ನು ರಚಿಸಿದ್ದಾರೆ. ಅವರ 13 ಕಾದಂಬರಿಗಳು ಚಲನಚಿತ್ರಗಳಾಗಿವೆ. ಪುರಾಣಿಕರ ಕಾದಂಬರಿಗಳನ್ನು ಓದಿದ ಓದುಗರು ಅವರಿಗೆ ಪತ್ರ ಬರೆದು ಸಂತಸ ವ್ಯಕ್ತಪಡಿಸುತ್ತಿದ್ದರು. ಅಂತಹ ಅಸಂಖ್ಯಾತ ಪತ್ರಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ತರಲು ನಿರ್ಧರಿಸಲಾಗಿದೆ. ಇದೇ ಕೃತಿಯಲ್ಲಿ ಪುರಾಣಿಕರು ಓದುಗರಿಗೆ ಬರೆದ ಪತ್ರಗಳೂ ದೊರಕಿದರೆ ಅವುಗಳನ್ನೂ ಸೇರಿಸಲು ತೀರ್ಮಾನಿಸಲಾಗಿದೆ. ಅವರು ಮರಳಿ ಉತ್ತರಿಸಿದ ಪತ್ರಗಳು ಉಳಿದುಕೊಂಡಿದ್ದರೆ ಅವುಗಳ ಪ್ರತಿಯನ್ನು ಕಳುಹಿಸಿಕೊಡಬೇಕಾಗಿ ಅರಿಕೆ. ವಿಳಾಸ: ಕಾರ್ಯದರ್ಶಿ, ಕೃಷ್ಣಮೂರ್ತಿ ಪುರಾಣಿಕ ಪ್ರತಿಷ್ಠಾನ, ಗಗನ ಅಪಾರ್ಟ್‌ಮೆಂಟ್, ರಾಯ್‌ರೋಡ್, ಟಿಳಕವಾಡಿ, ಬೆಳಗಾವಿ–590006.

ಆನಂದ ಪುರಾಣಿಕ, ಬೆಳಗಾವಿ

ಸಂವಿಧಾನ ಗೌರವಿಸುವುದೇ ದೇಶಭಕ್ತಿ

ಇಡೀ ದೇಶ ಮಾರ್ಚ್ 23ರಂದು ಭಗತ್ ಸಿಂಗ್, ಸುಖದೇವ್ ಮತ್ತು ರಾಜ ಗುರು ಅವರ ಬಲಿದಾನವನ್ನು ಸ್ಮರಿಸುತ್ತದೆ. ಆದರೆ, 'ಹುತಾತ್ಮರ ದಿನ'ವು ಫೋಟೊಗಳಿಗೆ ಹಾರ ಹಾಕಿ ಕೈಮುಗಿಯುವುದಕ್ಕೆ ಸೀಮಿತವಾಗಿದೆ. ಪರಕೀಯ ಸಂಸ್ಕೃತಿಯೇ ಶ್ರೇಷ್ಠವೆಂಬ ಭ್ರಮೆಯಲ್ಲಿ ನಾಡಿನ ಇತಿಹಾಸ, ವೀರರ ಗಾಥೆಗಳನ್ನು ಮರೆಯುತ್ತಿದ್ದೇವೆ. ದೇಶಪ್ರೇಮವು ಕೇವಲ ವಾಟ್ಸ್‌ಆ್ಯಪ್ ಸ್ಟೇಟಸ್‌ಗಳಿಗೆ, ಸಾಮಾಜಿಕ ಜಾಲತಾಣಗಳ ಲೈಕ್‌ಗಳಿಗೆ ಸೀಮಿತವಾಗುತ್ತಿದೆ. ದೇಶಪ್ರೇಮವೆಂದರೆ ಯುದ್ಧ ಮಾಡುವುದಲ್ಲ. ಅದು ದೇಶದ ಸಂವಿಧಾನ ಹಾಗೂ ಕಾನೂನಿಗೆ ಗೌರವ ನೀಡುವುದಾಗಿದೆ. ದೇಶಕ್ಕಾಗಿ ಪ್ರಾಣ ಕೊಡುವ ಅನಿವಾರ್ಯತೆ ಇಂದು ನಮಗಿಲ್ಲ; ಆದರೆ, ದೇಶಕ್ಕಾಗಿ ಬದುಕುವ ಅವಶ್ಯಕತೆ ಖಂಡಿತಾ ಇದೆ.

ಎಸ್. ನಾಗರಾಜ ನಾಗೂರ, ಬಾಗಲಕೋಟೆ

ಚುರುಮುರಿ



ಸಂತೋಷದ ಮಾನದಂಡ

• ಸುಮಂಗಲಾ

'ನೋಡಿಲ್ಲಿ... ನಮ್ ಸಂತೋಷದ ಸೂಚ್ಯಂಕ ಎರಡು ಪಾಯಿಂಟ್ ಹೆಚ್ಚಾಗೈತಿ!' ಬೆಕ್ಕಣ್ಣ ಭಯಂಕರ ಖುಷಿಯಿಂದ ವದರಿತು.

'ಎಷ್ಟನೇ ರ‍್ಯಾಂಕಿಂಗ್?' ಸಂಭ್ರಮದಿಂದ ಕೇಳಿದೆ.

'ಸಮೀಕ್ಷೆ ನಡೆಸಿದ 147 ದೇಶಗಳಲ್ಲಿ ನಾವು 116ನೇ ಸ್ಥಾನದಾಗೆ ಅದೀವಿ. ಹೋದ್ವರ್ಸ 118ನೇ ಸ್ಥಾನದಾಗೆ ಇದ್ದಿವಿ' ಬೆಕ್ಕಣ್ಣ ಬೀಗಿತು.

'ನಮ್ ಪಕ್ಕದ ದೇಶಗಳೇ ವಾಸಿ! ನೇಪಾಳ 99ನೇ ಸ್ಥಾನದಾಗೆ, ಪಾಕಿಸ್ತಾನ 104ನೇ ಸ್ಥಾನದಾಗೆ ಅದಾವು' ಎಂದೆ ವರದಿ ಓದುತ್ತ.

'ನಮ್ ಮೋದಿಮಾಮಾನೆ ಇನ್ನಾ ಹತ್ ವರ್ಸ ಪ್ರಧಾನಿಯಾಗಿದ್ದರೆ, ಎಲ್ಲಾ ರಾಜ್ಯದಾಗೆ ಡಬ್ಬಲ್ ಎಂಜಿನ್ ಸರ್ಕಾರ ಬಂದರೆ ನಮ್ ಸಂತೋಷದ ಮಟ್ಟ ಇನ್ನೂ ಹೆಚ್ಚತೈತಿ!' ಬೆಕ್ಕಣ್ಣ ಮೀಸೆ ತಿರುವಿತು.

'ಡಬ್ಬಲ್ ಎಂಜಿನ್ ಸರ್ಕಾರಕ್ಕೂ ಜನರ ಸಂತೋಷಕ್ಕೂ ಸಂಬಂಧ ಇಲ್ಲಲೇ. ಜಿಡಿಪಿ, ಸಾಮಾಜಿಕ ಬೆಂಬಲ, ಆರೋಗ್ಯವಂತ ಬದುಕು, ನಿರ್ಧಾರದ ಸ್ವಾತಂತ್ರ್ಯ, ಔದಾರ್ಯ, ಭ್ರಷ್ಟಾಚಾರ, ಹಿಂಗೆ ಸಂತೋಷದ ಅಳತೆಗೋಲು ಬ್ಯಾರೆ ಇರತಾವು' ಎಂದೆ.

'ಕೈಪಕ್ಷದೋರು ಇದ್ದಾಗ ಎಲ್ಲಾ ಕಡಿಗಿ ಅತೃಪ್ತಿ, ಜಗಳ, ದೊಂಬಿ ಇರತಿದ್ದವು. ಆವಾಗ ಸಂತೋಷದ ಮಟ್ಟ ಕುಸಿದಿತ್ತು. ಈಗ ಎರಡು ದಶಕದಲ್ಲಿ ಸಂತೋಷ ಹೆಚ್ಚಾಗೈತಿ.' ಬೆಕ್ಕಣ್ಣ ವಾದಿಸಿತು.

'2012ರಲ್ಲಿ ಮೊದಲನೇ ಸಲ ಸಮೀಕ್ಷೆ ಮಾಡಿದ 155 ದೇಶಗಳಲ್ಲಿ 111ನೇ ಸ್ಥಾನದಲ್ಲಿ ಇದ್ವಿ. 2013ರಲ್ಲೂ ಅದೇ ಸ್ಥಾನದಲ್ಲಿ ಇದ್ವಿ. ಅಮೇಲೆ ಕುಸಿತ ಶುರುವಾತು. 2020ರಲ್ಲಿ ಸಮೀಕ್ಷೆ ಮಾಡಿದ 153 ದೇಶಗಳಲ್ಲಿ ನಾವು 144ನೇ ಸ್ಥಾನಕ್ಕೆ ಕುಸಿದಿದ್ದಿವಿ.' ನಾನು ಹಿಂದಿನ ವರದಿಗಳನ್ನು ತೋರಿಸಿದೆ.

'ಸಂತೋಷದ ಮಾನದಂಡಗಳನ್ನ ಬದಲಿಸಬಕು. ನಮ್ ಸಂಸ್ಕೃತಿಗೆ ಹೊಂದುವ ಮಾನದಂಡಗಳಿರಬಕು' ಎಂದು ಬೆಕ್ಕಣ್ಣ ತರ್ಕ ಮಂಡಿಸಿತು.

'ಹೌದಾ... ಏನವು?'

'ನಿರ್ಧಾರದ ಸ್ವಾತಂತ್ರ್ಯ, ಔದಾರ್ಯ ಇಂಥವನ್ನ ಕೈಬಿಡಬಕು. ದೇಶಭಕ್ತಿ, ಭವ್ಯ ನವಇತಿಹಾಸದಲ್ಲಿ ನಂಬಿಕೆ, ವಿಶ್ವಗುರುವಿನಲ್ಲಿ ಗೌರವ, ದನಿಯೆತ್ತಬೇಕಾದಲ್ಲಿ ಮೌನ, ಆಧ್ಯಾತ್ಮಿಕ ಆನಂದ, ಇವನ್ನು ಸಂತೋಷದ ಮಾನದಂಡ ಮಾಡಬಕು' ಎಂದು ಬೆಕ್ಕಣ್ಣ ಗುರುಗುಟ್ಟಿತು.

ಸಂಗತ

ಲೈಂಗಿಕತೆಯಷ್ಟೇ ಅಲ್ಲ, ಎಲ್ಲವೂ ಸರಕು!

ಭಾವನೆಗಳಿಗೂ ಪೇಟೆಯ ಬಣ್ಣಗಳು ಮೆತ್ತಿಕೊಂಡಿರುವ ಸನ್ನಿವೇಶದಲ್ಲಿ 'ಅಶ್ಲೀಲತೆ' ವ್ಯಾಖ್ಯಾನ ಸರಳವಾಗಿಲ್ಲ; ನೈತಿಕ ಪ್ರಶ್ನೆಗಳಿಗೆ ಉತ್ತರ ಸುಲಭವಾಗಿ ದಕ್ಕುವುದಿಲ್ಲ.

• ನಡಹಳ್ಳಿ ವಸಂತ್

ಇನ್ನೂ ಬಿಡುಗಡೆಯಾಗದ 'ಕೆ.ಡಿ.' ಎನ್ನುವ ಬಹುಭಾಷಾ ಚಿತ್ರದ ಹಾಡು ಅಶ್ಲೀಲದ ಗಡಿಯನ್ನು ದಾಟಿದೆ ಎನ್ನುವ ವಿವಾದ ಸೃಷ್ಟಿಯಾಗಿದೆ. ಹೀಗೆ ಅಶ್ಲೀಲತೆಯತ್ತ ಸಾಗುತ್ತಿರುವ ಇವತ್ತಿನ ಸಾಕಷ್ಟು ಕಲೆಗಳಲ್ಲಿ ದಿಢೀರನೆ ಇಂತಹ ಬದಲಾವಣೆಗಳೇನೂ ಆಗಿಲ್ಲ. ಇವೆಲ್ಲವೂ ನಿಧಾನವಾಗಿ ಹಂತ ಹಂತವಾಗಿ ರೂಪುಗೊಳ್ಳುತ್ತಾ ಬಂದಿವೆ. ಹಿಂದೆ ರಾಜರುಗಳು ಸುಂದರ ಯುವತಿಯರಿಗೆ ಸ್ವಲ್ಪ ಸ್ವಲ್ಪವೇ ವಿಷವುಣ್ಣಿಸುತ್ತಾ ವಿಷಕನ್ಯೆಯರನ್ನು ಸಿದ್ಧಗೊಳಿಸಿ ಶತ್ರುರಾಜರುಗಳನ್ನು ಕೊಲ್ಲಲು ಅವರನ್ನು ಬಳಸುತ್ತಿದ್ದರು ಎಂದು ಹೇಳಲಾಗುತ್ತದೆ. ಇದು ವೈಜ್ಞಾನಿಕವಾಗಿ ಎಷ್ಟು ಸತ್ಯ ಎನ್ನುವ ಪ್ರಶ್ನೆ ಬೇರೆ. ವಿಷಕನ್ಯೆ ಪರಿಕಲ್ಪನೆಯಲ್ಲಿ, ನಮ್ಮ ಸಮಾಜಕ್ಕೆ ಅಶ್ಲೀಲತೆಯ ವಿಷವನ್ನು ಸುಮಾರು 80ರ ದಶಕದಿಂದಲೇ ಹೀಗೆ ನಿಧಾನವಾಗಿ ಉಣಬಡಿಸಲಾಗುತ್ತಿದೆ.

ಈ ಎಂಬತ್ತರ ದಶಕ ಏಕೆ ಪ್ರಮುಖವಾಗುತ್ತದೆ ಎಂದರೆ, ಇದು ಸಮಾಜವಾದ ಇಳಿಮುಖವಾಗಿ ವಿಶ್ವದಾದ್ಯಂತ ಬಂಡವಾಳಶಾಹಿ ವ್ಯವಸ್ಥೆ ಗಾಢವಾಗಿ ಆವರಿಸಿಕೊಳ್ಳಲು ಪ್ರಾರಂಭವಾದ ಕಾಲ. ಬಂಡವಾಳಶಾಹಿಯ ಮೂಲಗುಣವೆಂದರೆ, ಅದು ಎಲ್ಲವನ್ನೂ ಮಾರಾಟ ಮಾಡಬಲ್ಲ ವಸ್ತುಗಳನ್ನಾಗಿ ಪರಿವರ್ತಿಸುತ್ತದೆ. ಮೇಲುನೋಟಕ್ಕೆ ಇದು ಅಂತಹ ವಿಶೇಷವಾಗಿ ಕಾಣಿಸುವುದಿಲ್ಲ. ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆ ಸೃಷ್ಟಿಯಾಗುವುದು, ಅದರಿಂದ ಹಣದ ಕೈಬದಲಾವಣೆಯಾಗುತ್ತಾ, ಜನಸಮುದಾಯಕ್ಕೆ ಜೀವನೋಪಾಯ ಕಲ್ಪಿಸುವುದು ಲಾಗಾಯ್ತಿನಿಂದಲೂ ನಡೆದುಬಂದ ಪ್ರಕ್ರಿಯೆ. ಆದರೆ, ಇದು ವಸ್ತು ಮತ್ತು ಸೇವೆಗಳಿಗೆ ಮಾತ್ರ ಅನ್ವಯವಾಗುವ ಕಾಲವೊಂದಿತ್ತು. ಈಗ ಶಿಕ್ಷಣ, ಸಾರ್ವಜನಿಕ ಆರೋಗ್ಯ, ಸಾಹಿತ್ಯ, ಕಲೆ, ಸಂಶೋಧನೆಗಳಂತಹ ದೂರಗಾಮಿ ಪರಿಣಾಮಗಳುಳ್ಳ ಮತ್ತು ಹಣ ಹೂಡುವಿಕೆ–ಗಳಿಸುವಿಕೆ ಗಿಂತ ಮಿಗಿಲಾದ ಉದ್ದೇಶಗಳುಳ್ಳ ಕ್ಷೇತ್ರಗಳನ್ನೂ ಈಗ ಬರೀ ಲಾಭದ ಮಾನದಂಡಗಳ ಮೇಲೆ ತೂಗಲಾಗುತ್ತದೆ.



ವ್ಯಕ್ತಿಯೊಬ್ಬನ ಪ್ರೇಮ, ಮಮತೆಯಂತಹ ಮೃದು ಭಾವನೆಗಳು ಮತ್ತು ತೀರಾ ಆಪ್ತವಾದ ಕಾಮವೂ ಇವತ್ತು ಮಾರುಕಟ್ಟೆಯ ವಸ್ತುಗಳಾಗಿವೆ. ಇಂತಿಂತಹ ಉಡುಗೊರೆಗಳನ್ನು ಕೊಟ್ಟರೆ ನಿಮ್ಮವರನ್ನು ಹೆಚ್ಚು ಪ್ರೇಮಿಸಬಹುದು; ಇಂತಿಂತಹ ಸೋಪು, ನ್ಯಾಪಿಗಳಿಂದ ತಾಯಂದಿರು ಮಕ್ಕಳನ್ನು ಹೆಚ್ಚು ಪ್ರೀತಿಸಬಹುದು; ಇಂತಿಂತಹ ಕಾಮವರ್ಧಕಗಳನ್ನು ಬಳಸಿ ನಿಮ್ಮ ಸಂಗಾತಿಯನ್ನು ತೃಪ್ತಿಪಡಿಸಬಹುದು–ಇವೆಲ್ಲವೂ ಇವತ್ತಿನ ಜಾಹೀರಾತಿನ ವಸ್ತುಗಳು ಮತ್ತು ಇದರಲ್ಲಿ ನಮಗೆ ವಿಶೇಷವೇನೂ ಕಾಣುವುದಿಲ್ಲ.

ಇಲ್ಲಿ ಗಮನಿಸಬೇಕಾದದ್ದು, ದೊಡ್ಡ ಕಾರ್ಪೊರೇಟ್ ಸಂಸ್ಥೆಗಳು ವಸ್ತುಗಳ ಆವಿಷ್ಕಾರಕ್ಕೆ ಭೌತ, ರಾಸಾಯನಿಕ ಮತ್ತು ಜೀವವಿಜ್ಞಾನದ ಸಂಶೋಧನೆಗಳನ್ನು ಬಳಸಿಕೊಂಡರೆ, ಅದನ್ನು ಮಾರಾಟ ಮಾಡಲು ಪ್ರಚಾರಕ್ಕಾಗಿ ಮನೋವಿಜ್ಞಾನ ಮತ್ತು ನರವಿಜ್ಞಾನದ ಸಂಶೋಧನೆಗಳನ್ನು ಉಪಯೋಗಿಸುತ್ತವೆ. ವಸ್ತುಗಳನ್ನು ತಯಾರಿಸುವುದಕ್ಕೆ ಮತ್ತು ಮಾರುವುದಕ್ಕೆ ಬಂಡವಾಳಶಾಹಿ ವ್ಯವಸ್ಥೆ ಯಾವುದೇ ನೈತಿಕ ಮಾನದಂಡಗಳನ್ನು ಬಳಸುವುದಿಲ್ಲ. ಹೆಚ್ಚು ಹಣ ಹೂಡು ಮತ್ತು ಹೆಚ್ಚು ಹೆಚ್ಚು ಗಳಿಸುತ್ತಾ ಹೋಗು, ಇವಿಷ್ಟೇ ಅವರ ಮೂಲಮಂತ್ರ. ಇದಕ್ಕೆ ಉದ್ಯೋಗ ಸೃಷ್ಟಿ, ಜಿಡಿಪಿ ಹೆಚ್ಚಳ, ಜೀವನ ಮಟ್ಟದ ಸುಧಾರಣೆ ಮುಂತಾದ ಮುಖವಾಡಗಳನ್ನು ಹಾಕಿ ತಜ್ಞರಿಗೆ ಯಾಮಾರಿಸಿ ಜನಸಾಮಾನ್ಯರ ಮಾನ್ಯತೆ ಗಳಿಸುತ್ತಾರೆ. ಇವತ್ತು ಸಿನಿಮಾಗಳು ಕೂಡ ಬಂಡವಾಳಶಾಹಿ ಮಾರುಕಟ್ಟೆಯ ವಸ್ತುಗಳು ಮಾತ್ರ. ಇದು ಕಲೆ ಎನ್ನುವ ಭ್ರಮೆಯಿಂದ ನಾವು ಹೊರಬರಬೇಕಿದೆ.

ಮಾನವರಲ್ಲಿ ಲೈಂಗಿಕತೆ ಎನ್ನುವುದು ಬರೀ ಸಂತಾನಾಭಿವೃದ್ಧಿಯ ಗುರಿ ಹೊಂದಿರುವುದಿಲ್ಲ. ಇತರ ಸ್ತನಿಗಳಂತಲ್ಲದೆ ಮಾನವ ಶಿಶುಗಳು ಸ್ವತಂತ್ರವಾಗಿ ಬದುಕುವುದನ್ನು ಕಲಿಯಲು ಹಲವಾರು ವರ್ಷಗಳು ಪೋಷಕರ ಮೇಲೆ ಅವಲಂಬಿತ ವಾಗಿರುತ್ತವೆ. ಅಲ್ಲಿಯವರೆಗೆ ಶಿಶುಗಳಿಗೆ ತಂದೆ–ತಾಯಿಗಳಿಬ್ಬರ ಭಾವನಾತ್ಮಕ, ಸಾಮಾಜಿಕ, ಆರ್ಥಿಕ ಹೀಗೆ ಎಲ್ಲಾ ರೀತಿಯ ಸಂಪೂರ್ಣ ಬೆಂಬಲ ಅಗತ್ಯವಾಗಿರುತ್ತದೆ. ಇದು ಸಾಧ್ಯವಾಗಬೇಕಾದರೆ ತಂದೆ–ತಾಯಿ ಮಧ್ಯೆ ಒಂದು ಭಾವನಾತ್ಮಕ ಬೆಸುಗೆಯ ಅಗತ್ಯವಿರುತ್ತದೆ. ಈ ಬೆಸುಗೆಗೆ ಲೈಂಗಿಕತೆ ಉತ್ತಮ ತಳಹದಿ ಹಾಕುತ್ತದೆ. ಬಾಂಧವ್ಯವನ್ನು ಬೆಸೆಯಲಾಗದ ಮಾನವರ ಲೈಂಗಿಕತೆ ದೈಹಿಕ ಅಗತ್ಯಗಳನ್ನು ಪೂರೈಸಿದರೂ ಮಾನಸಿಕ ಅತೃಪ್ತಿಯನ್ನು ಉಳಿಸುತ್ತದೆ.

ಬಂಡವಾಳಶಾಹಿಯನ್ನು ಸಂಪೂರ್ಣವಾಗಿ ಆವರಿಸಿಕೊಂಡಿರುವ ಸಾಕಷ್ಟು ಪಾಶ್ಚಿಮಾತ್ಯ ದೇಶಗಳಲ್ಲಿ ಇವತ್ತು ಅಶ್ಲೀಲಚಿತ್ರಗಳನ್ನು ತಯಾರಿಸುವುದಕ್ಕೆ ಒಂದು ಉದ್ಯಮದ ದರ್ಜೆ ನೀಡಿ 'ಪೋರ್ನ್ ಇಂಡಸ್ಟ್ರಿ' ಎಂದು ಕರೆಯಲಾಗುತ್ತದೆ. ಈ ಉದ್ಯಮದಿಂದ ಬರುವ ಆದಾಯವೂ ಜಿಡಿಪಿಯ ಒಂದು ಭಾಗವಾಗಿರುತ್ತದೆ. ಇಂತಹ ಚಿತ್ರಗಳಲ್ಲಿ ನಟಿಸುವವರನ್ನು 'ಪೋರ್ನ್ ಸ್ಟಾರ್' ಎಂದು ಗೌರವದಿಂದ ಕರೆಯಲಾಗುತ್ತದೆ. ಮುಂದೊಂದು ದಿನ ಅಶ್ಲೀಲ ಚಿತ್ರಗಳಿಗಾಗಿ ಆಸ್ಕರ್ ಪ್ರಶಸ್ತಿ ಸೃಷ್ಟಿಯಾದರೂ ಅಚ್ಚರಿಪಡಬೇಕಾಗಿಲ್ಲ!

ಶೃಂಗಾರ, ರೋಚಕತೆಗಳು ಲೈಂಗಿಕತೆಯ ಅವಿಭಾಜ್ಯ ಅಂಗಗಳು. ಇವುಗಳಿಗೆ ಮತ್ತು ಅಶ್ಲೀಲತೆಗೂ ಇರುವ ಗೆರೆ ಬಹಳ ತೆಳುವಾದದ್ದು. ಹಾಗಾಗಿಯೇ ಅಶ್ಲೀಲತೆಯ ಪ್ರಶ್ನೆ ಬಂದಾಗಲೆಲ್ಲಾ ಅದರ ಸಮರ್ಥಕರು ಅಜಂತಾ ಎಲ್ಲೋರಾದ ಮಿಥುನ ಶಿಲ್ಪಗಳು, ಜಯದೇವ ಕವಿಯ ಅಷ್ಟಪದಿಗಳು, ವಾತ್ಸಾಯನನ ಕಾಮಸೂತ್ರ, ಡಿ.ಎಚ್. ಲಾರೆನ್ಸ್‌ನ ಕಾದಂಬರಿಗಳು ಮುಂತಾದವುಗಳಲ್ಲಿ ಸಮರ್ಥನೆ ಹುಡುಕುತ್ತಾರೆ. ಈ ಎಲ್ಲವೂ ಬಂಡವಾಳಶಾಹಿಯ ವ್ಯಾಪಾರದ ವಸ್ತುಗಳಾಗಿರಲಿಲ್ಲ ಎಂಬುದನ್ನು ಮರೆಮಾಚುತ್ತಾರೆ.

ಬಂಡವಾಳಶಾಹಿಗಳಿಗೆ ಕಾಮವೇ ಮಾರಾಟದ ವಸ್ತುವಾಗಿರುವಾಗ ಮಕ್ಕಳಿಗೆ ನೈತಿಕಶಿಕ್ಷಣ ಹೇಗೆ ಕೊಡುವುದು ಎನ್ನುವ ಪ್ರಶ್ನೆಗೆ ಯಾರಾದರೂ ಉತ್ತರಿಸುತ್ತಾರೆಯೆ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನಿಷೇಧ ಆರು ವರ್ಷ ಹಲವು ಕಾಯ್ದೆ

ಮೊಬೈಲ್, ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆ ಮಕ್ಕಳ ಆರೋಗ್ಯ, ಶೈಕ್ಷಣಿಕ ಸಾಧನೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ಇದನ್ನು ತಡೆಯಲು 16 ವರ್ಷದ ಒಳಗಿನ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸುವುದಕ್ಕೆ ನಿರ್ಬಂಧ ವಿಧಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಇದೇ ಬಜೆಟ್ ಅಧಿವೇಶನದಲ್ಲಿ ಅಬ್ಬರದ ಡಿ.ಜೆ. ನಿಷೇಧಿಸುವ ಬಗ್ಗೆಯೂ ಚರ್ಚೆ ನಡೆದಿದೆ. ರಾಜ್ಯ ಸರ್ಕಾರವು ಇತ್ತೀಚೆಗೆ ಮರ್ಯಾದೆಗೇಡು ಹತ್ಯೆ ನಿಷೇಧ, ಸಾಮಾಜಿಕ ಬಹಿಷ್ಕಾರ ನಿಷೇಧ ಕಾನೂನನ್ನು ಜಾರಿಗೆ ತಂದಿದೆ. 2020ರಿಂದೀಚೆಗೆ ರಾಜ್ಯದಲ್ಲಿ ಹಲವು ನಿಷೇಧ ಕಾನೂನುಗಳು ಜಾರಿಗೆ ಬಂದಿವೆ. ಅವುಗಳ ಬಗ್ಗೆ ಪರ ವಿರೋಧ ಚರ್ಚೆಗಳು ನಡೆದು, ವಿವಾದವನ್ನೂ ಹುಟ್ಟುಹಾಕಿವೆ. ಈ ಬಗೆಗಿನ ವಿವರ ಇಲ್ಲಿದೆ

• ಚಂದ್ರಹಾಸ ಹಿರೇಮಳಲಿ

ಮೌಢ್ಯ

ರಾಜ್ಯದಲ್ಲಿರುವ ಅಮಾನವೀಯ ಆಚರಣೆಗಳು, ಮಾಟ-ಮಂತ್ರ ಮತ್ತು ವಾಮಾಚಾರ ಇನ್ನಿತರ ಮೌಢ್ಯದ ಆಚರಣೆಗಳನ್ನು ತಡೆಗಟ್ಟುವ ಉದ್ದೇಶದಿಂದ 'ಮೌಢ್ಯ ನಿಷೇಧ ಕಾಯ್ದೆ–2020 (ಮೌಢ್ಯ ನಿರ್ಬಂಧ ಮತ್ತು ನಿರ್ಮೂಲನಾ ಕಾಯ್ದೆ)' ಅನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ. ಇದರ ಪ್ರಕಾರ, ಮಡೆಸ್ನಾನ, ಬೆತ್ತಲೆ ಮೆರವಣಿಗೆ ಮತ್ತು ದೈಹಿಕ ಹಿಂಸೆ ನೀಡುವ ಮೂಢನಂಬಿಕೆಗಳನ್ನು ಪಾಲಿಸುವುದು ಶಿಕ್ಷಾರ್ಹ ಅಪರಾಧ. ಸಮಾಜದಲ್ಲಿ ಶೋಷಣೆಗೆ ಕಾರಣವಾಗುವ ಅನಿಷ್ಟ ಆಚರಣೆಗಳನ್ನು ಮಾತ್ರ ಕಾಯ್ದೆ ನಿಷೇಧಿಸುತ್ತದೆ.

ದೇವಸ್ಥಾನ, ಮಸೀದಿ, ಚರ್ಚ್ ಇತ್ಯಾದಿಗಳಲ್ಲಿ ನಡೆಯುವ ಸಾಂಪ್ರದಾಯಿಕ ಪೂಜೆಗಳು ಮತ್ತು ಧಾರ್ಮಿಕ ಆಚರಣೆಗಳಿಗೆ ಯಾವುದೇ ಅಡ್ಡಿ ಇಲ್ಲ. ಆದರೆ ದೈಹಿಕ ಹಿಂಸೆ ಇರಬಾರದು. ಸಮಾಜದಲ್ಲಿ ಅಜ್ಞಾನದಿಂದ ನಡೆಯುವ ಶೋಷಣೆಯನ್ನು ತಡೆಯುವುದು ಮತ್ತು ವೈಜ್ಞಾನಿಕ ಮನೋಭಾವವನ್ನು ಮೂಡಿಸುವುದು; ದುರ್ಬಲ ವರ್ಗದವರನ್ನು, ಮಹಿಳೆಯರನ್ನು ಮತ್ತು ಹಿಂದುಳಿದವರನ್ನು ಮೌಢ್ಯಾಚರಣೆಗಳ ಹೆಸರಿನಲ್ಲಿ ನಡೆಯುವ ಶೋಷಣೆಯಿಂದ ರಕ್ಷಿಸುವ ಗುರಿಯನ್ನು ಹೊಂದಿದೆ.

2017ರಲ್ಲಿ ಕಾಂಗ್ರೆಸ್ ಸರ್ಕಾರ ಈ ಮಸೂದೆಯನ್ನು ರೂಪಿಸಿತ್ತು. ಕಾಯ್ದೆ ಜಾರಿಗೆ ಅಧಿಸೂಚನೆಯನ್ನೂ ಹೊರಡಿಸಿತ್ತು. ನಂತರ ತಾಂತ್ರಿಕ ಕಾರಣಕ್ಕಾಗಿ ವಾಪಸ್ ಪಡೆಯಲಾಗಿತ್ತು. ನಂತರ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಸರ್ಕಾರ 2020ರ ಜನವರಿಯಲ್ಲಿ ಈ ಕಾಯ್ದೆ ಜಾರಿಗೊಳಿಸಿ ಅಧಿಸೂಚನೆ ಹೊರಡಿಸಿತು.

ಮತಾಂತರ

ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಜಾರಿಗೆ ತಂದಿರುವ ಪ್ರಮುಖ ಕಾನೂನುಗಳ ಪೈಕಿ ಪ್ರಮುಖವಾದುದು ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಕಾಯ್ದೆ.



2021ರ ಡಿಸೆಂಬರ್‌ನಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಮಸೂದೆಯನ್ನು ಮಂಡಿಸಲಾಗಿತ್ತು. ವಿಧಾನಸಭೆಯ ಅಂಗೀಕಾರವೂ ದೊರಕಿತ್ತು. ಆದರೆ, ವಿಧಾನ ಪರಿಷತ್‌ನಲ್ಲಿ ಸದಸ್ಯಬಲದ ಕೊರತೆಯಿಂದ ಮಸೂದೆ ಮಂಡಿಸಿರಲಿಲ್ಲ. ಸುಗ್ರೀವಾಜ್ಞೆ ಮೂಲಕ ಮಸೂದೆಯನ್ನು ಜಾರಿಗೊಳಿಸಲಾಗಿತ್ತು.

ತಿಂಗಳುಗಳ ಬಳಿಕ ಮೇಲ್ಮನೆಯಲ್ಲಿ ಮತ್ತೆ ಅಂಗೀಕಾರ ಪಡೆಯಲಾಗಿತ್ತು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು 2022ರ ಸೆಪ್ಟೆಂಬರ್‌ನಲ್ಲಿ ಅಂಕಿತ ಹಾಕಿದ್ದರು.

ಈ ಕಾಯ್ದೆಗೆ ಕ್ರೈಸ್ತರು ಸೇರಿದಂತೆ ಹಲವು ಸಮುದಾಯಗಳಿಂದ ವಿರೋಧ ವ್ಯಕ್ತವಾಗಿತ್ತು. ಇದು ಸಂವಿಧಾನ ನೀಡುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಕಸಿದುಕೊಳ್ಳುತ್ತದೆ ಎಂಬ ಆರೋಪವೂ ಕೇಳಿಬಂದಿತ್ತು.

'ಕರ್ನಾಟಕವೂ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಜಾರಿಗೆ ತಂದಿದ್ದ ಈ ಕಾಯ್ದೆಯು ದೇಶದ ವಿವಿಧ ಭಾಗಗಳಲ್ಲಿ ಕ್ರೈಸ್ತರ ಮೇಲೆ ದಾಳಿ ಮಾಡುವಂತೆ ಪ್ರೇರೇಪಿಸಿತ್ತು' ಎಂದು ಕರ್ನಾಟಕ ಪ್ರಾಂತ್ಯ ಕ್ಯಾಥೋಲಿಕ್ ಧರ್ಮಾಧ್ಯಕ್ಷರ ಮಂಡಳಿ, ಅಖಿಲ ಕರ್ನಾಟಕ ಕ್ರೈಸ್ತ ಮಾನವ ಹಕ್ಕುಗಳ ಒಕ್ಕೂಟ ವೇದಿಕೆ ಆರೋಪಿಸಿದ್ದವು.


2023ರ ಚುನಾವಣೆಗೂ ಮುನ್ನ, ತಾನು ಅಧಿಕಾರಕ್ಕೆ ಬಂದರೆ ಈ ಕಾಯ್ದೆಯನ್ನು ರದ್ದುಪಡಿಸುವುದಾಗಿ ಕಾಂಗ್ರೆಸ್ ಹೇಳಿತ್ತು. ಆದರೆ, ಈವರೆಗೂ ಸರ್ಕಾರ ಕಾಯ್ದೆ ರದ್ದುಗೊಳಿಸಿಲ್ಲ. ಕಾಯ್ದೆ ದುರುಪಯೋಗಪಡಿಸಿಕೊಂಡು ಕ್ರೈಸ್ತರ ಮೇಲೆ ಎಫ್‌ಐಆರ್ ದಾಖಲಿಸಲಾಗುತ್ತಿದೆ ಎಂದು ಕ್ರೈಸ್ತ ಸಂಘಟನೆಗಳು ಆರೋಪಿಸುತ್ತಿವೆ.

ಹಿಜಾಬ್

ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸುವುದನ್ನು ನಿಷೇಧಿಸಿ ಹಿಂದಿನ ಬಿಜೆಪಿ ಸರ್ಕಾರವು 2022ರ ಫೆಬ್ರುವರಿಯಲ್ಲಿ ಹೊರಡಿಸಿದ್ದ ಆದೇಶ ವಿವಾದ ಸೃಷ್ಟಿಸಿತಲ್ಲದೇ, ದೇಶದಾದ್ಯಂತ ಚರ್ಚೆ ಹುಟ್ಟುಹಾಕಿತು. ಇದಕ್ಕೂ ಮೊದಲು ಉಡುಪಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆಡಳಿತವು ಮುಸ್ಲಿಂ ವಿದ್ಯಾರ್ಥಿನಿಯರಿಗೆ ತರಗತಿಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡದೇ ಇದ್ದುದು ವಿವಾದಕ್ಕೆ ಮೂಲ. ಹಿಜಾಬ್ ಸಮವಸ್ತ್ರದ ಭಾಗವಲ್ಲ ಎಂಬ ಪ್ರತಿಪಾದನೆಯೊಂದಿಗೆ ನಿರ್ಬಂಧ ವಿಧಿಸಲಾಗಿತ್ತು.

ಹಿಜಾಬ್ ನಿಷೇಧ ವಿಚಾರ ಹೈಕೋರ್ಟ್ ಮೆಟ್ಟಿಲೇರಿತು. ರಾಜ್ಯದ ಶಾಲಾ, ಕಾಲೇಜು ತರಗತಿಗಳಲ್ಲಿ ಹಿಜಾಬ್ ಧರಿಸಲು ಅನುಮತಿ ಕೋರಿ ಸಲ್ಲಿಸಲಾಗಿದ್ದ ರಿಟ್ ಅರ್ಜಿಗಳನ್ನು ಹೈಕೋರ್ಟ್ ತ್ರಿಸದಸ್ಯ ನ್ಯಾಯಪೀಠ ರದ್ದುಗೊಳಿಸಿ ತೀರ್ಪು ನೀಡಿತು. ಹಿಜಾಬ್ ನಿಷೇಧ ಪ್ರಕರಣ ಸದ್ಯ ಸುಪ್ರೀಂ ಕೋರ್ಟ್‌ನಲ್ಲಿದೆ.

ಸರ್ಕಾರದ ಆದೇಶವನ್ನು ಆಗ ಕಾಂಗ್ರೆಸ್ ಖಂಡಿಸಿತ್ತು. ಅಧಿಕಾರಕ್ಕೆ ಬಂದರೆ ಆದೇಶ ವಾಪಸ್ ಪಡೆಯುವ ಇರಾದೆಯನ್ನೂ ವ್ಯಕ್ತಪಡಿಸಿತ್ತು. ವಾಪಸ್ ಬಗ್ಗೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳುತ್ತೇವೆ ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಆದರೆ, ಸರ್ಕಾರ ಈವರೆಗೆ ಹಿಜಾಬ್ ನಿಷೇಧ ಆದೇಶವನ್ನು ವಾಪಸ್ ಪಡೆದಿಲ್ಲ.



ಕಲೆ: ಸಂತೋಷ್ ಸಸಿಹಿತ್ಲು

ಜಾಲತಾಣಗಳ ನಿರ್ಬಂಧ


ಕೋವಿಡ್ ಕಾಲಘಟ್ಟದ ನಂತರ ಮಕ್ಕಳಲ್ಲಿ ಹೆಚ್ಚಿರುವ ಮೊಬೈಲ್ ಗೀಳು ನಿಯಂತ್ರಿಸುವ ಉದ್ದೇಶದೊಂದಿಗೆ 16 ವರ್ಷದ ಒಳಗಿನವರು ಸಾಮಾಜಿಕ ಜಾಲತಾಣ ಬಳಸುವುದನ್ನು ನಿರ್ಬಂಧಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯೂ ಮಕ್ಕಳ ಶಿಕ್ಷಣ, ಆರೋಗ್ಯ, ದೈಹಿಕ ಬೆಳವಣಿಗೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಜಾಲತಾಣ ಬಳಕೆ ನಿಷೇಧಿಸಿದರೆ ಮಕ್ಕಳ ಮೇಲಾಗುತ್ತಿರುವ ಪರಿಣಾಮಗಳನ್ನು ತಡೆಯಬಹುದು ಎಂಬ ಅಭಿಪ್ರಾಯ ಇದೆ.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸೇರಿದಂತೆ ವಿವಿಧ ಸಂಘಸಂಸ್ಥೆಗಳು, ಸಂಘಟನೆಗಳು, ಕೆಲ ಪೋಷಕರು ಈ ಕುರಿತು ಸರ್ಕಾರಕ್ಕೆ ಪತ್ರ ಬರೆದಿದ್ದರು. ಈಚೆಗೆ ನಡೆದ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮಾವೇಶದಲ್ಲೂ ಈ ಕುರಿತು ಚರ್ಚಿಸಲಾಗಿತ್ತು. 16 ವರ್ಷದ ಒಳಗಿನ ಮಕ್ಕಳ ಮೊಬೈಲ್ ಬಳಕೆಗೆ ನಿರ್ಬಂಧ ವಿಧಿಸುವಂತೆ ಕುಲಪತಿಗಳು ಸಲಹೆ ನೀಡಿದ್ದರು. ಪೋಷಕರು, ವಿವಿಧ ಸಂಘಟನೆಗಳ ಕಳಕಳಿಗೆ ಸ್ಪಂದಿಸಿರುವ ಸರ್ಕಾರ, ಈ ಕುರಿತು ಬಜೆಟ್‌ನಲ್ಲಿ ಘೋಷಣೆ ಮಾಡಿದೆ. ಈ ಬಗ್ಗೆ ಇನ್ನಷ್ಟೇ ಆದೇಶ ಹೊರಡಿಸಬೇಕಿದೆ.

ಜಾನುವಾರು ಹತ್ಯೆ

ರಾಜ್ಯದಲ್ಲಿ ಜಾನುವಾರುಗಳ ಹತ್ಯೆಯನ್ನು ತಡೆಯುವ ಉದ್ದೇಶದಿಂದ 2020ರಲ್ಲಿ ಹಿಂದಿನ ಬಿಜೆಪಿ ಸರ್ಕಾರ, ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಹಾಗೂ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತಂದಿತು.



ಗೋಹತ್ಯೆ ನಿಷೇಧ ಕಾಯ್ದೆ ಎಂದೂ ಇದು ಪ್ರಚಲಿತದಲ್ಲಿದೆ. ಜಾನುವಾರಗಳ ಕಳ್ಳಸಾಗಣೆ, ಅವುಗಳ ಹತ್ಯೆಯನ್ನು ತಪ್ಪಿಸುವುದರ ಜೊತೆಗೆ, ಅವುಗಳ ಸಂರಕ್ಷಣೆಗೂ ಒತ್ತು ಕೊಡುವ ಅಂಶಗಳು ಕಾಯ್ದೆಯಲ್ಲಿವೆ. ಜಾನುವಾರುಗಳ ಸಾಗಣೆಗೆ ಕಠಿಣ ನಿಯಮಗಳನ್ನೂ ಈ ಕಾಯ್ದೆಯಡಿ ರೂಪಿಸಲಾಗಿದೆ.ರೈತರು ಅವರ ಜಾನುವಾರುಗಳನ್ನು ಸಾಗಿಸುವುದಕ್ಕೂ ಇದರ ನಿಯಮಗಳು ಅನ್ವಯವಾಗುತ್ತವೆ.ರೈತರ ಹಿತದೃಷ್ಟಿಯಿಂದ ಹಾಗೂ ಗೋವುಗಳ ಆರೋಗ್ಯ ಮತ್ತು ಮಾಂಸಕ್ಕಾಗಿ ಅವುಗಳ ಹತ್ಯೆಯನ್ನು ತಡೆಯುವ ಉದ್ದೇಶದಿಂದ ಕಾಯ್ದೆ ರೂಪಿಸಲಾಗಿದೆ ಎಂದು ಹಿಂದಿನ ಸರ್ಕಾರ ಹೇಳಿಕೊಂಡಿತ್ತು.

ರಾಜ್ಯದಲ್ಲಿ ಪರ ವಿರೋಧ ಚರ್ಚೆಯನ್ನು ಹುಟ್ಟುಹಾಕಿದ್ದ ಈ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮತ್ತು ಜಾನುವಾರುಗಳ ಮೇಲೆ ನಡೆಯುವ ಕ್ರೌರ್ಯ ಮತ್ತು ಹಿಂಸೆ ತಡೆಗಟ್ಟಲು ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ ಸ್ಥಾಪಿಸಲಾಗಿತ್ತು.

ವಿರೋಧ ಪಕ್ಷದಲ್ಲಿದ್ದಾಗ ಕಾಯ್ದೆಯನ್ನು ತೀವ್ರವಾಗಿ ವಿರೋಧಿಸಿದ್ದ ಕಾಂಗ್ರೆಸ್, ಅಧಿಕಾರಕ್ಕೆ ಬಂದ ನಂತರ ಈ ಕಾಯ್ದೆಗೆ ತಿದ್ದುಪಡಿ ತರಲು ತೀರ್ಮಾನಿಸಿತ್ತು. 2025ರ ಡಿಸೆಂಬರ್‌ನಲ್ಲಿ ಸಚಿವ ಸಂಪುಟ ಸಭೆ ಕೂಡ ತಿದ್ದುಪಡಿ ಮಸೂದೆ ಮಂಡನೆಗೆ ಒಪ್ಪಿಗೆ ಸೂಚಿಸಿತ್ತು. ಬಿಜೆಪಿ, ವಿಎಚ್‌ಪಿ, ಬಜರಂಗದಳ ಸೇರಿದಂತೆ ಹಿಂದೂಪರ ಸಂಘಟನೆಗಳು ತಿದ್ದುಪಡಿ ಮಾಡುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದವು. ಚಳಿಗಾಲದ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆಯನ್ನು ಮಂಡಿಸುವ ಬಗ್ಗೆಯೂ ಚರ್ಚೆಯಾಗಿತ್ತು. ಆದರೆ, ಸರ್ಕಾರ ಮಸೂದೆ ಮಂಡಿಸಿಲ್ಲ. ಕಾಯ್ದೆಯನ್ನು ರದ್ದುಪಡಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಇತ್ತೀಚೆಗೆ ಹೇಳಿದ್ದಾರೆ.

ಡಿ.ಜೆ ನಿಷೇಧ ಚರ್ಚೆ

ಧಾರ್ಮಿಕ ಆಚರಣೆಗಳು ಸೇರಿದಂತೆ ವಿವಿಧ ರೀತಿಯ ಉತ್ಸವಗಳು, ಮೆರವಣಿಗೆಗಳಲ್ಲಿ ಡಿ.ಜೆ (ಡಿಸ್ಕ್ ಜಾಕಿ) ಬಳಕೆಯನ್ನು ನಿಷೇಧಿಸುವ ಕುರಿತಂತೆ ಚರ್ಚೆ ನಡೆಯುತ್ತಿದೆ. ಕಳೆದವಾರ ವಿಧಾನಸಭೆಯಲ್ಲೂ ಈ ಬಗ್ಗೆ ಚರ್ಚೆ ನಡೆದಿದೆ. ಆಡಳಿತ ಮತ್ತು ವಿರೋಧ ಪಕ್ಷಗಳ ಹಲವು ಸದಸ್ಯರು ಅಬ್ಬರದ ಡಿ.ಜೆ ನಿಷೇಧಿಸುವುದರ ಪರವಾಗಿ ಒಲವು ತೋರಿದ್ದಾರೆ.

'ಉತ್ಸವ, ಸಮಾರಂಭಗಳಲ್ಲಿ ಡಿ.ಜೆ ಅಬ್ಬರಕ್ಕೆ ಹೃದಯ ರೋಗ ಸಮಸ್ಯೆ ಇರುವವರು, ಶ್ರವಣ ದೋಷ ಇರುವವರಿಗೆ, ವೃದ್ಧರಿಗೆ ಸಮಸ್ಯೆಯಾಗುತ್ತಿದೆ. ಶಬ್ದ ಮಾಲಿನ್ಯ ಮಿತಿ ಮೀರುತ್ತದೆ. ಬಹುತೇಕ ದೇವರ ಉತ್ಸವಗಳಲ್ಲೂ ಡಿ.ಜೆ, ಕರ್ಕಶ ಹಾಡುಗಳು ಇಲ್ಲದೆ ದೇವರ ಮೂರ್ತಿ ಮುಂದೆ ಸಾಗುವುದಿಲ್ಲ. ಇದು ನಮ್ಮ ಸಂಸ್ಕೃತಿಯಲ್ಲ. ಉತ್ಸವಗಳಲ್ಲಿ ಡಿ.ಜೆಗಳಿಗೆ ಮಣೆ ಹಾಕುವ ಬದಲು ಸ್ಥಳೀಯ ಕಲಾವಿದರನ್ನು ಬಳಸಿಕೊಳ್ಳಬೇಕು' ಎಂದು ಹಲವರು ಸದನದಲ್ಲೇ ಸಲಹೆ ನೀಡಿದ್ದಾರೆ.

ಸಾಮಾಜಿಕ ಬಹಿಷ್ಕಾರ



ರಾಜ್ಯದ ವಿವಿಧ ಕಡೆಗಳಲ್ಲಿ ಚಾಲ್ತಿಯಲ್ಲಿರುವ ಸಾಮಾಜಿಕ ಬಹಿಷ್ಕಾರ ಎಂಬ ಅನಿಷ್ಟ ಪದ್ಧತಿಯನ್ನು ಸಂಪೂರ್ಣ ನಿಷೇಧಿಸುವುದಕ್ಕಾಗಿ 'ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧಕ, ನಿಷೇಧ ಮತ್ತು ಪರಿಹಾರ) ಕಾಯ್ದೆ-2025 ಅನ್ನು ರಾಜ್ಯ ಸರ್ಕಾರ ಈ ವರ್ಷದ ಜನವರಿಯಲ್ಲಿ ಜಾರಿಗೆ ತಂದಿದೆ. ಈ ಕಾಯ್ದೆಯು ಸಾಮಾಜಿಕ ಬಹಿಷ್ಕಾರವನ್ನು ಅಪರಾಧ ಎಂದು ಪರಿಗಣಿಸುತ್ತದೆ. ಯಾವುದೇ ವ್ಯಕ್ತಿ, ಕುಟುಂಬ ಅಥವಾ ಕುಟುಂಬದ ಸದಸ್ಯರನ್ನು ಸಾಮಾಜಿಕವಾಗಿ ಬಹಿಷ್ಕರಿಸಿದರೆ ಮೂರು ವರ್ಷದವರೆಗೆ ಜೈಲು ಶಿಕ್ಷೆ ಮತ್ತು ₹1 ಲಕ್ಷ ದಂಡ ವಿಧಿಸುವುದಕ್ಕೆ ಈ ಕಾನೂನು ಅವಕಾಶ ನೀಡುತ್ತದೆ.

ಬಹಿಷ್ಕರಿಸುವ ತೀರ್ಮಾನ ತೆಗೆದುಕೊಳ್ಳುವುದು, ಈ ಉದ್ದೇಶದಿಂದ ಸಭೆ, ಪಂಚಾಯಿತಿ, ಜಮಾವಣೆ, ಅಭಿಪ್ರಾಯ ಸಂಗ್ರಹಿಸುವುದು, ಬಹಿಷ್ಕಾರಕ್ಕೆ ಪ್ರತ್ಯಕ್ಷ, ಪರೋಕ್ಷ ಸಹಾಯ, ಒತ್ತಡ, ಪ್ರಚೋದನೆ ನೀಡುವವರನ್ನೂ ಅಪರಾಧಿಗಳೆಂದು ಪರಿಗಣಿಸಿ ಜೈಲು ಅಥವಾ ದಂಡ ಅಥವಾ ಎರಡನ್ನೂ ವಿಧಿಸಲೂ ಈ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಈ ಕಾಯ್ದೆಯ ಅನ್ವಯ ಬಹಿಷ್ಕಾರಕ್ಕೆ ಒಳಗಾದವರು ಪೊಲೀಸರಿಗೆ ಅಥವಾ ನ್ಯಾಯಾಧೀಶರಿಗೆ ದೂರು ನೀಡಬಹುದು. ಪ್ರಥಮ ದರ್ಜೆ ನ್ಯಾಯಾಧೀಶರಿಗೆ ವಿಚಾರಣೆಯ ಅಧಿಕಾರ ನೀಡಲಾಗಿದೆ. ನೇರವಾಗಿ ಸಲ್ಲಿಕೆಯಾದ ದೂರಿನ ತನಿಖೆ ನಡೆಸುವಂತೆ ನ್ಯಾಯಾಧೀಶರು ಆದೇಶ ನೀಡಬಹುದು. ಸಂತ್ರಸ್ತರಿಗೆ ಸಹಾಯ ಒದಗಿಸಲು ಮತ್ತು ದಂಡದ ಮೊತ್ತವನ್ನು ಪರಿಹಾರವಾಗಿ ನೀಡಲು ನಿರ್ದೇಶನ ನೀಡಬಹುದು. ಸಾಮಾಜಿಕ ಬಹಿಷ್ಕಾರದಂತಹ ನಿರ್ಧಾರ ತೆಗೆದುಕೊಳ್ಳಲು ನಡೆಸುವ ಸಭೆಗಳ ಕುರಿತು ಮಾಹಿತಿ ಬಂದರೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ನಿಷೇಧಿಸಿ ಆದೇಶಿಸಬಹುದು.

ಮರ್ಯಾದೆಗೇಡು ಹತ್ಯೆ

ಬೇರೆ ಜಾತಿಯವರನ್ನು ಪ್ರೀತಿಸಿ, ಮದುವೆಯಾದವರನ್ನು ಮರ್ಯಾದೆ ಹೆಸರಿನಲ್ಲಿ ಹಲ್ಲೆ, ಹತ್ಯೆ ಮಾಡುವ ಹಾಗೂ ಬಹಿಷ್ಕರಿಸುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ಉದ್ದೇಶದ 'ಇವ ನಮ್ಮವ, ಇವ ನಮ್ಮವ' ಮಸೂದೆಯನ್ನು ರಾಜ್ಯ ಸರ್ಕಾರ ವಿಧಾನಸಭೆಯಲ್ಲಿ ಮಂಡಿಸಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 'ಮರ್ಯಾದೆಗೇಡು ಹತ್ಯೆ' ಹೆಸರಿನಲ್ಲಿ ನಡೆದ ಕೊಲೆ, ದೌರ್ಜನ್ಯಗಳ ತಡೆಗೆ ಕಠಿಣ ಕಾನೂನು ತರಬೇಕೆಂದು ನಾಗರಿಕರು, ವಿವಿಧ ಸಂಸ್ಥೆಗಳು ಸರ್ಕಾರದ ಮೇಲೆ ಒತ್ತಡ ಹೇರಿದ್ದವು.

ಕಾಯ್ದೆ ರೂಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದ ಭರವಸೆಯಂತೆ 'ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಮಸೂದೆ–2026' ಸಿದ್ಧಪಡಿಸಲಾಗಿದ್ದು, ಈಚೆಗೆ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.

ಅಂತರ್ಜಾತಿ ವಿವಾಹಗಳನ್ನು ಮಾನ್ಯಮಾಡುವುದು, ಅಂತಹ ಮದುವೆಯಾದವರಿಗೆ ತಾರತಮ್ಯ ಮಾಡುವುದರ ವಿರುದ್ಧ ರಕ್ಷಣೆ ಒದಗಿಸುವುದು, ಮರ್ಯಾದೆ ಅಥವಾ ಸಂಪ್ರದಾಯದ ಹೆಸರಿನಲ್ಲಿ ದೌರ್ಜನ್ಯ ಎಸಗುವ, ಹತ್ಯೆ ಮಾಡುವ ಕೃತ್ಯಗಳನ್ನು ತಡೆಯುವುದು, ಮೇಲ್ವಿಚಾರಣಾ ಸಮಿತಿಗಳನ್ನು ರಚಿಸುವುದು, ಪ್ರತಿ ಜಿಲ್ಲೆಯಲ್ಲೂ 'ಇವ ನಮ್ಮವ' ವೇದಿಕೆಗಳನ್ನು ರಚಿಸುವುದು, ವಿಶೇಷ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸುವುದು, ಅಪರಾಧಿಗಳಿಗೆ ಐದು ವರ್ಷಗಳಿಗೆ ಕಡಿಮೆ ಇಲ್ಲದಂತಹ ಕಠಿಣ ಶಿಕ್ಷೆ ವಿಧಿಸಲು ಮಸೂದೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ.

ದ್ವೇಷ ಭಾಷಣ ನಿಷೇಧ



ರಾಜ್ಯದಲ್ಲಿ ದ್ವೇಷ ಭಾಷಣ ಹಾಗೂ ದ್ವೇಷಾಪರಾಧಗಳನ್ನು ತಡೆಯಲು 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆ -2025' ಅನ್ನು ಕಾಂಗ್ರೆಸ್ ನೇತೃತ್ವದ ಸರ್ಕಾರ ರೂಪಿಸಿತ್ತು. ಎರಡೂ ಸದನಗಳಲ್ಲಿ ಅಂಗೀಕಾರವಾಗಿತ್ತು. ಅಂಕಿತಕ್ಕಾಗಿ ರಾಜ್ಯಪಾಲರಿಗೆ ಕಳುಹಿಸಲಾಗಿತ್ತು.

ಆದರೆ, ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್ ನೀಡಿದ್ದ ಕೆಲವು ತೀರ್ಪುಗಳನ್ನು ಉಲ್ಲೇಖಿಸಿ ಮತ್ತು ಸಾಂವಿಧಾನಿಕವಾಗಿ ಸಂರಕ್ಷಿತವಾದ ಪ್ರಜಾಪ್ರಭುತ್ವದ ಮೇಲೆ ತೀವ್ರ ನಕಾರಾತ್ಮಕ ಪರಿಣಾಮ ಉಂಟುಮಾಡುವ ಸಾಧ್ಯತೆಯ ಆತಂಕ ವ್ಯಕ್ತಪಡಿಸಿ ಈ ಮಸೂದೆಯನ್ನು ರಾಜ್ಯಪಾಲರು ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದರು.

'ದ್ವೇಷ ಅಪರಾಧಗಳನ್ನು ಸಹಿಸುವುದಿಲ್ಲ' ಎಂದು 2018ರ ಜುಲೈ 17ರಂದು ಹಾಗೂ 'ಕೋಮು ದ್ವೇಷ ಹರಡುವ ಅಥವಾ ದ್ವೇಷ ಭಾಷಣದಲ್ಲಿ ತೊಡಗಿಸಿಕೊಳ್ಳುವ ಯಾವುದೇ ಪ್ರಯತ್ನವನ್ನು ಸಹಿಸುವುದಿಲ್ಲ' ಎಂದು 2025ರ ಮೇ 5ರಂದು ಸುಪ್ರೀಂ ಕೋರ್ಟ್ ಪ್ರತ್ಯೇಕ ತೀರ್ಪುಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಿತ್ತು. ಈ ತೀರ್ಪುಗಳನ್ನು ಪರಿಗಣಿಸಿ ಮಸೂದೆಯನ್ನು ರೂಪಿಸಲಾಗಿದೆ. ಹೀಗಾಗಿ, ಅಂಕಿತ ಹಾಕುವಂತೆ ರಾಷ್ಟ್ರಪತಿಗೆ ಮನವಿ ಮಾಡಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ ಹೇಳಿದೆ.

ಈ ಮಸೂದೆಯನ್ನು ಬಿಜೆಪಿ ನಾಯಕರು, ಆರ್‌ಎಸ್‌ಎಸ್, ಹಿಂದುತ್ವವಾದಿ ಸಂಘಟನೆಗಳ ಮುಖಂಡರು ತೀವ್ರವಾಗಿ ಖಂಡಿಸಿದ್ದರು. ವಿರೋಧದ ನಡುವೆಯೂ ಎರಡೂ ಸದನಗಳಲ್ಲಿ ಮಸೂದೆ ಅಂಗೀಕಾರವಾಗುವಂತೆ ಸರ್ಕಾರ ನೋಡಿಕೊಂಡಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತದ ಕ್ರಿಕೆಟಿಗ ಸಂಜು ಸ್ಯಾಮ್ಸನ್ ಅವರು ಪೊಲೀಸ್ ಸಮವಸ್ತ್ರ ಧರಿಸಿರುವ ಫೋಟೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. 'ಸೌರವ್ ಗಂಗೂಲಿ–ದಿ ರಾಯಲ್ ಬೆಂಗಾಲ್ ಟೈಗರ್ ಆಫ್ ಇಂಡಿಯಾ' ಎಂಬ ಫೇಸ್‌ಬುಕ್ ಪುಟದಲ್ಲಿ ಈ ಫೋಟೊ ಪೋಸ್ಟ್ ಮಾಡಲಾಗಿದ್ದು, 'ಕೇರಳ ಪೊಲೀಸ್ ಇಲಾಖೆ ಸಂಜು ಅವರನ್ನು ಡಿಎಸ್‌ಪಿಯಾಗಿ ನೇಮಕ ಮಾಡಿಕೊಳ್ಳುವ ಮೂಲಕ ಕ್ರಿಕೆಟಿಗನನ್ನು ಗೌರವಿಸಿದೆ. ಈ ಮೂಲಕ ಸಂಜು ಸ್ಯಾಮ್ಸನ್ ಅವರು ಕೂಡ ಪೊಲೀಸ್ ಇಲಾಖೆ ಅಥವಾ ಸಶಸ್ತ್ರ ಪಡೆಗಳಲ್ಲಿ ಗೌರವ ಹುದ್ದೆಗಳನ್ನು ಪಡೆದ ಕ್ರಿಕೆಟಿಗರ ಸಾಲಿಗೆ ಸೇರಿದ್ದಾರೆ' ಎಂದು ಪೋಸ್ಟ್‌ನಲ್ಲಿ ಪ್ರತಿಪಾದಿಸಲಾಗಿದೆ. ಆದರೆ, ಇದು ಸುಳ್ಳು.

ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ ಸಂಜು ಸ್ಯಾಮ್ಸನ್ ಅವರನ್ನು ಕೇರಳ ಪೊಲೀಸ್ ಇಲಾಖೆ ಡಿಎಸ್‌ಪಿಯಾಗಿ ನೇಮಕ ಮಾಡಿದೆ ಎಂಬುದರ ಬಗ್ಗೆ ವಿಶ್ವಾಸಾರ್ಹ ಮಾಧ್ಯಮ ವರದಿಗಳು ಸಿಗಲಿಲ್ಲ. ಒಂದು ವೇಳೆ ಇದು ನಿಜವೇ ಆಗಿದ್ದರೆ, ಖಂಡಿತವಾಗಿಯೂ ಈ ವಿಚಾರ ಸುದ್ದಿಯಾಗುತ್ತಿತ್ತು. ಸಂಜು ಅವರ ಅಧಿಕೃತ 'ಎಕ್ಸ್' ಖಾತೆ ಪರಿಶೀಲಿಸಿದಾಗ, ಅಲ್ಲಿ ಇದಕ್ಕೆ ಪೂರಕವಾದಂತಹ ಯಾವುದೇ ಪೋಸ್ಟ್, ಚಿತ್ರಗಳು ಇರಲಿಲ್ಲ. ಚಿತ್ರವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಅದರ ನೈಜತೆಯ ಬಗ್ಗೆ ಅನುಮಾನ ಬಂತು. ಚಿತ್ರವನ್ನು ಎಐ ಪತ್ತೆ ಟೂಲ್ ಹೈವ್ ಮಾಡರೇಷನ್ ಮೂಲಕ ಪರಿಶೀಲಿಸಿದಾಗ ಅದು ಎಐ ಚಿತ್ರ ಎಂಬುದು ಗೊತ್ತಾಯಿತು. ಡಿಕಾಪಿ ಎಎ ಎಂಬ ಮತ್ತೊಂದು ಎಐ ಪತ್ತೆ ಟೂಲ್ ಬಳಸಿ ಪರಿಶೀಲಿಸಿದಾಗಲೂ, ಅದು ಎಐ ಎಂದು ತೋರಿಸಿತು. ಡೀಪ್ ಫೇಕ್ ಚಿತ್ರವನ್ನು ಹಂಚಿಕೊಂಡು ಸಂಜು ಸ್ಯಾಮ್ಸನ್ ಅವರಿಗೆ ಡಿಎಸ್‌ಪಿ ಹುದ್ದೆ ನೀಡಲಾಗಿದೆ ಎಂದು ಸುಳ್ಳು ಹರಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಬೇಕಿದೆ ಸಾರ್ವಜನಿಕ ಲಜ್ಜೆ

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ಪ್ರತಿದಿನ ಬೆಳಿಗ್ಗೆ ಪರಿಚಯವಿರಲಿ, ಇಲ್ಲದಿರಲಿ ಎದುರಾದವರಿಗೆಲ್ಲ ನಮಸ್ಕಾರ ಎಂದು ಹೇಳಿ ಮುನ್ನಡೆಯುವುದು ಸಾಕ್ರಟೀಸನ ಅಭ್ಯಾಸಗಳಲ್ಲಿ ಒಂದಾಗಿತ್ತು. ಎಲ್ಲರೂ ಗೌರವದಿಂದ ಪ್ರತಿಯಾಗಿ ನಮಸ್ಕರಿಸುತ್ತಿದ್ದರು. ಒಂದು ದಿನ ಸಾಕ್ರಟೀಸ್ ನಮಸ್ಕಾರ ಹೇಳಿದೊಡನೆ ಮನುಷ್ಯನೊಬ್ಬ ತೀವ್ರ ಅಸಹನೆಯಿಂದ 'ನೀನು ಯಾರು? ನನಗ್ಯಾಕೆ ನಮಸ್ಕಾರ ಮಾಡ್ತೀಯ' ಎಂದು ಪ್ರಶ್ನಿಸುತ್ತಾನೆ. ಪ್ರಶ್ನಿಸುವುದನ್ನು ಪ್ರೋತ್ಸಾಹಿಸುತ್ತಿದ್ದ ಸಾಕ್ರಟೀಸನಿಗೆ ತನ್ನ ಸೌಜನ್ಯಯುತ ನಮಸ್ಕಾರವನ್ನು ಪ್ರಶ್ನಿಸಬಹುದು ಎಂಬ ನಿರೀಕ್ಷೆ ಇರಲಿಲ್ಲ; ಏನನ್ನೂ ಉತ್ತರಿಸದೆ ಮುಗುಳ್ನಕ್ಕು ಮುನ್ನಡೆದ. ಇದು ಮುಂದುವರಿಯಿತು. ಸಾಕ್ರಟೀಸ್ ನಮಸ್ತೆ ಎನ್ನುವುದು, ಆ ಮನುಷ್ಯ ದಿನದಿನಕ್ಕೂ ಹೆಚ್ಚಿದ ಅಸಹನೆಯಿಂದ ನಿಂದಿಸುವುದು ನಡೆದೇ ಇತ್ತು. ಸಾಕ್ರಟೀಸನಷ್ಟೇ ಜನಪ್ರಿಯತೆ ಅವನಿಗೆ ಬರತೊಡಗಿತು. ಇದನ್ನೆಲ್ಲಾ ಗಮನಿಸುತ್ತಲೇ ಇದ್ದ ಒಬ್ಬ ಹಿರಿಯರು ಒಂದು ದಿನ ಸಾಕ್ರಟೀಸನನ್ನು ತಡೆದು ಕೇಳಿದರು: 'ಅಲ್ಲಪ್ಪಾ, ನೀನು ಪ್ರತಿದಿನ ಎಲ್ಲರಂತೆ ಆ ಮನುಷ್ಯನಿಗೂ ನಮಸ್ಕಾರ ಮಾಡುವುದು, ದಿನವೂ ಅವನು ನಿನ್ನನ್ನು ಬಾಯಿಗೆ ಬಂದಂತೆ ಅನ್ನುವುದು ನಡೆದೇ ಇದೆ. ಆದರೂ ನೀನ್ಯಾಕೆ ಅವನಿಗೆ ದಿನವೂ ನಮಸ್ಕರಿಸುತ್ತೀಯ?' ಅದಕ್ಕೆ ಸಾಕ್ರಟೀಸ್ ಕೊಟ್ಟ ಉತ್ತರ ಮಾರ್ಮಿಕವಾಗಿದೆ: ಅವನ ನಿಂದನೆಯಿಂದ ನನಗೆ ನೋವಾಗಲಿಲ್ಲ, ಅಚ್ಚರಿ ಕೂಡ ಆಗಲಿಲ್ಲ. ಅವನು ನನ್ನನ್ನು ನಿಂದಿಸುವ ಕೆಟ್ಟ ಹಟವನ್ನು ಬಿಡಲು ತಯಾರಿಲ್ಲ. ಅಂದಮೇಲೆ ನಾನೇಕೆ ನಮಸ್ಕರಿಸುವ ನನ್ನ ಸನ್ನಡತೆಯನ್ನು ಬಿಡಲಿ?

ಹೌದಲ್ಲವೇ? ಯಾರು ಯಾವುದನ್ನು ಬಿಡುವುದರಿಂದ ವ್ಯಕ್ತಿಗೂ ಸಮಾಜಕ್ಕೂ ಒಳ್ಳೆಯದಾದೀತು? ಜನರು ವಿಕೃತಿಗಳ ಮೂಲಕ ಜನಪ್ರಿಯರಾಗುವುದರಿಂದ ದೂರವಿರಬೇಕು. ಇಂದು ನಾವೆಲ್ಲಾ ವೇಗವೈಭವದ ಜೀವನ ಕ್ರಮದಲ್ಲಿ ಸಜ್ಜನಿಕೆಯನ್ನು ಕಳೆದುಹೋದ ಮೌಲ್ಯವೆಂದೇ ಭಾವಿಸಿದ್ದೇವೆ. ಅದು ಶಾಲೆ ಕಾಲೇಜು ಇರಲಿ, ಮಾರ್ಕೆಟ್ಟು, ರೈಲು ಬಸ್ ಪ್ರಯಾಣ ಏನೇ ಇರಲಿ ಸಾರ್ವಜನಿಕ ಸನ್ನಡತೆ ಎನ್ನುವುದು ಮರೀಚಿಕೆಯಾದಂತಿದೆ. ನಾವು ಆಡುವ ಮಾತಿನಲ್ಲಿ ನಯ, ನಾಗರಿಕತೆ ಮಾಯವಾಗಿದೆ. ನುಡಿ ಎನ್ನುವುದು ಮನುಷ್ಯನ ನೈತಿಕ ಅಭಿವ್ಯಕ್ತಿಯ ಸಾಧನ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ, ಸಿನಿಮಾಗಳಲ್ಲಿ ಕೆಲವರು ಬಳಸುವ ಭಾಷೆ ಸಾಮಾಜಿಕ ನೈತಿಕತೆಯ ಗಡಿಗೆರೆಗಳನ್ನು ಮೀರಿದೆ. ಅದು ಪೂರ್ವಗ್ರಹ ಮತ್ತು ವಿಕಾರಗಳನ್ನೇ ರೂಢಿಗತವಾಗಿಸಿಕೊಂಡ ಸಾರ್ವಜನಿಕ ಲಜ್ಜೆ ಕಳೆದುಕೊಂಡ ಅರೆಬರೆ ವಿದ್ಯಾವಂತ ಸಮುದಾಯದ ನಡೆ. ರಾವಣಗುಣಗಳೇ ಎಲ್ಲೆಡೆ ವಿಜೃಂಭಿಸುತ್ತಿರುವ ಅನಪೇಕ್ಷಿತ ಅನಾಗರಿಕತೆ.

ಆದ್ದರಿಂದಲೇ ಹಿರಿಯರಲ್ಲಿ ನೈತಿಕ ಆತಂಕವೊಂದು ಮನೆ ಮಾಡುತ್ತಿದೆ. ಸಂಬಂಧವೇ ಇಲ್ಲದಿದ್ದರೂ ಉಪದ್ರವ ಕೊಡುವುದನ್ನು ಪ್ರಶ್ನಿಸಲಾಗದ ಅಸಹಾಯಕತೆ ಕಾಡುತ್ತಿದೆ. ಹಬ್ಬಗಳಲ್ಲಿ ಎಲ್ಲರೂ ಒಂದಾಗಿ ಆಟವಾಡುವ, ಕೊಡು-ಕೊಳ್ಳುವ ಸಡಗರಗಳಿಂದ ದೂರವಾಗಿದ್ದೇವೆ. ಎಲ್ಲರನ್ನೂ ಎಲ್ಲದನ್ನೂ ಅನುಮಾನಿಸುವ ಸಿನಿಕತನ ಸಾರ್ವತ್ರಿಕವಾಗಿದೆ.

ಮಾತು ಮತ್ತು ನಡವಳಿಕೆ ಆಧ್ಯಾತ್ಮಿಕವಾಗಿ ಸೋತ ನೆಲದಲ್ಲಿ ಸಾರ್ವಜನಿಕ ನೈತಿಕತೆಯ ಮರುಸೃಷ್ಟಿಗೆ ಹೆಗಲು ಕೊಡುವವರು ಬೇಕಾಗಿದೆ. ಆಳುವ ಶಕ್ತಿಕೇಂದ್ರಗಳಲ್ಲಿ ಕುಸಿದ ನೈತಿಕತೆಯ ಮಾದರಿಯನ್ನು ಅನುಸರಿಸುವ ಸಮಾಜದಲ್ಲಿ ಸನ್ನಡತೆಯ ಹುಡುಕಾಟ ಕಷ್ಟ. ರಾವಣನ ಸೀತಾಪಹರಣದ ಯೋಜನೆಯನ್ನು ತಡೆಯಲೆತ್ನಿಸಿದ ಅವಲೋಕಿನಿ ದೇವತೆ 'ಸಮುದ್ರವೇ ಬಿಸಿಯಾಗಿ ಬಿಟ್ಟರೆ ಬೆರೆಸಲು ತಣ್ಣೀರನ್ನು ಎಲ್ಲಿಂದ ತರುವುದು' ಎನ್ನುತ್ತಾಳೆ. ಆಗಿನ ಒಬ್ಬ ರಾವಣ ಅವಳ ಮಾತನ್ನು ಕೇಳುವುದಿಲ್ಲ. ಈಗ ಅನೇಕ ರಾವಣರು. ಅವರನ್ನು ತಡೆದು ಬುದ್ಧಿ ಹೇಳುವ ದೇವತೆಯರಿಲ್ಲ.

ನಮ್ಮ ಮನಸ್ಸು ಕಪಟವಿಲ್ಲದ ಆಲೋಚನೆ ಮತ್ತು ನಡವಳಿಕೆಗಳಿಂದ ಸ್ಪಂದನಶೀಲಗೊಳ್ಳಬೇಕಿದೆ. ಸಾಮಾಜಿಕ ಹಿತವನ್ನು ಸೃಷ್ಟಿಸುವುದು ಮಾತ್ರವಲ್ಲ, ಅದನ್ನು ಮುಕ್ತವಾಗಿ ಸ್ವೀಕರಿಸುವ ಯೋಗ್ಯ ಮನಸ್ಸೂ ಇರಬೇಕು. ಮುಖವಾಡಗಳ ಒಳಗಿನ ಕ್ರೌರ್ಯ ಕಳಚಿ ಕೃತಜ್ಞತೆ ಅರಳಬೇಕು. ಆಡುವ ಮಾತುಗಳಲ್ಲಿ ಹೃದಯ ತುಂಬಿ ಬರಬೇಕು. ❖

ಪದಬಂಧ 6351


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಬರ ವಿದ್ದರೂ ಈ ಮೆರೆತ ! (4)
3.ಕೆನೆ ಕಡೆದು ತೆಗೆದ ಹೊಸ ಬೆಣ್ಣೆ (4)
5.ವರ ನೀಡಿರುವ ವಿಸ್ತಾರ ಹೇಳಿಕೆ (3)
6.ಕದಕ್ಕೆ ತಾಕಿಸಿರುವ ಕೆನ್ನೆ (3)
8.ಸತಿಗೆ ಸಿಕ್ಕಿರುವ ಮೋಕ್ಷ (3)
9.ರಸ ಸ್ವಾಧನೆಯನ್ನು ಬಲ್ಲವ (3)
10.ಗುಂಪು ಇಲ್ಲಿ ಕಾಣುತ್ತಿದೆ (3)
14.ಹದ್ದಿನ ಜಾತಿಗೆ ಸೇರಿದ ಒಂದು ಪಕ್ಷಿ (3)
15.ಈಕೆ ವಿದ್ಯಾಧಿದೇವತೆ (4)
16.ಇದು ಹೂವಿನ ಶರ (4)

ಮೇಲಿಂದ ಕೆಳಕ್ಕೆ

1.ಆಗಮಗಳನ್ನು ತಿಳಿದವನು (4)
2.ಕುಪ್ಪಸವನ್ನು ಹೀಗೂ ಹೇಳುವರು (3)
3.ಹೀಗೆ ಸಂಕಟದಿಂದ ಮುಲುಕು (3)
4.ನಡುವೆ ಗರ ತಿರುಗಿಸಿದಾಗಿನ ವರ್ಗ (4)
7.ಮಸ್ತಕದ ಬಳಿಯಿರಿಸಿದ ಹೊತ್ತಿಗೆ (3)
8.ವಿರಸದ ಉಲ್ಟಾ ಪದ (3)
9.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
11.ವಿಷ್ಣುವಿನ ಬಳಿಯಿರಿಸಿರುವ ಅಗಲವಾದ ತಟ್ಟೆ (4)
12.ಸಂಗಾತಿ ತಿಳಿಸಿದ ವಿಷಯ (3)
13.ಇನ್ನೂ ಕರು ಹಾಕದ ಹಸು (3)



6350ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಸಹಗಮನ 4.ಪಗಾರ 5.ಟಗರು 8.ಆನೆ 9.ವರ್ಜ್ಯ 10.ಪಾಚಕ 11.ವೆನಾ 12.ಸಂತ 13.ನಸುಕು 14.ಅಂತಕ 15.ಲವಲವಿಕೆ

ಮೇಲಿಂದ ಕೆಳಕ್ಕೆ: 1.ಜಾಗ 2.ಸರ 3.ನಟನೆ 4.ಪರ್ಯವಸಾನ 6.ರುದ್ರನಾಟಕ 7.ಪ್ರಪಾತ 8.ಆಕಳು 12.ಸಂಕುಲ 14.ಅಂಕೆ 16.ಲಡಿ

ಸುಡೊಕು 6735

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		3		2		6		1
	6	2						
				3			4	8
	4		3		1		7	
1	3	7				4		5
			4		7		1	2
	2		5				3	
6		9				5		4
	5				2		8	

6734 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

23 ಮಾರ್ಚ್ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಪಂಚಮಿ ಗಂ. 18-39 ನಕ್ಷತ್ರ: ಕೃತ್ತಿಕಾ ಗಂ. 20-50 ಯೋಗ: ವಿಷ್ಕಂಭ ಗಂ. 12-22 ಕರಣ: ಬವ ಗಂ. 7-57 ಮೀನ ಮಾಸದ 09 ನೇ ದಿನ. ಮಳೆ ನಕ್ಷತ್ರ : ಉತ್ತರಾಭಾದ್ರ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-36 ಸೂರ್ಯಾಸ್ತ : 06-38, ಮುಸ್ಲಿಂ ದಿನಾಂಕ : 3 ಶವ್ವಾಲ್, ಅದೃಷ್ಟ ಸಂಖ್ಯೆ : 9, 5

ಮೇಷ: ಆರ್ಥಿಕವಾಗಿ ಉತ್ತಮ ಪ್ರಗತಿ ಇದ್ದರೂ ಧನವ್ಯಯದಲ್ಲಿ ಆಗುತ್ತಿರುವ ಅನವಶ್ಯಕ ಖರ್ಚುಗಳನ್ನು ತಡೆಗಟ್ಟುವ ಪ್ರಯತ್ನ ಮಾಡುವುದರಿಂದ ಲಾಭ ಗಳಿಸಬಹುದು. ಸುಗಂಧ ದ್ರವ್ಯದ ಮಾರಾಟದಲ್ಲಿ ಲಾಭ ಸಿಗಲಿದೆ.

ವೃಷಭ: ಅಧಿಕಾರಿಗಳಿಗೆ ಅಪನಂಬಿಕೆ ಮೂಡುವಂತಹ ಘಟನೆಗಳು ಸಂಭವಿಸಬಹುದು. ತಾಯಿ ಆರೋಗ್ಯ ತಪಾಸಣೆ ನಡೆಸಲು ವೈದ್ಯರನ್ನು ಕಾಣುವಿರಿ. ಬಿಳಿ ಬಣ್ಣ ಅದೃಷ್ಟ ತರುವುದು.

ಮಿಥುನ: ವ್ಯವಹಾರಗಳನ್ನು ಇತರರೊಂದಿಗೆ ಹೇಳಿಕೊಂಡರೂ ಒಳಗುಟ್ಟನ್ನು ಬಿಟ್ಟುಕೊಡದಿರಿ. ನೆಮ್ಮದಿಯ ವಿಷಯವೇನೆಂದರೆ ಖರ್ಚಿಗೆ ತಕ್ಕಂತೆ ಧನಾಗಮನ ಇರಲಿದೆ.

ಕರ್ಕಾಟಕ: ವ್ಯಾಪಾರದ ಅಭಿವೃದ್ಧಿಗೆ ಬೇಕಾದ ಆರ್ಥಿಕ ಬಲದ ಜತೆ ವ್ಯಾಪಾರದ ಉಪಾಯಗಳನ್ನು ಬಳಸಿ. ಸ್ಥಗಿತಗೊಂಡಿದ್ದ ಕಾರ್ಯಗಳಿಗೆ ಚಾಲನೆ ದೊರೆಯುವುದು. ಗೌರವಕ್ಕೆ ಚ್ಯುತಿ ಬಾರದಂತೆ ಕಾಪಾಡಿಕೊಳ್ಳಿ.

ಸಿಂಹ: ವಿದ್ಯಾರ್ಥಿ ವರ್ಗಕ್ಕೆ ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಸೂಕ್ತ ದಿನ. ಸಂಬಂಧಿಕರ ವಲಯದಲ್ಲಿದ್ದ ತಪ್ಪು ಅಭಿಪ್ರಾಯಗಳು ದೂರಾಗಲಿವೆ.

ಕನ್ಯಾ: ಎಂತಹ ಪರಿಸ್ಥಿತಿಯನ್ನೂ ಎದುರಿಸಬಲ್ಲೆನೆಂಬ ಆತ್ಮವಿಶ್ವಾಸದಿಂದ ಜೀವನ ನಡೆಸಿ. ಅದರಿಂದ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ. ಹಿತಶತ್ರುಗಳ ಕಾಟದಿಂದ ತಪ್ಪಿಸಿಕೊಳ್ಳಲು ಬುದ್ಧಿವಂತಿಕೆ ಉಪಯೋಗಿಸಿರಿ.

ತುಲಾ: ಮಕ್ಕಳೊಂದಿಗೆ ಮನರಂಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೋಗಲಿದ್ದೀರಿ. ಸಂಸ್ಥೆಯಿಂದ ತರಬೇತಿ ಪಡೆದುಕೊಳ್ಳುವ ಅವಕಾಶಗಳು ಎದುರಾದರೆ ಸದುಪಯೋಗ ಪಡಿಸಿಕೊಳ್ಳಿ.

ವೃಶ್ಚಿಕ: ದೈಹಿಕ ಮತ್ತು ಆರ್ಥಿಕ ಶಕ್ತಿಯನ್ನು ವ್ಯಯಿಸದೇ ಸಮಯಕ್ಕಾಗಿ ಕಾದು, ಕಾರ್ಯವೆಸಗುವ ಚಾಣಾಕ್ಷತನ ನಿಮ್ಮಲ್ಲಿ ಇರುವುದು. ಸಾಲ ತೀರಿಸಲು ಹೊಸದೊಂದು ಮಾರ್ಗ ಕಾಣಲಿದೆ.

ಧನು: ಪ್ರಯತ್ನಿಸಿದ ಕಾರ್ಯಗಳಲ್ಲಿ ಜಯವಿದ್ದು, ಆದಾಯ ಲಭಿಸುವುದು. ಜನರಿಗೆ ಮಾರ್ಗದರ್ಶನ ಮಾಡುವ ಯೋಗವಿದೆ. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆ ಮುಖ್ಯ.

ಮಕರ: ಹಲವು ಕಾರಣಗಳಿಗೆ ಸ್ನೇಹಿತರು ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರವನ್ನು ಅಪೇಕ್ಷಿಸಬಹುದು. ತಾಯಿಯ ಆರೋಗ್ಯ ಅದರಲ್ಲೂ ಕಣ್ಣಿನ ದೃಷ್ಟಿಗೆ ಸಂಬಂಧಿಸಿದಂತೆ ಕಾಳಜಿಯನ್ನು ತೆಗೆದು ಕೊಳ್ಳಬೇಕಾಗುತ್ತದೆ.

ಕುಂಭ: ಸಾಮಾಜಿಕವಾಗಿ ಜನೋಪಕಾರದಿಂದ ಪ್ರಶಂಸೆ ಹಾಗೂ ಗುರು-ಹಿರಿಯರಿಂದ ಮೆಚ್ಚುಗೆಯ ನುಡಿ ಲಭಿಸಲಿದೆ. ಕಾರ್ಯಕ್ಷೇತ್ರದ ಸಮಸ್ಯೆಯನ್ನು ಹಂತ ಹಂತವಾಗಿ ಸುಧಾರಣೆ ಮಾಡುವಿರಿ.

ಮೀನ: ದೈವಾನುಕೂಲದಿಂದ ಶುಭ ಕಾರ್ಯಗಳನ್ನು ನಿಶ್ಚಯ ಮಾಡಬಹುದು. ಜೀವನೋಪಾಯಕ್ಕೆ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುವಿರಿ. ಶ್ವಾಸಕೋಶಕ್ಕೆ ಸಂಬಂಧ ಪಟ್ಟ ಕಾಯಿಲೆ ನಿವಾರಣೆಯಾಗಲಿದೆ.

ಗುಂಡಣ್ಣ



ಚುಟುಕು ಸುದ್ದಿ

ಸಂಘರ್ಷ: ಕಚ್ಚಾ ವಸ್ತುಗಳ ಪೂರೈಕೆಯಲ್ಲಿ ಕೊರತೆ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ ಹಡಗುಗಳ ಸಂಚಾರ ವಿಳಂಬ-ವಾಗುತ್ತಿದೆ. ಜೊತೆಗೆ ದೇಶದ ಕಂಪನಿಗಳಿಗೆ ಪ್ರಮುಖ ಕಚ್ಚಾ ವಸ್ತುಗಳ ಕೊರತೆ ಉಂಟಾಗಿದೆ ಎಂದು ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಭಾನುವಾರ ಹೇಳಿದೆ.

ಸಂಘರ್ಷದಿಂದ ಪ್ರಮುಖ ಸಮುದ್ರ ಮಾರ್ಗಗಳಲ್ಲಿ ಹಡಗುಗಳ ಸಂಚಾರಕ್ಕೆ ಮತ್ತು ಜಾಗತಿಕ ಪೂರೈಕೆ ವ್ಯವಸ್ಥೆಗೆ ಅಡ್ಡಿ ಉಂಟಾಗಿದೆ. ಕಂಪನಿಗಳು ಇದರ ಪರಿಣಾಮವನ್ನು ಈಗಾಗಲೇ ಅನುಭವಿಸುತ್ತಿವೆ ಎಂದು ಸಿಐಐನ ಮಹಾನಿರ್ದೇಶಕ ಚಂದ್ರಜಿತ್ ಬ್ಯಾನರ್ಜಿ ಹೇಳಿದ್ದಾರೆ.

ಇಂಧನ ಮಾರುಕಟ್ಟೆ ಮತ್ತು ವ್ಯಾಪಾರದ ಮೇಲೂ ಸಂಘರ್ಷವು ಒತ್ತಡ ಸೃಷ್ಟಿಸಿದೆ. ಇದರಿಂದ ಆಮದು ಮತ್ತು ರಫ್ತು ವಲಯವು ಪರಿಣಾಮ ಅನುಭವಿಸುತ್ತಿದ್ದು, ತಯಾರಿಕಾ ವಲಯದ ಕೈಗಾರಿಕೆಗಳಲ್ಲಿ ಇದರ ಪರಿಣಾಮ ಕಂಡು ಬರುತ್ತಿದೆ ಎಂದು ಸಿಐಐ ತಿಳಿಸಿದೆ.

ಯೂರಿಯಾ ಘಟಕಗಳಿಗೆ ಯುದ್ಧದಿಂದ ಸಂಕಷ್ಟ



ನವದೆಹಲಿ (ಪಿಟಿಐ): ಭಾರತದ ಯೂರಿಯಾ ಘಟಕಗಳು ಅರ್ಧದಷ್ಟು ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ ಎಂದು ಮೂಲಗಳು ಹೇಳಿವೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆಗೆ ಅಡ್ಡಿ ಸೃಷ್ಟಿಸಿದೆ. ಇದರಿಂದಾಗಿ ಹಲವು ಕಂಪನಿಗಳು ಎಲ್‌ಎನ್‌ಜಿ ಪೂರೈಕೆ ವಿಚಾರದಲ್ಲಿ ಗುತ್ತಿಗೆ ಒಪ್ಪಂದಗಳಿಗೆ ಅನುಗುಣವಾಗಿ ನಡೆದುಕೊಳ್ಳಲು ಆಗದು ಎಂದು ಹೇಳಿವೆ. ಇದು ಎಲ್‌ಎನ್‌ಜಿ ಪೂರೈಕೆ ಮೇಲೆ ಪರಿಣಾಮ ಬೀರಿದೆ.

ಪೆಟ್ರೊನೆಟ್ ಎಲ್‌ಎನ್‌ಜಿ ಕಂಪನಿಯು ದೇಶಕ್ಕೆ ಪೂರೈಕೆ ಆಗುವ ಎಲ್‌ಎನ್‌ಜಿ ಸ್ವೀಕರಿಸುವ ಅತಿದೊಡ್ಡ ಟರ್ಮಿನಲ್ ನಿರ್ವಹಣೆ ಮಾಡುತ್ತಿದೆ. ಜಲಸಂಧಿಯಲ್ಲಿ ಸೃಷ್ಟಿಯಾಗಿರುವ ಅಡ್ಡಿಯ ಕಾರಣದಿಂದಾಗಿ, ಈ ಕಂಪನಿಗೆ ಎಲ್‌ಎನ್‌ಜಿ ಪೂರೈಕೆ ಮಾಡುವವರು ಪೂರೈಕೆ ಕಷ್ಟ ಎಂದು ಹೇಳಿದ್ದಾರೆ. ಹೀಗಾಗಿ ಪೆಟ್ರೊನೆಟ್ ಎಲ್‌ಎನ್‌ಜಿ ಕೂಡ ತನ್ನಿಂದ ಗುತ್ತಿಗೆ ಒಪ್ಪಂದಗಳಿಗೆ ಅನುಗುಣವಾಗಿ ನಡೆದುಕೊಳ್ಳಲು ಆಗದು ಎಂದು ತಿಳಿಸಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

'ಇದರಿಂದಾಗಿ ಸರ್ಕಾರಿ ಸ್ವಾಮ್ಯದ ಗೇಲ್ ಲಿಮಿಟೆಡ್, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಅನಿಲ ಪೂರೈಕೆಯನ್ನು ಕಡಿಮೆ ಮಾಡಿವೆ. ಈ ಕಂಪನಿಗಳು ದೇಶದಾದ್ಯಂತ ಇರುವ ರಸಗೊಬ್ಬರ ಘಟಕಗಳಿಗೆ ಅನಿಲ ಸರಬರಾಜು ಮಾಡುತ್ತವೆ.

'ಪರಿಸ್ಥಿತಿ ಸಹಜವಾಗಿದ್ದ ಮಟ್ಟಕ್ಕೆ ಹೋಲಿಸಿದರೆ ಈಗ ಅನಿಲ ಪೂರೈಕೆಯು ಶೇ 60ರಿಂದ ಶೇ 65ರಷ್ಟು ಮಾತ್ರ ಇದೆ' ಎಂದು ಉದ್ಯಮದ ಮೂಲಗಳು ಹೇಳಿವೆ. 'ಇದರಿಂದಾಗಿ ಯೂರಿಯಾ ಉತ್ಪಾದನೆಯು ಘಟಕಗಳಲ್ಲಿ ಸರಾಸರಿಯಾಗಿ ಶೇ 50ರಷ್ಟು ಕಡಿಮೆ ಆಗಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹465, 12 ಕ್ಕೆ ₹72
ಮೈಸೂರು: 100 ಕ್ಕೆ ₹470

ರಾಮನಗರ ರೇಷ್ಮೆಗೂಡು
ಮಿಶ್ರತಳಿ (ಸಿ.ಬಿ) ₹422-722
ದ್ವಿತಳಿ (ಬಿ.ವಿ) ₹293-831

ಕೆಂಡದಂತಾದ ಜಗತ್ತಿನಲ್ಲಿ ತಣ್ಣಗಾದ ಚಿನ್ನ

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಚಿನ್ನದ ಬೆಲೆ-2026ರ ಏರಿಳಿತ

ಕಾಲಾವಧಿ	ಬೆಲೆಯ ಬದಲಾವಣೆ	ಪ್ರಮುಖ ಕಾರಣ
ಜನವರಿ-ಫೆಬ್ರುವರಿ	ಶೇ 25ರಿಂದ ಶೇ 30ರಷ್ಟು ಏರಿಕೆ	ಕೇಂದ್ರೀಯ ಬ್ಯಾಂಕ್‌ಗಳ ಖರೀದಿ ಮತ್ತು ಯುದ್ಧದ ಆರಂಭಿಕ ಭೀತಿ
ಮಾರ್ಚ್ (ಈವರೆಗೆ)	ಶೇ10ರಿಂದ ಶೇ 12ರಷ್ಟು ಇಳಿಕೆ	ಲಾಭದ ನಗದೀಕರಣ ಮತ್ತು ಅಮೆರಿಕದ ಬಡ್ಡಿದರದ ಪ್ರಭಾವ
ವಾರ್ಷಿಕ ಸರಾಸರಿ	ಶೇ 15ರಷ್ಟು ಲಾಭ	ಮಾರ್ಚ್ ಇಳಿಕೆಯ ಹೊರತಾಗಿಯೂ ಈ ವರ್ಷ ಚಿನ್ನದ ಹೂಡಿಕೆ ಲಾಭದಲ್ಲೇ ಇದೆ

ಜಗತ್ತಿನಲ್ಲಿ ಅಶಾಂತಿ ಅಥವಾ ಯುದ್ಧದ ಕಾರ್ಮೋಡ ಕವಿದಾಗ ಎಲ್ಲರ ದೃಷ್ಟಿ ಸಾಮಾನ್ಯವಾಗಿ ಹರಿಯುವುದು ಸುರಕ್ಷಿತ ಹೂಡಿಕೆಯಾದ ಚಿನ್ನದ ಮೇಲೆ. ಆದರೆ ಈ ವರ್ಷದ ಮಾರ್ಚ್ ತಿಂಗಳ ಮಾರುಕಟ್ಟೆ ಚಿತ್ರಣ ಬೇರೆ ಇದೆ. ಪಶ್ಚಿಮ ಏಷ್ಯಾದಲ್ಲಿ ಯುದ್ಧ ನಡೆಯುತ್ತಿದ್ದರೂ 'ಹಳದಿ ಲೋಹ'ದ ಬೆಲೆ ಮಾತ್ರ ಕುಸಿತ ಕಾಣುತ್ತಿದೆ. ಕಳೆದ ಫೆಬ್ರುವರಿಯಲ್ಲಿ 10 ಗ್ರಾಂಗೆ ₹1.70 ಲಕ್ಷದ ಗಡಿ ಮುಟ್ಟಿದ್ದ ಚಿನ್ನದ ದರ, ಈಗ ಇಳಿಕೆಯ ಹಾದಿ ಹಿಡಿದಿರುವುದು ಹೂಡಿಕೆದಾರರಲ್ಲಿ ಕುತೂಹಲ ಮತ್ತು ಆತಂಕ ಮೂಡಿಸಿದೆ. ಭಾರತದ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಕಳೆದ 15 ದಿನಗಳಲ್ಲಿ ಸುಮಾರು ಶೇ 8ರಿಂದ ಶೇ 12ರಷ್ಟು ಕುಸಿತ ಕಂಡಿದೆ. ಈ ವಿದ್ಯಮಾನದ ಹಿಂದೆ ಅಡಗಿರುವ ಆರ್ಥಿಕ ರಹಸ್ಯಗಳೇನು? ಬಂಗಾರ ಮತ್ತೆ ಹಳೆಯ ವೈಭವ ಪಡೆಯಲಿದೆಯೇ?

ಬೆಲೆ ಇಳಿಕೆಗೆ ಕಾರಣವೇನು?: ಯುದ್ಧ ನಡೆಯುತ್ತಿದ್ದರೂ ಚಿನ್ನದ ಬೆಲೆ ಇಳಿಯಲು ಮುಖ್ಯವಾಗಿ ನಾಲ್ಕು ಕಾರಣಗಳಿವೆ. ಜಾಗತಿಕ ಕಾರಣಗಳೂ ಇವೆ.

1. ಡಾಲರ್‌ನ ಮೌಲ್ಯ ಏರಿಕೆ: ಯುದ್ಧದ ಸಮಯದಲ್ಲಿ ಜನರು ಚಿನ್ನವನ್ನು ನೆಚ್ಚಿಕೊಳ್ಳುವುದು ಎಷ್ಟು ನಿಜವೋ, ಅಮೆರಿಕದ ಡಾಲರ್ ಅನ್ನು ನಂಬುವುದು ಕೂಡ ಅಷ್ಟೇ ಸತ್ಯ. ಈಗ ಡಾಲರ್ ಸೂಚ್ಯಂಕ ಅತ್ಯಂತ ಬಲಗೊಂಡಿದೆ. ಅಂತರರಾಷ್ಟ್ರೀಯ ವ್ಯವಹಾರಗಳು ಡಾಲರ್‌ನಲ್ಲಿ ನಡೆಯುವುದರಿಂದ, ಅದರ ಮೌಲ್ಯ ಹೆಚ್ಚಾದಾಗ ಚಿನ್ನದ ಬೆಲೆ ತಾಂತ್ರಿಕವಾಗಿ ಇಳಿಕೆಯಾಗುತ್ತದೆ.

2. ಫೆಡರಲ್ ರಿಸರ್ವ್ ಬಿಗಿ ನಿಲುವು: ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 110 ಡಾಲರ್ ದಾಟಿರುವುದರಿಂದ ಜಾಗತಿಕವಾಗಿ ಹಣದುಬ್ಬರ ಹೆಚ್ಚಾಗಿದೆ. ಇದನ್ನು ನಿಯಂತ್ರಿಸಲು ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರವನ್ನು ಇಳಿಸಲು ನಿರಾಕರಿಸಿದೆ. ಬಡ್ಡಿದರ ಹೆಚ್ಚಿದ್ದಾಗ ಹೂಡಿಕೆದಾರರು ಚಿನ್ನದ ಬದಲು ಬಡ್ಡಿ ನೀಡುವ ಸರ್ಕಾರಿ ಬಾಂಡ್‌ಗಳತ್ತ ಆಕರ್ಷಿತರಾಗುತ್ತಾರೆ.

3. ಲಾಭದ ನಗದೀಕರಣ: 2025ರಲ್ಲಿ ಚಿನ್ನವು ಹೂಡಿಕೆದಾರರಿಗೆ ಬರೋಬ್ಬರಿ ಶೇ 70ರಷ್ಟು ಲಾಭ ತಂದುಕೊಟ್ಟಿತ್ತು. ಈಗ ಬೆಲೆ ತುಸು ಇಳಿಯುತ್ತಿದ್ದಂತೆ, ದೊಡ್ಡ ಹೂಡಿಕೆದಾರರು ತಮಗಾದ ಲಾಭವನ್ನು ಕೈಗೆತ್ತಿಕೊಳ್ಳಲು ಶುರು ಮಾಡಿದ್ದಾರೆ.

4. ಷೇರು ಮಾರುಕಟ್ಟೆಯ ಪ್ರಭಾವ: ಭಾರತದ ಷೇರು ಮಾರುಕಟ್ಟೆ ಯುದ್ಧದ ಭೀತಿಯಿಂದಾಗಿ ಕುಸಿದಿದೆ. ಈ ನಷ್ಟವನ್ನು ಸರಿದೂಗಿಸಲು ಮತ್ತು ನಗದು ಕೊರತೆ ನೀಗಿಸಲು ದೊಡ್ಡ ಕಂಪನಿಗಳು ತಮ್ಮಲ್ಲಿದ್ದ ಚಿನ್ನವನ್ನು ಮಾರಾಟ ಮಾಡುತ್ತಿವೆ.

ಮುಂದೆ ಏನಾಗಬಹುದು?: ಒಂದು ಕಾಲದಲ್ಲಿ ಚಿನ್ನದ ಬೆಲೆ 10 ಗ್ರಾಂಗೆ ₹1 ಲಕ್ಷ ಆಗುತ್ತದೆಯೇ ಎಂಬ ಚರ್ಚೆ ಇತ್ತು. ಆದರೆ 2025ರ ಏಪ್ರಿಲ್‌ನಲ್ಲೇ ಈ ಮೈಲಿಗಲ್ಲನ್ನು ಚಿನ್ನ ದಾಟಿ ಇತಿಹಾಸ ಸೃಷ್ಟಿಸಿತು. 2026ರ ಮಾರ್ಚ್ 20ರ ಪ್ರಕಾರ ಬೆಂಗಳೂರಿನ ಮಾರುಕಟ್ಟೆಯಲ್ಲಿ 24 ಕ್ಯಾರೆಟ್ ಚಿನ್ನದ ದರ ₹1.48 ಲಕ್ಷದಿಂದ ₹1.52 ಲಕ್ಷದ ಆಸುಪಾಸಿನಲ್ಲಿದೆ. ತಜ್ಞರ ಪ್ರಕಾರ, ಚಿನ್ನದ ಬೆಲೆ ₹1 ಲಕ್ಷಕ್ಕಿಂತ ಕೆಳಗೆ ಬರುವ ಸಾಧ್ಯತೆ ಕಡಿಮೆ.

ಮಾರುಕಟ್ಟೆಯಲ್ಲಿ ಸಣ್ಣಪುಟ್ಟ ಇಳಿಕೆ ಕಂಡುಬಂದರೂ, 2026ರ ಅಂತ್ಯದ ವೇಳೆಗೆ ಇದು ₹1.80 ಲಕ್ಷದಿಂದ ₹2 ಲಕ್ಷದ ಗಡಿ ಮುಟ್ಟಬಹುದು ಎಂದು ಜೆ.ಪಿ. ಮಾರ್ಗನ್‌ನಂತಹ ಸಂಸ್ಥೆಗಳು ಅಂದಾಜಿಸಿವೆ. ಇನ್ನು ಆರ್ಥಿಕ ತಜ್ಞರ ಪ್ರಕಾರ, ಚಿನ್ನದ ಬೆಲೆ ಇನ್ನು ಮುಂದೆ ಯಾವುದೇ ಕಾರಣಕ್ಕೂ ₹1.20 ಲಕ್ಷಕ್ಕಿಂತ ಕೆಳಗೆ ಹೋಗುವ ಸಾಧ್ಯತೆ ಇಲ್ಲ. ಪ್ರತಿ ಬಾರಿ ಬೆಲೆ ಇಳಿದಾಗಲೂ ಭಾರತೀಯ ರಿಸರ್ವ್ ಬ್ಯಾಂಕ್‌ನಂತಹ ಕೇಂದ್ರೀಯ ಬ್ಯಾಂಕ್‌ಗಳು ಚಿನ್ನವನ್ನು ಖರೀದಿಸಿ ಸಂಗ್ರಹಿಸಿಡುತ್ತಿವೆ. ಇದು ಬೆಲೆಗೆ ರಕ್ಷಾ ಕವಚದಂತೆ ಕೆಲಸ ಮಾಡುತ್ತದೆ.

ಸಂಶೋಧನಾ ವರದಿಗಳು ಏನು ಹೇಳುತ್ತವೆ?: ಜಾಗತಿಕ ಮತ್ತು ದೇಶೀಯ ಸಂಶೋಧನಾ ಸಂಸ್ಥೆಗಳಾದ ಜೆ.ಪಿ. ಮಾರ್ಗನ್, ಗೋಲ್ಡ್‌ಮನ್ ಸ್ಯಾಕ್ಸ್ ಮತ್ತು ಭಾರತದ ಮೋತಿಲಾಲ್ ಓಸ್ವಾಲ್ ತಮ್ಮ ವರದಿಯಲ್ಲಿ ಕೆಲವು ಮುಖ್ಯ ಅಂಶಗಳನ್ನು ಉಲ್ಲೇಖಿಸಿವೆ. ಚಿನ್ನದ ಬೆಲೆ ₹1.6 ಲಕ್ಷ ದಾಟಿದಾಗ ಭಾರತದಲ್ಲಿ ಆಭರಣಗಳ ಬೇಡಿಕೆ ಶೇ 20ರಷ್ಟು ಕುಸಿದಿತ್ತು. ಈ ಬೇಡಿಕೆಯ ಕೊರತೆ ಈಗ ಬೆಲೆ ಇಳಿಕೆಗೆ ಪೂರಕವಾಗಿದೆ. ಇದನ್ನು 'ಕುಸಿತ' ಎಂದು ಕರೆಯುವ ಬದಲು ತಾತ್ಕಾಲಿಕ ಇಳಿಕೆ ಎಂದು ಪರಿಗಣಿಸಬೇಕಾಗುತ್ತದೆ. ಅತಿಯಾಗಿ ಏರಿದ ಬೆಲೆ ಸ್ಥಿರಗೊಳ್ಳಲು ಈ ಪ್ರಕ್ರಿಯೆ ಅಗತ್ಯ. 2026ರ ದೀಪಾವಳಿ ವೇಳೆಗೆ ಚಿನ್ನವು ಮತ್ತೆ ಏರಿಕೆ ಕಂಡು ₹1.85 ಲಕ್ಷ ತಲುಪುವ ಸಾಧ್ಯತೆ ಇದೆ ಎಂದು ಹಲವು ವರದಿಗಳು ಭವಿಷ್ಯ ನುಡಿದಿವೆ.

ಹೂಡಿಕೆದಾರರಿಗೆ ಕಿವಿಮಾತು: ಪ್ರಸ್ತುತ ಜಾಗತಿಕ ಯುದ್ಧದ ಭೀತಿಯ ನಡುವೆಯೂ ಚಿನ್ನದ ಬೆಲೆ ಇಳಿಕೆಯಾಗುತ್ತಿರುವುದು ಮೇಲ್ನೋಟಕ್ಕೆ ವಿಚಿತ್ರವೆನಿಸಿದರೂ, ಇದು ಆರ್ಥಿಕತೆಯ ಸಂಕೀರ್ಣ ನಡೆಗಳ ಪರಿಣಾಮವಾಗಿದೆ. ಮುಂದಿನ ದಿನಗಳಲ್ಲಿ ಜಾಗತಿಕ ರಾಜಕೀಯ ಮತ್ತು ಹಣದುಬ್ಬರದ ಬದಲಾವಣೆಗಳಿಗೆ ಅನುಗುಣವಾಗಿ ಬೆಲೆಯು ಎರಡೂ ದಿಕ್ಕಿನಲ್ಲಿ ಚಲಿಸುವ ಸಾಧ್ಯತೆಯಿರುವುದರಿಂದ, ಗ್ರಾಹಕರು ಯಾವುದೇ ಆತುರದ ನಿರ್ಧಾರಕ್ಕೆ ಬರಬಾರದು. ನೆನಪಿಡಿ, ಯುದ್ಧದ ವಾತಾವರಣ ಇರುವವರೆಗೆ ಮತ್ತು ಜಾಗತಿಕ ಆರ್ಥಿಕತೆ ಅಸ್ಥಿರವಾಗಿರುವವರೆಗೆ, ಚಿನ್ನ ದೀರ್ಘಕಾಲದ ವಿಜೇತನಾಗಿ ಉಳಿಯುತ್ತದೆ.

'400 ಕ್ಷಿಪಣಿ ದಾಳಿ ನಡೆಸಿದ ಇರಾನ್'



ಇರಾನ್ ನಡೆಸಿದ ಕ್ಷಿಪಣಿ ದಾಳಿಯಿಂದ ದಕ್ಷಿಣ ಇಸ್ರೇಲ್‌ನ ಡಿಮೋನಾ ಪಟ್ಟಣದ ಕಟ್ಟಡಕ್ಕೆ ಹಾನಿಯಾಗಿದೆ —ಎಎಫ್‌ಪಿ ಚಿತ್ರ

ಜೆರುಸಲೇಂ (ಎಎಫ್‌ಪಿ): ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭವಾದ ಬಳಿಕ ಇದುವರೆಗೆ ಇಸ್ರೇಲ್ ಮೇಲೆ ಇರಾನ್ 400ಕ್ಕೂ ಹೆಚ್ಚು ಬ್ಯಾಲಿಸ್ಟಿಕ್ ಕ್ಷಿಪಣಿಗಳ ದಾಳಿ ನಡೆಸಿದೆ. ಇವುಗಳಲ್ಲಿ ಶೇ 92ರಷ್ಟು ಕ್ಷಿಪಣಿಗಳನ್ನು ನಿಷ್ಕ್ರಿಯಗೊಳಿಸಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

'ಇರಾನ್ ಹಾರಿಸಿದ ಕ್ಷಿಪಣಿಗಳು ಬ್ಯಾಲಿಸ್ಟಿಕ್ ಕ್ಷಿಪಣಿಗಳಿಗಿಂತ ಭಿನ್ನವಾಗಿಲ್ಲ. ಯುದ್ಧ ಆರಂಭವಾದ ಬಳಿಕ ಇಲ್ಲಿಯವರೆಗೆ ಕೇವಲ ನಾಲ್ಕು ನೇರ ದಾಳಿಗಳು ನಡೆದಿವೆ. ಶನಿವಾರ ನಡೆದ ದಾಳಿಯನ್ನು ತಡೆಯಲು ವಿಫಲವಾದ ಬಗ್ಗೆ ತನಿಖೆ ನಡೆಸಲಾಗುವುದು' ಎಂದು ಇಸ್ರೇಲ್ ಸೇನೆಯ ವಕ್ತಾರ ಲೆಫ್ಟಿನೆಂಟ್ ಕರ್ನಲ್ ನಡಾವ್ ಶೋಶಾನಿ ಹೇಳಿದ್ದಾರೆ.

'ದಾಳಿಗಳನ್ನು ನಾವು ಹಿಂದೆಯೂ ತಡೆಹಿಡಿದಿದ್ದೇವೆ. ಭವಿಷ್ಯದಲ್ಲಿಯೂ ತಡೆಯುತ್ತೇವೆ' ಎಂದಿದ್ದಾರೆ.

ಶನಿವಾರ ನಡೆದ ದಾಳಿಯನ್ನು 'ತುಂಬಾ ಕಷ್ಟಕರವಾದ ಸಂಜೆ' ಎಂದಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಸೈರನ್‌ಗಳು ಮೊಳಗಿದಾಗಲೆಲ್ಲಾ ನಿವಾಸಿಗಳು ಆಶ್ರಯ ಕೇಂದ್ರಗಳಿಗೆ ಹೋಗಬೇಕು ಎಂದು ಮನವಿ ಮಾಡಿದ್ದಾರೆ.

ನೇತನ್ಯಾಹು ಅವರು ಭಾನುವಾರ ಅರಾದ್‌ಗೆ ಭೇಟಿ ನೀಡಿದರು. ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ನಾವು ಇರಾನ್‌ನ ರೆವಲ್ಯೂಷನರಿ ಗಾರ್ಡ್‌ಗಳು ಹಾಗೂ ಕ್ರಿಮಿನಲ್ ಗ್ಯಾಂಗ್‌ನ ಬೆನ್ನು ಬಿದ್ದಿದ್ದೇವೆ. ಅವರ ನಾಯಕರು, ಅವರ ನೆಲೆಗಳು, ಆಸ್ತಿಗಳ ಮೇಲೆ ದಾಳಿ ಮಾಡುತ್ತಿದ್ದೇವೆ. ಅವರನ್ನು ವೈಯಕ್ತಿಕವಾಗಿ ಬೆನ್ನಟ್ಟುತ್ತಿದ್ದೇವೆ' ಎಂದು ತಿಳಿಸಿದ್ದಾರೆ.

ಎಫ್‌ಪಿಐ: ₹88,100 ಕೋಟಿ ವಾಪಸ್



ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಕಾರಣದಿಂದಾಗಿ ಮಾರ್ಚ್ ತಿಂಗಳ ಆರಂಭದಿಂದ 20ರವರೆಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರು ಮಾರುಕಟ್ಟೆಯಿಂದ ₹88,180 ಕೋಟಿ ಬಂಡವಾಳ ವಾಪಸ್ ಪಡೆದಿದ್ದಾರೆ.

ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆಯಾಗಿದೆ. ದೇಶದ ಆರ್ಥಿಕ ಬೆಳವಣಿಗೆ ಹಾಗೂ ಕಾರ್ಪೊರೇಟ್ ಕಂಪನಿಗಳ ಲಾಭದ ಮೇಲೆ ಕಚ್ಚಾ ತೈಲದ ಬೆಲೆ ಏರಿಕೆಯು ಪರಿಣಾಮ ಬೀರುವ ಆತಂಕದಿಂದ ಹೂಡಿಕೆದಾರರು ಬಂಡವಾಳವನ್ನು ಹಿಂದಕ್ಕೆ ತೆಗೆದು ಕೊಂಡಿದ್ದಾರೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿರುವುದು ಮತ್ತು ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಅನಿಶ್ಚಿತತೆ ಸಹ ಬಂಡವಾಳದ ಹೊರ ಹರಿವಿಗೆ ಕಾರಣವಾಗಿವೆ ಎಂದು ಹೇಳಿದ್ದಾರೆ.

ಈ ವರ್ಷದ ಆರಂಭದಿಂದ ಇಲ್ಲಿಯವರೆಗೆ ₹1 ಲಕ್ಷ ಕೋಟಿಗೂ ಅಧಿಕ ಬಂಡವಾಳ ಹೊರಹರಿದಿದೆ.

2024ರ ಅಕ್ಟೋಬರ್ ತಿಂಗಳಿನಲ್ಲಿ ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಯಿಂದ ₹94,017 ಕೋಟಿ ಬಂಡವಾಳ ವಾಪಸ್ ಪಡೆದಿದ್ದರು. ಇದು ಇಲ್ಲಿಯವರೆಗಿನ ಅತ್ಯಧಿಕ ಹೊರಹರಿವು.

'ಅಮೆರಿಕದಲ್ಲಿ ಬಾಂಡ್ ಗಳಿಕೆ ಹೆಚ್ಚಾಗುತ್ತಿದೆ. ಡಾಲರ್ ಮೌಲ್ಯವು ಸದೃಢಗೊಂಡಿದೆ. ಇದು ವಿದೇಶಿ ಹೂಡಿಕೆದಾರರನ್ನು ತನ್ನತ್ತ ಆಕರ್ಷಿಸುತ್ತಿದೆ. ಹೀಗಾಗಿ ಹೂಡಿಕೆದಾರರು, ಭಾರತದಂತಹ ಉದಯೋನ್ಮುಖ ರಾಷ್ಟ್ರಗಳಲ್ಲಿ ಹೂಡಿಕೆ ಮಾಡಿದ್ದ ಬಂಡವಾಳವನ್ನು ವಾಪಸ್ ತೆಗೆದುಕೊಂಡು ಅಮೆರಿಕದಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದಾರೆ. ಇದು ದೇಶದಿಂದ ಬಂಡವಾಳ ಹೊರಹರಿಯಲು ಕಾರಣವಾಗಿದೆ' ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ಸಂಶೋಧನಾ ವಿಭಾಗದ ಪ್ರಧಾನ ವ್ಯವಸ್ಥಾಪಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಮಂಗಳೂರಿಗೆ ಬಂದ ಎರಡು ಹಡಗು

ಒಂದನೇ ಪುಟದಿಂದ...

ಈ ಹಡಗಿನ ಒಟ್ಟಾರೆ ಉದ್ದ 229.9 ಮೀಟರ್ ಮತ್ತು ಅಗಲ 37.24 ಮೀಟರ್ ಇದೆ.

ಏತನ್ಮಧ್ಯೆ, ರಷ್ಯಾದ ತೈಲ ತುಂಬಿದ 'ಅಕ್ವಾ ಟೈಟನ್' ಹಡಗು ಶನಿವಾರ ರಾತ್ರಿ ಇಲ್ಲಿಗೆ ಬಂದಿದೆ. ಭಾನುವಾರ ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊಕೆಮಿಕಲ್ಸ್ ಲಿಮಿಟೆಡ್‌ಗೆ (ಎಂಆರ್‌ಪಿಎಲ್) 96,099.80 ಟನ್ ಕಚ್ಚಾ ತೈಲವನ್ನು ಇಳಿಸಿದೆ ಎಂದು ಎಂಆರ್‌ಪಿಎಲ್ ಮೂಲಗಳು ತಿಳಿಸಿವೆ.

ಜನವರಿ ಅಂತ್ಯದಲ್ಲಿ ಬಾಲ್ಟಿಕ್ ಬಂದರಿನಿಂದ ಹೊರಟಿದ್ದ ಈ ಹಡಗು ಚೀನಾದ ರಿಜಾವೊ ಬಂದರಿಗೆ ಪ್ರಯಾಣ ಬೆಳೆಸಿ, ಅಲ್ಲಿಂದ ನವ ಮಂಗಳೂರು ಬಂದರಿಗೆ ಬಂದಿದೆ.

ಇನ್ನೂ ನಾಲ್ಕು ಹಡಗು: ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಮತ್ತು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ಗೆ 26,687 ಟನ್ ಎಲ್‌ಪಿಜಿಯನ್ನು ಇಳಿಸಲಿಕ್ಕಾಗಿ 'ಅಪೋಲೋ ಓಷನ್' ಎಂಬ ಹಡಗು ಇದೇ 25ರಂದು ನವ ಮಂಗಳೂರು ಬಂದರಿಗೆ ಆಗಮಿಸುವ ಸಾಧ್ಯತೆಯಿದೆ. ವಿಯೆಟ್ನಾಂ ಧ್ವಜದ ಅಡಿಯಲ್ಲಿ ಪ್ರಯಾಣಿಸುತ್ತಿರುವ ಈ ಹಡಗು ಒಟ್ಟು 46,025 ಟನ್‌ಗಳಷ್ಟು ಎಲ್‌ಪಿಜಿಯನ್ನು ಹೊಂದಿದೆ ಎಂದು ಮೂಲಗಳು ತಿಳಿಸಿವೆ.

ಎಂಆರ್‌ಪಿಎಲ್‌ಗೆ ಕಚ್ಚಾ ತೈಲ ಹೊತ್ತ 'ಒಯಸಿಸ್' ಹಡಗು ಸೋಮವಾರ (ಮಾ.23) ಇಲ್ಲಿಗೆ ಬರಲಿದ್ದು, ಇದರಲ್ಲಿ 99,900 ಟನ್ ಕಚ್ಚಾ ತೈಲ ಇದೆ.

'ಬೌರ್ಬನ್' ಮತ್ತು 'ಕ್ಯು ಚಿ' ಹಡಗುಗಳು ಮಾರ್ಚ್ 24ರಂದು ಮಂಗಳೂರಿಗೆ ಬರಲಿವೆ. ಇವುಗಳಲ್ಲಿ ಕ್ರಮವಾಗಿ 20,000 ಟನ್ ಹಾಗೂ 35,000 ಟನ್ ತೈಲ ಇದೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕ ಸ್ವಾತಂತ್ರ್ಯೋತ್ಸವ ಚಿನ್ನದ ನಾಣ್ಯದಲ್ಲಿ ಟ್ರಂಪ್ ಚಿತ್ರ



ಡೊನಾಲ್ಡ್ ಟ್ರಂಪ್ ಅವರ ಭಾವಚಿತ್ರ ಒಳಗೊಂಡ ಚಿನ್ನದ ನಾಣ್ಯದ ಮಾದರಿ

ವಾಷಿಂಗ್ಟನ್ (ಪಿಟಿಐ): ಅಮೆರಿಕದ 250ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾವಚಿತ್ರ ಒಳಗೊಂಡ ಚಿನ್ನದ ನಾಣ್ಯವನ್ನು ಬಿಡುಗಡೆಗೊಳಿಸಲು ಸಿದ್ಧತೆ ನಡೆದಿದೆ.

ಅಮೆರಿಕದ ಹಣಕಾಸು ಸಚಿವ ಬ್ರ್ಯಾಂಡಾನ್ ಬೀಚ್ ಈ ಕುರಿತಂತೆ ಮಾಹಿತಿ ನೀಡಿದ್ದು, 'ದೇಶದ ಸದಾ ಕಾಲದ ಚೈತನ್ಯ ಮತ್ತು ಪ್ರಜಾಪ್ರಭುತ್ವವನ್ನು ಬಿಂಬಿಸುವಂಥ ನಾಣ್ಯವನ್ನು ತಯಾರಿಸಲು ಉದ್ದೇಶಿಸಿದ್ದೇವೆ. ಅಂಥ ನಾಣ್ಯದ ಮೇಲೆ ಭಾವಚಿತ್ರ ಹೊಂದಲು ಅಧ್ಯಕ್ಷ ಟ್ರಂಪ್ ಅವರಿಗಿಂತಲೂ ಸೂಕ್ತವಾದ ವ್ಯಕ್ತಿ ಮತ್ತೊಬ್ಬರಿಲ್ಲ' ಎಂದಿದ್ದಾರೆ.

'ಮಾರ್ಚ್ 19ರಂದು ಕಲಾ ವಿಭಾಗದ ಸಭೆ ನಡೆಸಿ, ನಾಣ್ಯದ ವಿನ್ಯಾಸವನ್ನೂ ಅನುಮೋದಿಸಲಾಗಿದೆ. ಮೇಜಿನ ಮೇಲೆ ಟ್ರಂಪ್ ಒರಗಿ, ಮುಷ್ಠಿ ಬಿಗಿ ಹಿಡಿದಿರುವಂತೆ 24 ಕ್ಯಾರೆಟ್ ಚಿನ್ನದ ನಾಣ್ಯದಲ್ಲಿ ಚಿತ್ರಿಸಲಾಗುತ್ತದೆ' ಎಂದೂ ಅವರು ತಿಳಿಸಿದ್ದಾರೆ.

ಆಕ್ಷೇಪ: ಅಮೆರಿಕದ ಫೆಡರಲ್ ಕಾನೂನಿನ ಪ್ರಕಾರ ದೇಶದ ಅಧ್ಯಕ್ಷರು ಜೀವಂತವಾಗಿರುವಾಗಲೇ ಅವರ ಭಾವಚಿತ್ರವನ್ನು ನೋಟುಗಳು, ನಾಣ್ಯಗಳ ಮೇಲೆ ಮುದ್ರಿಸುವಂತಿಲ್ಲ ಎಂಬ ನಿಯಮವಿದೆ. ಆದಾಗ್ಯೂ, ಟ್ರಂಪ್ ಆಡಳಿತ ನಾಣ್ಯ ಬಿಡುಗಡೆಗೆ ಮುಂದಾಗಿರುವುದು ವಿರೋಧಕ್ಕೆ ಕಾರಣವಾಗಿದೆ.

ಟ್ರಂಪ್ ಥೀಮ್‌ನ ಚಿನ್ನದ ನಾಣ್ಯ ಬಿಡುಗಡೆ ವಿಚಾರವು ಮುಜುಗರದ ಸಂಗತಿಯಾಗಿದ್ದು, ಅಮೆರಿಕದ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂದು ಡೆಮಾಕ್ರಟ್ ಪಕ್ಷದ ನಾಯಕರು ಆಕ್ಷೇಪಿಸಿದ್ದಾರೆ. ರಾಜರು ಮತ್ತು ಸರ್ವಾಧಿಕಾರಿಗಳಷ್ಟೇ ಈ ರೀತಿ ನಾಣ್ಯಗಳ ಮೇಲೆ ಚಿತ್ರ ಹೊಂದುತ್ತಿದ್ದರು. ಇದು ಪ್ರಜಾಪ್ರಭುತ್ವದ ನಾಯಕರ ಲಕ್ಷಣ ಅಲ್ಲ ಎಂದೂ ಟೀಕಿಸಿದ್ದಾರೆ.

ಇನ್ನು ಅಮೆರಿಕ ಅಧ್ಯಕ್ಷರೊಬ್ಬರು ಜೀವಂತವಿರುವಾಗಲೇ ನಾಣ್ಯದ ಮೇಲೆ ಭಾವಚಿತ್ರ ಹೊಂದುತ್ತಿರುವುದು ಇದು ಮೊದಲೇನಲ್ಲ. ಈ ಹಿಂದೆ ಅಮೆರಿಕದ 150ನೇ ಸ್ವಾತಂತ್ರ್ಯೋತ್ಸವದ ನಿಮಿತ್ತ 1926ರಲ್ಲಿ ದೇಶದ 30ನೇ ಅಧ್ಯಕ್ಷರಾಗಿದ್ದ ಕಾಲ್ವಿನ್ ಕೂಲೆಡ್ಜ್ ಅವರ ಭಾವಚಿತ್ರವನ್ನೂ ನಾಣ್ಯದಲ್ಲಿ ಮುದ್ರಿಸಲಾಗಿತ್ತು.

ಕ್ಯೂಬಾ: ದೇಶದಾದ್ಯಂತ ವಿದ್ಯುತ್ ಕಡಿತ



ಕ್ಯೂಬಾದಾದ್ಯಂತ ವಿದ್ಯುತ್ ಕಡಿತಗೊಂಡಿದ್ದರಿಂದ ಬೀದಿ ದೀಪಗಳೂ ಉರಿಯುತ್ತಿರಲಿಲ್ಲ. ಇಂಥ ರಸ್ತೆಗಳಲ್ಲಿ ಜನರು ಶನಿವಾರ ಸಾಗಿದರು —ಎಎಫ್‌ಪಿ ಚಿತ್ರ

ಹವಾನಾ (ಎಪಿ): ಕ್ಯೂಬಾದ ಮೇಲೆ ಅಮೆರಿಕವು ಹೇರಿರುವ ನಿರ್ಬಂಧದಿಂದ ಸೃಷ್ಟಿಯಾಗಿರುವ ಇಂಧನ ಕೊರತೆ ಮತ್ತು ಹಾಳಾಗಿರುವ ದೇಶದ ವಿದ್ಯುತ್ ಉತ್ಪಾದನಾ ಮೂಲಸೌಕರ್ಯಗಳ ಕಾರಣ ಮತ್ತೊಮ್ಮೆ ದೇಶದಾದ್ಯಂತ ವಿದ್ಯುತ್ ಕಡಿತಗೊಂಡಿದೆ.

ವಿದ್ಯುತ್ ಕಡಿತಗೊಂಡಿರುವುದು ಮಾರ್ಚ್ ತಿಂಗಳಲ್ಲೇ ಇದು ಮೂರನೇ ಬಾರಿಯಾಗಿದೆ.

ಯಾವ ಕಾರಣಕ್ಕಾಗಿ ವಿದ್ಯುತ್ ಕಡಿತ ಮಾಡಲಾಗಿದೆ ಎಂಬ ಬಗ್ಗೆ ಕ್ಯೂಬಾದ ವಿದ್ಯುತ್ ಒಕ್ಕೂಟ ಮಾಹಿತಿ ಬಹಿರಂಗ ಮಾಡಿರಲಿಲ್ಲ. ಬಳಿಕ, ಮಾಹಿತಿ ನೀಡಿದ ಒಕ್ಕೂಟವು 'ನ್ಯೂವಿಟಸ್ ಉಷ್ಣ ವಿದ್ಯುತ್ ಸ್ಥಾವರದಲ್ಲಿ ವಿದ್ಯುತ್ ಉತ್ಪಾದನೆ ಸ್ಥಗಿತಗೊಂಡಿದೆ' ಎಂದು ತಿಳಿಸಿದೆ.

'ವಿದ್ಯುತ್ ಪೂರೈಕೆ ಪುನಃ ಆರಂಭಿಸುವ ಬಗ್ಗೆ ನಾವು ಕಾರ್ಯಪ್ರವೃತ್ತರಾಗಿದ್ದೇವೆ' ಎಂದು ಸರ್ಕಾರ ಹೇಳಿದೆ.

ಹಲವು ವರ್ಷಗಳಿಂದ ಹಂತ ಹಂತವಾಗಿ ವಿದ್ಯುತ್ ಉತ್ಪಾದನಾ ಮೂಲಸೌಕರ್ಯ-ಗಳು ಹಾಳಾಗುತ್ತಿವೆ. ಈ ಕಾರಣದಿಂದಾಗಿ ಕ್ಯೂಬಾದಲ್ಲಿ ಕಳೆದ ಎರಡು ವರ್ಷದಿಂದ ವಿದ್ಯುತ್ ಕಡಿತದ ಸಮಸ್ಯೆ ತೀವ್ರವಾಗಿದೆ. ಒಂದು ದಿನದಲ್ಲಿ ಸುಮಾರು 12 ತಾಸುಗಳವರೆಗೆ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಯನ್ನು ಸದ್ಯ ಸ್ಥಗಿತಗೊಳಿಸಲಾಗಿದೆ.

ಕಾರಣಗಳೇನು?: ಕಳೆದ ಮೂರು ತಿಂಗಳಿನಿಂದ ದೇಶದಲ್ಲಿ ತೈಲ ಆಮದು ಆಗುತ್ತಿಲ್ಲ. ದೇಶಕ್ಕೆ ಅಗತ್ಯವಿರುವ ಒಟ್ಟು ವಿದ್ಯುತ್ ಪ್ರಮಾಣದಲ್ಲಿ ಶೇ 40ರಷ್ಟನ್ನು ಮಾತ್ರವೇ ಕ್ಯೂಬಾ ಉತ್ಪಾದಿಸುತ್ತಿದೆ.

'ಕ್ಯೂಬಾಗೆ ಯಾವುದೇ ದೇಶ ತೈಲ ರಫ್ತು ಮಾಡಿದರೆ, ಅಂಥ ದೇಶಗಳ ಮೇಲೆ ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಜನವರಿಯಲ್ಲಿ ಬೆದರಿಕೆ ಹಾಕಿದ್ದರು. ಈ ಕಾರಣದಿಂದ ನಮಗೆ ಯಾರೂ ತೈಲ ರಫ್ತು ಮಾಡುತ್ತಿಲ್ಲ. ವಿದ್ಯುತ್ ಕೊರತೆಗೆ ಇದೂ ಕಾರಣ' ಎನ್ನುವುದು ಕ್ಯೂಬಾ ಸರ್ಕಾರದ ವಾದ.

ಯುದ್ಧ: ಮತ್ತಷ್ಟು ಉಲ್ಬಣ ಆತಂಕ

ಒಂದನೇ ಪುಟದಿಂದ...

'48 ಗಂಟೆಗಳ ಒಳಗಾಗಿ ಹೊರ್ಮುಜ್ ಜಲಮಾರ್ಗವನ್ನು ಮುಕ್ತಗೊಳಿಸದಿದ್ದಲ್ಲಿ ಇರಾನ್‌ನ ಅತಿದೊಡ್ಡ ವಿದ್ಯುತ್ ಸ್ಥಾವರದಿಂದ ಆರಂಭಿಸಿ ಎಲ್ಲ ಸ್ಥಾವರಗಳನ್ನು ನಾಶ ಮಾಡಲಾಗುವುದು' ಎಂದು ಫ್ಲಾರಿಡಾದ ತಮ್ಮ ನಿವಾಸದಲ್ಲಿ ವಾಸ್ತವ್ಯ ಹೂಡಿರುವ ಟ್ರಂಪ್, ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

ಟ್ರಂಪ್ ಅವರ ಈ ಬೆದರಿಕೆ ನಡುವೆಯೇ ಅಮೆರಿಕದ ಯುದ್ಧನೌಕೆಗಳು ಹಾಗೂ ಯುದ್ಧ-ವಿಮಾನಗಳು ಕೊಲ್ಲಿಯತ್ತ ಸಾಗುತ್ತಿರುವುದು ಕಂಡುಬಂದಿದೆ.

> ಈ ಯುದ್ಧವನ್ನು ಕೂಡಲೇ ನಿಲ್ಲಿಸಬೇಕು. ಈ ಯುದ್ಧದಿಂದಾಗಿ ಸಂಭವಿಸಿರುವ ಸಾವುಗಳು, ಜನರು ನೋವು ಅನುಭವಿಸುವಂತಾಗಿರುವುದು ಇಡೀ ಮನುಕುಲಕ್ಕೇ ಕಳಂಕವಾಗಿದೆ
> **ಪೋಪ್ ಲಿಯೊ–14**

> ಡೊನಾಲ್ಡ್ ಟ್ರಂಪ್ ವಿಧಿಸಿರುವ '48 ಗಂಟೆಗಳ ಗಡುವು' ಎಂಬ 'ಟೈಮ್ ಬಾಂಬ್'ನಿಂದಾಗಿ ಇಂಧನ ಪೂರೈಕೆಯಲ್ಲಿ ಭಾರಿ ವ್ಯತ್ಯಯ ಕಂಡುಬರುವ ಸಾಧ್ಯತೆ ಇದೆ. ಇದು ಷೇರು ಮಾರುಕಟ್ಟೆ ಮೇಲೆ ಭಾರಿ ಪರಿಣಾಮ ಉಂಟು ಮಾಡಲಿದೆ
> **ಟೋನಿ ಸಿಕಮೋರ್,** ಮಾರುಕಟ್ಟೆ ವಿಶ್ಲೇಷಕ

> ಇರಾನ್‌ನ ಇಂಧನ ಮತ್ತು ವಿದ್ಯುತ್ ಕೇಂದ್ರಗಳನ್ನು ಗುರಿಯಾಗಿಸಿ ಅಮೆರಿಕ ದಾಳಿ ಮಾಡಿದಲ್ಲಿ, ಕೊಲ್ಲಿ ರಾಷ್ಟ್ರಗಳಲ್ಲಿ ಅಮೆರಿಕ ಹೊಂದಿರುವ ಇಂಧನ, ಮಾಹಿತಿ ತಂತ್ರಜ್ಞಾನ ಹಾಗೂ ನಿರ್ಲವಣೀಕರಣ ಘಟಕಗಳ ಮೇಲೆ ದಾಳಿ ನಿಶ್ಚಿತ
> **ಇರಾನ್‌ನ ಖತಮ್ ಅಲ್-ಅನ್‌ಬಿಯಾ ಮಿಲಿಟರಿ ಕಮಾಂಡ್**

ಇಸ್ರೇಲ್ ಮೇಲೆ ದಾಳಿ: ದಕ್ಷಿಣ ಭಾಗದಲ್ಲಿರುವ ದಿಮೋನಾ ಹಾಗೂ ಅರಾದ್ ನಗರಗಳ ಮೇಲೆ ಇರಾನ್ ಉಡಾಯಿಸಿದ್ದ ಕ್ಷಿಪಣಿಗಳನ್ನು ಹೊಡೆದುರುಳಿಸಲು ಸಾಧ್ಯವಾಗಲಿಲ್ಲ ಎಂದು ಇಸ್ರೇಲ್ ಹೇಳಿದೆ.

ಇಸ್ರೇಲ್‌ನ ನೆಗೆವ್ ಮರುಭೂಮಿಯಲ್ಲಿರುವ ಅಣು ಸ್ಥಾವರಕ್ಕೆ ಸನಿಹದಲ್ಲಿ ಈ ನಗರಗಳಿವೆ. ಇದೇ ಮೊದಲ ಬಾರಿಗೆ ಇರಾನ್‌ನ ಕ್ಷಿಪಣಿಗಳು ಇಸ್ರೇಲ್‌ನ ವಾಯುಪ್ರದೇಶವನ್ನು ಭೇದಿಸಿ, ಗುರಿಯತ್ತ ನುಗ್ಗಿವೆ. ಹೀಗಾಗಿ, ಹಲವು ನಗರಗಳಲ್ಲಿ ಸೈರನ್‌ಗಳನ್ನು ಮೊಳಗಿಸಿ, ಸುರಕ್ಷಿತ ಜಾಗಗಳಿಗೆ ತೆರಳುವಂತೆ ಜನರಿಗೆ ಸೂಚನೆ ನೀಡಲಾಗಿತ್ತು.

'ಇರಾನ್ ಕ್ಷಿಪಣಿಗಳ ದಾಳಿಯಿಂದಾಗಿ 10 ಅಪಾರ್ಟ್‌ಮೆಂಟ್‌ಗಳಿಗೆ ಧಕ್ಕೆ ಉಂಟಾಗಿದೆ. ಈ ಪೈಕಿ, ಮೂರು ಕಟ್ಟಡಗಳಿಗೆ ಭಾರಿ ಹಾನಿಯಾಗಿದ್ದು, ಅವುಗಳು ಯಾವುದೇ ಸಮಯದಲ್ಲಿ ಕುಸಿಯಬಹುದು' ಎಂದು ರಕ್ಷಣಾ ಕಾರ್ಯಕ್ಕೆ ನಿಯೋಜಿತ ಸಿಬ್ಬಂದಿ ಹೇಳಿದ್ದಾರೆ.

'ದಕ್ಷಿಣ ಇಸ್ರೇಲ್‌ನ ದಿಮೋನಾ ಹಾಗೂ ಅರಾದ್ ಪಟ್ಟಣಗಳ ಮೇಲೆ ಶನಿವಾರ ಇರಾನ್ ಕ್ಷಿಪಣಿ ದಾಳಿ ನಡೆಸಿದ್ದು, 175 ಮಂದಿ ಗಾಯಗೊಂಡಿದ್ದಾರೆ' ಎಂದು ಇಸ್ರೇಲ್ ಸೇನೆಯ ವಕ್ತಾರ ಲೆಫ್ಟಿನೆಂಟ್ ಕರ್ನಲ್ ನಡಾವ್ ಶೋಶಾನಿ ತಿಳಿಸಿದ್ದಾರೆ.

ಇರಾನ್‌ನ ನಟಾನ್ಜ್ ಅಣು ಸ್ಥಾವರವನ್ನು ಗುರಿಯಾಗಿಸಿ ಶನಿವಾರ ದಾಳಿ ನಡೆದಿತ್ತು. ಇದಕ್ಕೆ ಪ್ರತೀಕಾರವಾಗಿ, ಇಸ್ರೇಲ್‌ನ ಅಣುಸ್ಥಾವರ ಗುರಿಯಾಗಿಸಿ ದಾಳಿ ಮಾಡಿದ್ದಾಗಿ ಇರಾನ್ ಹೇಳಿದೆ. ನಟಾನ್ಜ್ ಅಣು ಘಟಕದ ಮೇಲಿನ ದಾಳಿಗೆ ತಾನು ಹೊಣೆಯಲ್ಲ ಎಂದು ಇಸ್ರೇಲ್ ಹೇಳಿತ್ತು.

'ಭಾರಿ ರಕ್ಷಣೆ ಹೊಂದಿರುವ ಡಿಮೋನಾ ಪ್ರದೇಶದತ್ತ ಹಾರಿಸಿದ್ದ ಕ್ಷಿಪಣಿಗಳನ್ನು ತಡೆಯಲು ಇಸ್ರೇಲ್‌ಗೆ ಸಾಧ್ಯವಾಗಿಲ್ಲ. ನಾವು ಯುದ್ಧದ ಹೊಸ ಹಂತ ಪ್ರವೇಶಿಸಿದ್ದೇವೆ ಎಂಬುದನ್ನು ಇದು ತೋರಿಸುತ್ತದೆ' ಎಂದು ಇರಾನ್ ಸಂಸತ್‌ನ ಸ್ಪೀಕರ್ ಮೊಹಮ್ಮದ್ ಬಘೇರ್ ಗಾಲಿಬಾಫ್ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

'ಪಶ್ಚಿಮ ಏಷ್ಯಾದಲ್ಲಿರುವ ಪ್ರಮುಖ ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗುವುದು. ದುರಸ್ತಿಪಡಿಸಲಾಗದಷ್ಟು ಅವುಗಳನ್ನು ನಾಶ ಮಾಡಲಾಗುವುದು' ಎಂದೂ ಹೇಳಿದ್ದಾರೆ.

'ಶೇ 59ರಷ್ಟು ಅಮೆರಿಕನ್ನರಿಗೆ ಒಪ್ಪಿಗೆ ಇಲ್ಲ'

ಅಮೆರಿಕ ಸೇನಾ ಪಡೆಗಳು ಇರಾನ್ ಮೇಲೆ ನಡೆಸುತ್ತಿರುವ ದಾಳಿಗಳನ್ನು ಶೇ 59ರಷ್ಟು ಅಮೆರಿಕನ್ನರು ಒಪ್ಪುತ್ತಿಲ್ಲ ಎಂದು ರಾಯಿಟರ್ಸ್/ಇಪ್‌ಸೋಸ್ ನಡೆಸಿದ ಸಮೀಕ್ಷೆಯಿಂದ ಗೊತ್ತಾಗಿದೆ.

ಶೇ 37ರಷ್ಟು ಜನರು ಈ ದಾಳಿಗಳನ್ನು ಸಮರ್ಥಿಸಿಕೊಂಡಿದ್ದಾರೆ ಎಂದು ಸಂಸ್ಥೆಗಳು ಕಳೆದ ವಾರ ನಡೆಸಿರುವ ಸಮೀಕ್ಷೆಯಿಂದ ತಿಳಿದುಬಂದಿದೆ.

ನವೆಂಬರ್‌ನಲ್ಲಿ ಅಮೆರಿಕ ಸಂಸತ್‌ಗೆ ಚುನಾವಣೆ ನಡೆಯಲಿದೆ. ಹೀಗಾಗಿ, ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧವು ಹಾಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಾಲಿಗೆ ರಾಜಕೀಯವಾಗಿಯೂ ಮಹತ್ವ ಪಡೆದುಕೊಂಡಿದೆ.

ಇಂಧನ, ರಸಗೊಬ್ಬರ ಲಭ್ಯತೆ: ಮೋದಿ ಸಭೆ

ಒಂದನೇ ಪುಟದಿಂದ...

ಕೃಷಿ, ರಸಗೊಬ್ಬರ, ಆಹಾರ ಭದ್ರತೆ, ಪೆಟ್ರೋಲಿಯಂ, ವಿದ್ಯುತ್, ಎಂಎಸ್‌ಎಂಇ, ರಫ್ತು, ಸಾಗಣೆ, ವ್ಯಾಪಾರ, ಆರ್ಥಿಕ ವ್ಯವಸ್ಥೆ, ಪೂರೈಕೆ ಸರಪಳಿ ಮೇಲೆ ಯುದ್ಧದಿಂದ ಆಗಿರುವ ಪರಿಣಾಮ ಮತ್ತು ಸಮಸ್ಯೆಗಳನ್ನು ಪರಿಹರಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು.

ಭಾರತೀಯ ಸರಕುಗಳನ್ನು ಉತ್ತೇಜಿಸಲು ಮುಂದಿನ ದಿನಗಳಲ್ಲಿ ಹೊಸ ರಫ್ತು ತಾಣಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಪ್ರಕಟಣೆ ಹೇಳಿದೆ.

ಪ್ರಧಾನಿ ಮೋದಿ ನೇತೃತ್ವದ ಸಿಸಿಎಸ್ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್, ಗೃಹ ಸಚಿವ ಅಮಿತ್ ಶಾ, ಹಣಸು ಸಚಿವ ನಿರ್ಮಲಾ ಸೀತಾರಾಮನ್, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ಜೆ.ಪಿ.ನಡ್ಡಾ, ಪೀಯೂಷ್ ಗೋಯಲ್, ಅಶ್ವಿನಿ ವೈಷ್ಣವ್, ಸರ್ವಾನಂದ ಸೋನೊವಾಲ್, ಮನೋಹರ್ ಲಾಲ್ ಖಟ್ಟರ್, ಪ್ರಲ್ಹಾದ ಜೋಶಿ, ಕೆ.ರಾಮಮೋಹನ್ ನಾಯ್ಡು ಭಾಗವಹಿಸಿದ್ದರು.

ಕಾಲ್ಪನಿಕ ಕಥೆಯಲ್ಲಿ ಪ್ರತೀಕಾರದ ಅಧ್ಯಾಯಗಳು

ಧುರಂಧರ್–ದಿ ರಿವೇಂಜ್ (ಹಿಂದಿ)

- ನಿರ್ಮಾಣ: ಆದಿತ್ಯ ಧರ್, ಜ್ಯೋತಿ ದೇಶ್‌ಪಾಂಡೆ, ಲೋಕೇಶ್ ಧರ್
- ನಿರ್ದೇಶನ: ಆದಿತ್ಯ ಧರ್
- ತಾರಾಗಣ: ರಣ್‌ವೀರ್ ಸಿಂಗ್, ಸಂಜಯ್ ದತ್, ಆರ್.ಮಾಧವನ್, ಅರ್ಜುನ್ ರಾಂಪಾಲ್, ಸಾರಾ ಅರ್ಜುನ್, ರಾಕೇಶ್ ಬೇಡಿ ಮತ್ತಿತರರು.

ಕಳೆದ ಡಿಸೆಂಬರ್‌ನಲ್ಲಿ ತೆರೆಕಂಡ ‘ಧುರಂಧರ್’ ಸಿನಿಮಾದ ಮುಂದುವರಿದ ಭಾಗ(ಸೀಕ್ವೆಲ್) ಇದಾಗಿದೆ. ನೈಜ ಘಟನೆಗಳನ್ನು ಸ್ಫೂರ್ತಿ, ಆಧಾರವಾಗಿಟ್ಟುಕೊಂಡು ಅದಕ್ಕೆ ಕಾಲ್ಪನಿಕ ಕಥೆಯ ಸ್ಪರ್ಶ ನೀಡಿ ಭಾವನಾತ್ಮಕವಾಗಿ, ಕುತೂಹಲಕಾರಿಯಾಗಿ ಅದನ್ನು ತೆರೆ ಮೇಲೆ ತರುವುದರಲ್ಲಿ ತಮ್ಮ ನೈಪುಣ್ಯತೆ ಪ್ರದರ್ಶಿಸಿದವರು ನಿರ್ದೇಶಕ ಆದಿತ್ಯ ಧರ್. ‘ಉರಿ’, ‘ಧುರಂಧರ್’ ಬರವಣಿಗೆ ಇದಕ್ಕೆ ಉದಾಹರಣೆ.

‘ಧುರಂಧರ್’ ಮೊದಲ ಭಾಗದಲ್ಲಿ ಕಂದಹಾರ್ ವಿಮಾನ ಹೈಜಾಕ್, 2001ರ ಸಂಸತ್ ಭವನದ ಮೇಲಿನ ಉಗ್ರರ ದಾಳಿಯ ಘಟನೆಗಳನ್ನು ಆಯ್ದುಕೊಂಡಿದ್ದ ನಿರ್ದೇಶಕರು ಸೀಕ್ವೆಲ್‌ನಲ್ಲಿ ಪ್ರಧಾನಿಯಾಗಿ ನರೇಂದ್ರ ಮೋದಿ ಅಧಿಕಾರ ಸ್ವೀಕಾರ, ನೋಟು ಅಮಾನ್ಯೀಕರಣ, 2017ರ ಉತ್ತರ ಪ್ರದೇಶ ಚುನಾವಣೆ ಮುಂತಾದ ಘಟನೆಗಳನ್ನು ಜೋಡಿಸಿ ಕಥೆ ಹೆಣೆದಿದ್ದಾರೆ.

ಆರಂಭದಲ್ಲೇ ಸಿನಿಮಾದ ಕಥೆ ಕಾಲ್ಪನಿಕ ಎಂದು ಸ್ಪಷ್ಟಪಡಿಸುವುದಕ್ಕೇ ಸುಮಾರು ಮೂರ್ನಾಲ್ಕು ನಿಮಿಷಗಳ ಹೇಳಿಕೆ(ಡಿಸ್ಕ್ಲೈಮರ್) ಹಾಕಿ ಕಥೆ ಹೇಳುವುದಕ್ಕೆ ನಿರ್ದೇಶಕರು ಇಳಿಯುತ್ತಾರೆ.

ಮೊದಲ ಭಾಗದಂತೆ ಸೀಕ್ವೆಲ್‌ನಲ್ಲೂ ಸರಣಿಯಾದ ಅಧ್ಯಾಯಗಳು(ಚಾಪ್ಟರ್ಸ್) ಇವೆ. ಒಟ್ಟು 6 ಅಧ್ಯಾಯಗಳಲ್ಲಿ ಪ್ರತೀಕಾರದ ಕಥೆಯನ್ನು ಹೇಳಲಾಗಿದೆ. ಇದರಿಂದಾಗಿಯೇ ಸಿನಿಮಾದ ಅವಧಿ 229 ನಿಮಿಷಗಳಷ್ಟು ವಿಸ್ತಾರಗೊಂಡಿದೆ. ಮೊದಲ ಭಾಗ ‘ಲಿಯಾರಿ’ ಎಂಬ ನಗರದಲ್ಲಿನ ರೌಡಿ ‘ರೆಹಮಾನ್ ಡಕೈತ್’ ನಿಧನದಿಂದ ಅಂತ್ಯಗೊಂಡಿತ್ತು. ಸೀಕ್ವೆಲ್ ‘ಎ ಬರ್ನ್ಟ್ ಮೆಮೊರಿ’ ಎಂಬ ಅಧ್ಯಾಯದಿಂದ ಆರಂಭವಾಗುತ್ತದೆ. ಸೈನಿಕನಾಗಲು ತರಬೇತಿ ಪಡೆಯುತ್ತಿದ್ದ ಪಂಜಾಬ್‌ನ ‘ಜಸ್ಕಿರತ್ ಸಿಂಗ್ ರಂಗಿ’ ಎಂಬ ಯುವಕನ ಕಥೆ ಇದರಲ್ಲಿದೆ. ಈತನಿಗೆ ಗಲ್ಲು ಶಿಕ್ಷೆಯ ಆದೇಶ, ‘ಹಮ್ಜ ಅಲಿ ಮಜಾರಿ’ಯಾಗಿ ಆತನ ಬದಲಾವಣೆ, ಪಾಕಿಸ್ತಾನದ ಪ್ರವೇಶ, ‘ಲಿಯಾರಿ’ಯಲ್ಲಿ ತನ್ನ ಅಧಿಕಾರ ವಿಸ್ತರಣೆ, ಪ್ರತೀಕಾರವೇ ಸೀಕ್ವೆಲ್‌ನ ಮುಂದಿನ ಕಥೆ.

ಶೀರ್ಷಿಕೆಯೇ ಹೇಳುವಂತೆ ಇದೊಂದು ಪ್ರತೀಕಾರದ ಪಯಣ. ಹೀಗಾಗಿ ರಕ್ತದೋಕುಳಿ ನಿರೀಕ್ಷಿತ. ಇದರಲ್ಲಿ ನಾಯಕನ ವೈಯಕ್ತಿಕ ಜೀವನದ ಪ್ರತೀಕಾರದ ಕಥೆಯೂ ಇದೆ. ಈ ಹಿನ್ನೆಲೆಯಲ್ಲಿ ‘ಜಸ್ಕಿರತ್’ ಎಂಬಾತ ‘ಹಮ್ಜ’ ಆದ ಬಗೆ ಹೇಳಲಾಗಿದೆ. ಸಿನಿಮಾ ಒಂದು ದೀರ್ಘವಾದ ಆ್ಯಕ್ಷನ್ ಸೀಕ್ವೆನ್ಸ್ ಮೂಲಕ ತೆರೆದುಕೊಂಡು ಭಾವನಾತ್ಮಕವಾಗಿ ಕೊನೆಗೊಳ್ಳುತ್ತದೆ. ಸುದೀರ್ಘವಾದ ಕಥೆಗೊಂದು ಸೂಕ್ತ ಅಡಿಪಾಯದಂತೆ ಈ ಚಿತ್ರಕಥೆಯನ್ನು ವಿನ್ಯಾಸಗೊಳಿಸಲಾಗಿದೆ. ತೆರೆ ಮೇಲೆ ಸಂಭಾಷಣೆಯ ಪದಗಳನ್ನು, ಪಾತ್ರಗಳ ವಿವರಗಳನ್ನು ಮೂಡಿಸುತ್ತಾ ದೃಶ್ಯವನ್ನು ಆಕರ್ಷಕವಾಗಿಸುವ ಕಲೆ ಇಲ್ಲೂ ಮುಂದುವರಿದಿದೆ.

ಮೊದಲ ಅಧ್ಯಾಯದಲ್ಲೇ ರಣ್‌ವೀರ್ ಸಿಂಗ್ ತಮ್ಮ ನಟನೆಯ ಸಾಮರ್ಥ್ಯವನ್ನು ಮತ್ತೊಮ್ಮೆ ಪ್ರದರ್ಶಿಸಿದ್ದಾರೆ. ಕಣ್ಣುಗಳಲ್ಲೇ ‘ಜಸ್ಕಿರತ್’ ಪಾತ್ರಕ್ಕೆ ಜೀವ ತುಂಬಿದ್ದಾರೆ.


ರಣ್‌ವೀರ್ ಸಿಂಗ್

ಈ ಅಧ್ಯಾಯವೇ ಉಳಿದ ಎಲ್ಲಾ ಅಧ್ಯಾಯಗಳಿಗಿಂತ ಪರಿಣಾಮಕಾರಿಯಾಗಿದೆ. ಸೀಕ್ವೆಲ್ ಕಥೆಯಲ್ಲಿ ಹೆಚ್ಚು ತಿರುವುಗಳಿವೆ. ಮೊದಲ ಭಾಗದಲ್ಲಿ ಅಕ್ಷಯ್ ಖನ್ನಾ ತಮ್ಮ ನಟನೆಯ ಮೂಲಕ ‘ರೆಹಮಾನ್ ಡಕೈತ್’ ಪಾತ್ರಕ್ಕೆ ಗತ್ತು ತಂದಿದ್ದರು. ಈ ಭಾಗದಲ್ಲಿ ಅರ್ಜುನ್ ರಾಂಪಾಲ್ ಅವರ ‘ಮೇಜರ್ ಇಕ್ಬಾಲ್’ ಪಾತ್ರಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ‘ಅಜಯ್ ಸಾನ್ಯಾಲ್’ ಆಗಿ ಮಾಧವನ್ ನಟನೆ ಚೆನ್ನಾಗಿದೆ. ಆದರೆ ‘ಬಡೇ ಸಾಬ್’ ಪಾತ್ರ ಟೊಳ್ಳಾಗಿದೆ. ‘ಜಮೀಲ್’ ಪಾತ್ರದ ಮೂಲಕ ರಾಕೇಶ್ ಬೇಡಿ ನಗಿಸುತ್ತಾರೆ, ಬೆರಗು ಮೂಡಿಸುತ್ತಾರೆ.

‘ಲಿಯಾರಿ’ಯ ಗ್ಯಾಂಗ್‌ವಾರ್ ದೃಶ್ಯಗಳಿಗೆ ಕತ್ತರಿ ಹಾಕಬಹುದಿತ್ತು. ಮಧ್ಯಂತರದ ಬಳಿಕ ವಿಳಂಬ ಗತಿಯಲ್ಲಿ ಸಾಗಿದರೂ, ಕಥೆಯು ಶಿಖರಾಗ್ರ ತಲುಪುತ್ತಾ ಕುತೂಹಲ ಹೆಚ್ಚಿಸುತ್ತದೆ. ಚಿತ್ರಕಥೆಗೆ ಪೂರಕವಾಗಿ ಶಾಶ್ವತ್ ಸಚ್‌ದೇವ್ ಹಿನ್ನೆಲೆ ಸಂಗೀತ, ವಿಕಾಸ್ ನೌಲಖ ಛಾಯಾಚಿತ್ರಗ್ರಹಣವಿದೆ.

ಅಭಿಲಾಷ್ ಪಿ.ಎಸ್.

ನೋಡಬಹುದಾದ ಸಿನಿಮಾ

ನಾವು ನೋಡಿದ ಸಿನಿಮಾ

ತಂದೆ–ಮಗಳ ಭಾವುಕ ಪಯಣ


ಡಾರ್ಲಿಂಗ್ ಕೃಷ್ಣ, ಸಂವೃತಾ

ಚಿತ್ರ: ಲವ್ ಮಾಕ್ಟೇಲ್–3 (ಕನ್ನಡ)

- ನಿರ್ಮಾಣ: ಮಿಲನಾ ನಾಗರಾಜ್
- ನಿರ್ದೇಶನ: ಡಾರ್ಲಿಂಗ್ ಕೃಷ್ಣ
- ಪಾತ್ರವರ್ಗ: ಡಾರ್ಲಿಂಗ್ ಕೃಷ್ಣ, ಸಂವೃತಾ, ಮಿಲನಾ ನಾಗರಾಜ್ ಮತ್ತಿತರರು

ಆದಿ ಮತ್ತು ನಿಧಿಮಾ ಪ್ರೇಮ ಪಯಣದ ಕಥೆ ‘ಲವ್ ಮಾಕ್ಟೇಲ್’ನಲ್ಲಿತ್ತು. ಕಥಾನಾಯಕಿ ನಿಧಿಮಾ ತೀರಿಕೊಂಡ ನಂತರ ಒಂಟಿಯಾಗುವ ಆದಿ, ಅನಾಥಾಶ್ರಮದಿಂದ ರಮ್ಯಾಳನ್ನು ದತ್ತು ಪಡೆಯುವಲ್ಲಿಗೆ ‘ಲವ್ ಮಾಕ್ಟೇಲ್–2’ ಕಥೆ ಅಂತ್ಯಗೊಂಡಿತ್ತು. ಅಲ್ಲಿಂದ ನಂತರದ ರಮ್ಯಾ ಮತ್ತು ಆದಿಯ ಬದುಕೇ ‘ಲವ್ ಮಾಕ್ಟೇಲ್–3’ ಚಿತ್ರದ ಒಟ್ಟಾರೆ ಕಥೆ. ಕಳೆದುಕೊಂಡ ಹೆಂಡತಿಯ ನೆನಪಿನಲ್ಲಿ ಆದಿ ತನ್ನ ಮಗಳ ಹೆಸರನ್ನು ನಿಧಿ ಎಂದು ಬದಲಾಯಿಸಿರುತ್ತಾನೆ. ಆಕೆಗೆ ಏಳು ವರ್ಷವಾದ ನಂತರದ ಕಥೆ ಈ ಚಿತ್ರದಲ್ಲಿದೆ.

ಆದಿಯ ಸ್ನೇಹಿತ ವಿಜಯ್‌ನ ಹೆಂಡತಿ ಸೀಮಂತದ ನೆಪದಲ್ಲಿ ‘ಲವ್ ಮಾಕ್ಟೇಲ್’ ಎರಡು ಭಾಗಗಳ ಪ್ರಮುಖ ಪಾತ್ರಧಾರಿಗಳು ಒಂದೆಡೆ ಸೇರುತ್ತಾರೆ. ಆಗ ವಿಜಯ್ ಆದಿಯ ಪ್ರಸ್ತುತ ಬದುಕಿನ ಕಥೆಯನ್ನು ಹೇಳಲು ಪ್ರಾರಂಭಿಸುತ್ತಾನೆ. ಚಿತ್ರದ ಮೊದಲಾರ್ಧ ಸ್ವಲ್ಪ ತಾಳ್ಮೆ ಪರೀಕ್ಷಿಸುತ್ತದೆ. ಆದಿಯ ಮನೆ, ನಿಧಿಯ ಶಾಲೆಯ ಸುತ್ತಲೇ ಕಥೆ ಸಾಗುತ್ತದೆ. ಇಲ್ಲಿನ ಹಲವು ಸನ್ನಿವೇಶಗಳು ಪುನರಾವರ್ತನೆಗೊಂಡು ಕಥೆ ನಿಂತಲ್ಲಿಯೇ ನಿಂತಿದೆ ಎಂಬ ಭಾವನೆ ಮೂಡುತ್ತದೆ. ಒಂದೆರಡು ಕಡೆ ಆದಿ ಮತ್ತು ನಿಧಿಮಾ ಜತೆಗಿನ ಕೆಲ ಹಳೆಯ ನೆನಪುಗಳು ಮರುಕಳಿಸುತ್ತವೆ. ಇಲ್ಲಿ ಬರುವ ಒಂದೆರಡು ಹಾಡುಗಳು ಸನ್ನಿವೇಶಗಳನ್ನು ಆಪ್ತವಾಗಿಸುತ್ತವೆ.

ಚಿತ್ರದ ದ್ವಿತೀಯಾರ್ಧ ಮಗುವಿನ ದತ್ತು, ಅದರಲ್ಲಿನ ಕಾನೂನು ತೊಡಕುಗಳ ಮೇಲೆ ಕೇಂದ್ರಿಕೃತವಾಗಿದೆ. ಕಾನೂನು ಬಾಹಿರವಾಗಿ ಮಗುವನ್ನು ದತ್ತು ಪಡೆದರೆ ಆಗಬಹುದಾದ ತೊಂದರೆಗಳನ್ನು ನಿರ್ದೇಶಕರು ಇಲ್ಲಿ ಸೊಗಸಾಗಿ ಹೇಳಿದ್ದಾರೆ. ಆದರೆ ಪಾಲಕರಿಲ್ಲದ ಮಕ್ಕಳ ಪಾಲನೆ, ದತ್ತು ಕುರಿತಾದ ಕಾನೂನು ಇವತ್ತು ಬಹಳ ಬಿಗಿಯಾಗಿದೆ. ತಂದೆ, ತಾಯಿ ಇರುವ ಮಗುವನ್ನು ಅನಾಥ ಮಗುವೆಂದು ಸುಳ್ಳು ಹೇಳಿ ಮಕ್ಕಳ ಪಾಲನಾ ಸಂಸ್ಥೆಗೆ ತಂದು ಸೇರಿಸುವುದು, ಅದನ್ನು ಬೇರೆ ಪೋಷಕರಿಗೆ ಕಾನೂನುಬಾಹಿರವಾಗಿ ದತ್ತು ನೀಡುವ ಕಥೆಯ ಮುಖ್ಯ ಎಳೆಯೇ ಇವತ್ತಿನ ಕಾಲಘಟ್ಟಕ್ಕೆ ತೀರ ಕಾಲ್ಪನಿಕ ಎನ್ನಿಸುತ್ತದೆ. ಇದರತ್ತ ಸ್ವಲ್ಪ ಗಮನಹರಿಸಬಹುದಿತ್ತು. ದ್ವಿತೀಯಾರ್ಧದ ಬಹುಭಾಗ ಕಥೆ ನ್ಯಾಯಾಲಯದಲ್ಲೇ ನಡೆದರೂ, ವಿಚಾರಗಳ ಜೊತೆಗೆ ಇಲ್ಲೊಂದಷ್ಟು ಭಾವುಕ ಸನ್ನಿವೇಶಗಳಿವೆ. ಹೀಗಾಗಿ ಈ ಭಾಗ ಮೊದಲನೆಯದಕ್ಕಿಂತ ಉತ್ತಮ ಎನ್ನಿಸುತ್ತದೆ.

ನಿಧಿಯಾಗಿ ನಟಿಸಿರುವ ಬೇಬಿ ಸಂವೃತಾ ತನ್ನ ಮುಗ್ಧ ನಟನೆಯಿಂದ ಗಮನ ಸೆಳೆಯುತ್ತಾಳೆ. ಸಾಕಷ್ಟು ದೃಶ್ಯಗಳು ಆಕೆಯ ನಟನೆಯಿಂದಲೇ ಆಪ್ತವೆನಿಸುತ್ತವೆ. ಜವಾಬ್ದಾರಿಯುತ ತಂದೆಯಾಗಿ ಕೃಷ್ಣ ಇಷ್ಟವಾಗುತ್ತಾರೆ. ವಿಜು ಮಾಮ ಆಗಿ ದಳಪತಿ ಅಭಿಲಾಶ್ ನಟನೆ ಚೆನ್ನಾಗಿದೆ. ಜಗ್ಗ ಮಮ್ಮಿ ಆಗಿ ಜಗದೀಶ್ ನಟನೆ ಗಮನ ಸೆಳೆಯುತ್ತದೆ. ಆದರೆ ವಿಜು ಹಾಗೂ ಜಗ್ಗ ಅವರ ಅನಗತ್ಯ ಹಾಸ್ಯ ಕೆಲ ಕಡೆ ಕಿರಿಕಿರಿ ಮಾಡುತ್ತದೆ. ವಕೀಲರಾಗಿ ದಿಲೀಪ್ ರಾಜ್ ಹಾಗೂ ಶ್ವೇತಾ ಪ್ರಸಾದ್ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ಸಿನಿಮಾದ ಅತಿ ದೊಡ್ಡ ಶಕ್ತಿ ಹಿನ್ನೆಲೆ ಸಂಗೀತ. ಹಾಡುಗಳು ನೆನಪಿನಲ್ಲಿ ಉಳಿಯದಿದ್ದರೂ ಆಯಾ ಸನ್ನಿವೇಶಗಳಿಗೆ ಬಹಳ ಆಪ್ತ ಎನ್ನಿಸುತ್ತವೆ. ಸೀಮಿತ ಸ್ಥಳಗಳು ಹಾಗೂ ಬೆರಳೆಣಿಕೆಯ ನಟವರ್ಗದೊಂದಿಗೆ ಹೆಚ್ಚು ಅದ್ದೂರಿತನವಿಲ್ಲದ ಸಿನಿಮಾವಿದು. ಆದರೆ ಅದು ಎಲ್ಲಿಯೂ ಕೊರತೆ ಎನ್ನಿಸದಂತೆ ಫ್ರೇಮ್‌ಗಳನ್ನು ನಿಭಾಯಿಸಿದ್ದಾರೆ ಛಾಯಾಚಿತ್ರಗ್ರಾಹಕ ಶ್ರೀ ಕ್ರೇಜಿಮೈಂಡ್ಸ್.

ಮೊದಲಾರ್ಧದಲ್ಲಿ ಕೆಲ ಪುನರಾವರ್ತಿತ ದೃಶ್ಯಗಳಿಗೆ ಕತ್ತರಿ ಹಾಕಿ ತಾಯಿಯಿಲ್ಲದ ಮಗುವನ್ನು ತಂದೆಯೊಬ್ಬ ಬೆಳೆಸುವಾಗಿನ ಸವಾಲುಗಳನ್ನು ತೋರಿಸುವ ಅವಕಾಶ ನಿರ್ದೇಶಕರಿಗಿತ್ತು.

ವಿನಾಯಕ ಕೆ.ಎಸ್

ನೋಡಬಹುದಾದ ಸಿನಿಮಾ

ಡಿಜಿಟಲ್ ಗಣತಿ: ದತ್ತಾಂಶ ಸುರಕ್ಷತೆಗೆ ಒತ್ತು

ಸಂಸದೀಯ ಸ್ಥಾಯಿ ಸಮಿತಿಗೆ ಮಾಹಿತಿ ನೀಡಿದ ಗೃಹ ಸಚಿವಾಲಯ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮುಂದಿನ ವರ್ಷ ದೇಶದಲ್ಲಿ ಗಣತಿ ನಡೆಯಲಿದೆ. ಈ ಬಾರಿಯ ಗಣತಿಯನ್ನು ಇದೇ ಮೊದಲ ಬಾರಿಗೆ ಡಿಜಿಟಲ್ ಸ್ವರೂಪದಲ್ಲಿ ನಡೆಸಲಾಗುತ್ತಿದೆ. ಈ ಕಾರಣದಿಂದಾಗಿ ಸೈಬರ್ ದಾಳಿಗಳು ನಡೆಯದಂತೆ ದತ್ತಾಂಶ ಸುರಕ್ಷತೆಗೆ ಒತ್ತು ನೀಡುತ್ತಿದ್ದೇವೆ’ ಎಂದು ಗೃಹ ಸಚಿವಾಲಯವು ಸಂಸದೀಯ ಸ್ಥಾಯಿ ಸಮಿತಿಗೆ ಮಾಹಿತಿ ನೀಡಿದೆ.

‘ಎಂಡ್ ಟು ಎಂಡ್ ಎನ್‌ಕ್ರಿಪ್ಷನ್, ಗಣತಿ ಮಾಡುವವರ ದೃಢೀಕರಣ ಸೇರಿದಂತೆ ದತ್ತಾಂಶ ಭದ್ರತೆಗಾಗಿ ವಿಶೇಷ ಸೈಬರ್ ತಂಡವೊಂದು ಹಲವು ಡಿಜಿಟಲ್ ಟೂಲ್‌ಗಳ ಮೂಲಕ 24 ಗಂಟೆಯು ನಿರಂತರವಾಗಿ ಗಣತಿಯ ದತ್ತಾಂಶಗಳ ಮೇಲೆ ನಿಗಾ ಇರಿಸಲಿದೆ’ ಎಂದು ಸಚಿವಾಲಯ ಮಾಹಿತಿ ನೀಡಿದೆ.

‘ಮೊಬೈಲ್ ಮತ್ತು ಪೋರ್ಟಲ್‌ಗಳ (ಜನರು ಸ್ವಯಂ ಆಗಿಯೂ ಮಾಹಿತಿಗಳನ್ನು ತುಂಬಬಹುದಾಗಿದೆ) ಮೂಲಕ ಸಂಗ್ರಹಿಸಲಾಗುವ ಗಣತಿ ದತ್ತಾಂಶಗಳು ಎಂಡ್ ಟು ಎಂಡ್ ಎನ್‌ಕ್ರಿಪ್ಷನ್ ಸ್ವರೂಪದಲ್ಲಿ ಇರಲಿವೆ. ಗಣತಿ ಮಾಡುವವರಿಗೆ ಪ್ರತ್ಯೇಕ ಐಡಿಗಳನ್ನು ನೀಡಲಾಗುತ್ತದೆ. ಇವರ ಲಾಗ್ ಇನ್‌ಗಾಗಿ ದೃಢೀಕರಣ ವ್ಯವಸ್ಥೆ ಇರಲಿದೆ’ ಎಂದು ಮಾಹಿತಿಯನ್ನು ನೀಡಿದೆ.

ಕೇಂದ್ರ ಸರ್ಕಾರದ ಕ್ರಮಗಳೇನು?



- ಸಂದೇಶ ಅಥವಾ ಇ–ಮೇಲ್‌ಗಳ ಮೂಲಕ ಒಟಿಪಿ ಪಡೆದುಕೊಂಡು ದತ್ತಾಂಶ ಕಳ್ಳತನವನ್ನು ತಡೆಯಲು, ಸಂಗ್ರಹಿಸಲಾದ ದತ್ತಾಂಶಗಳನ್ನು ತಪ್ಪು ಬಳಕೆ ಮಾಡಿಕೊಳ್ಳದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುವುದು
- ಹ್ಯಾಕ್ ಆಗುವುದನ್ನು ತಡೆಯಲು ಸರ್ವರ್‌ಗಳ ಡಿಜಿಟಲ್ ಭದ್ರತೆ ಹೆಚ್ಚಿಸುವುದು
- ಫೈರ್‌ವಾಲ್ಸ್ (ಸಾಫ್ಟ್‌ವೇರ್ ಭದ್ರತಾ ವ್ಯವಸ್ಥೆ) ಭದ್ರತೆ
- ಗಣತಿಯಿಂದ ಪಡೆದುಕೊಳ್ಳಲಾದ ದೊಡ್ಡ ಪ್ರಮಾಣದ ದತ್ತಾಂಶಗಳನ್ನು ಸಂಗ್ರಹಿಸಿಡಲು ದೊಡ್ಡ ಬ್ಯಾಕ್‌ಅಪ್ ವ್ಯವಸ್ಥೆ ರೂಪಿಸಲಾಗುವುದು

ಸ್ಥಾಯಿ ಸಮಿತಿ ಶಿಫಾರಸುಗಳು?

- ಡಿಜಿಟಲ್ ಸ್ವರೂಪದಲ್ಲಿ ಗಣತಿ ನಡೆಯುತ್ತಿರುವುದರಿಂದ ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಇದಕ್ಕಾಗಿ ರೂಪಿಸಲಾದ ಪೋರ್ಟಲ್‌ಗಳನ್ನು ತಪ್ಪು ಬಳಕೆ ಮಾಡಿಕೊಳ್ಳದಂತೆಯೂ ಜಾಗೃತಿ ಮೂಡಿಸಬೇಕು
- ಗಣತಿ ಪ್ರಕ್ರಿಯೆಯು ಸುಗಮವಾಗಿ ಸಾಗಲು ಅತ್ಯುತ್ತಮವಾದ ಡಿಜಿಟಲ್ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳಬೇಕು. ಜೊತೆಗೆ, ಗಣತಿಯ ಮಾಹಿತಿಗಳನ್ನು ಶೀಘ್ರವಾಗಿ ಬಹಿರಂಗ ಮಾಡಬೇಕು
- ಗಣತಿ ಮಾಡುವವರಿಗೆ ತರಬೇತಿ ನೀಡುವುದು, ಡಿಜಿಟಲ್ ಮೂಲಸೌಕರ್ಯಗಳ ಸಿದ್ಧತೆ, ಪ್ರಕ್ರಿಯೆಯಲ್ಲಿ ತೊಡಕಾಗದಂತೆ ರಾಜ್ಯ ಸರ್ಕಾರಗಳೊಂದಿಗೆ ಮಾತುಕತೆ ನಡೆಸಿ, ಪರಸ್ಪರ ಸಹಕಾರದಿಂದ ಇರಬೇಕು
- ಗಣತಿ ಆರಂಭ, ಇದಕ್ಕಾಗಿ ಅನುದಾನ ಬಿಡುಗಡೆಯಿಂದ ಶುರುವಾಗಿ ಗಣತಿ ಮಾಹಿತಿ ಬಹಿರಂಗವಾಗುವ ದಿನಾಂಕಗಳನ್ನು ಒಳಗೊಂಡ ಎಲ್ಲ ಸಿದ್ಧತೆಯ ಮಾಹಿತಿಯನ್ನು ನೀಡಬೇಕು

ವಿಶ್ವ ಒಳಾಂಗಣ ಅಥ್ಲೆಟಿಕ್ಸ್‌ನಲ್ಲಿ ಸತತ ನಾಲ್ಕನೇ ಚಿನ್ನ

ಪೋಲ್‌ವಾಲ್ಟ್: ಡುಪ್ಲಾಂಟಿಸ್ ದಾಖಲೆ

ಟೊರುನ್ (ಪೋಲೆಂಡ್): ಪೋಲ್ ವಾಲ್ಟ್ ತಾರೆ ಅರ್ಮಾಂಡ್ ಡುಪ್ಲಾಂಟಿಸ್ ಅವರು ಇಲ್ಲಿ ನಡೆದ ವಿಶ್ವ ಒಳಾಂಗಣ ಅಥ್ಲೆಟಿಕ್ಸ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದರು.

ಸ್ವೀಡನ್‌ನ ಡುಪ್ಲಾಂಟಿಸ್ 6.25 ಮೀಟರ್ ಎತ್ತರ ಜಿಗಿದರು. ವರ್ಷದ ಹಿಂದೆ ನಾನ್‌ಜಿಂಗ್‌ನಲ್ಲಿ ತೋರಿದ್ದ ಸಾಧನೆಗಿಂತ 10 ಸೆಂಟಿಮೀಟರ್ ಎತ್ತರ ಜಿಗಿದು, ತನ್ನದೇ ದಾಖಲೆಯನ್ನು ಉತ್ತಮ ಪಡಿಸಿಕೊಂಡರು. ಈ ಮೂಲಕ ವಿಶ್ವ ಒಳಾಂಗಣ ಕೂಟದಲ್ಲಿ ಸತತ ನಾಲ್ಕನೇ ಬಾರಿ ಪ್ರಶಸ್ತಿ ಮುಡಿಗೇರಿಸಿಕೊಂಡರು.

26 ವರ್ಷದ ಡುಪ್ಲಾಂಟಿಸ್ ಕ್ರಮವಾಗಿ 6.10, 6.15 ಮತ್ತು 6.25 ಮೀಟರ್ ಎತ್ತರವನ್ನು ಯಶಸ್ವಿಯಾಗಿ ದಾಟಿದರು. ಗ್ರೀಸ್‌ನ ಇಮ್ಯಾನುವಲ್ ಕರಾಲಿಸ್ ಅವರು 6.15 ಮೀಟರ್ ಜಿಗಿದು ಸತತ ಎರಡನೇ ಬಾರಿ ಬೆಳ್ಳಿ ತಮ್ಮದಾಗಿಸಿಕೊಂಡರು.

ಡುಪ್ಲಾಂಟಿಸ್ ಮಾರ್ಚ್ 12ರಂದು ಮೊಂಡೊ ಕ್ಲಾಸಿಕ್ ಕೂಟದಲ್ಲಿ 6.31 ಮೀ. ಸಾಧನೆಯೊಂದಿಗೆ ವಿಶ್ವದಾಖಲೆ ನಿರ್ಮಿಸಿದ್ದರು. ಅದನ್ನು ಮುರಿಯುವ ಪ್ರಯತ್ನ (6.32 ಮೀ.) ಇಲ್ಲಿ ನಡೆಸಿದರು. ಆದರೆ, ಅದು ಸಾಧ್ಯವಾಲಿಲ್ಲ.


ಪೋಲ್‌ವಾಲ್ಟ್ ತಾರೆ ಅರ್ಮಾಂಡ್ ಡುಪ್ಲಾಂಟಿಸ್ ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾದ ಕುರ್ಟಿಸ್ ಮಾರ್ಷಲ್ ವೈಯಕ್ತಿಕ ಅತ್ಯುತ್ತಮ 6 ಮೀಟರ್ ಸಾಧನೆಯೊಂದಿಗೆ ಮೂರನೇ ಸ್ಥಾನ ಪಡೆದರು. ಕೂಟದ ಇತಿಹಾಸದಲ್ಲಿ ಮೊದಲ ಬಾರಿಗೆ ಮೂರು ಸ್ಪರ್ಧಿಗಳು ಆರು ಮೀಟರ್‌ಗಡಿ ದಾಟಿದರು.

ಸ್ವಿಟ್ಜರ್ಲೆಂಡ್‌ನ ಸೈಮನ್ ಹ್ಯಾಮರ್ ವಿಶ್ವದಾಖಲೆಯ ಅಂಕ (6,670) ಗಳಿಸಿ ಹೆಪ್ಟಾಥ್ಲಾನ್ ಪ್ರಶಸ್ತಿ ಗೆದ್ದರು. 2012ರಲ್ಲಿ ಅಮೆರಿಕದ ಆಶ್ಟನ್ ಈಟನ್ (6645) ನಿರ್ಮಿಸಿದ್ದ ದಾಖಲೆಯನ್ನು ಸೈಮನ್ ಮುರಿದರು.

‘ಜೈಲುಗಳಲ್ಲಿ ದಟ್ಟಣೆ: ಮಾಹಿತಿ ಸಲ್ಲಿಸಲು ಸೂಚನೆ

ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ

ನವದೆಹಲಿ (ಪಿಟಿಐ): ಕಾರಾಗೃಹಗಳಲ್ಲಿನ ದಟ್ಟಣೆ ನಿವಾರಣೆಗೆ ತೆಗೆದುಕೊಂಡಿರುವ ಕ್ರಮಗಳು ಹಾಗೂ ಪ್ರತಿಯೊಂದು ಕಾರಾಗೃಹದಲ್ಲಿನ ಅನುಮೋದಿತ ಸಾಮರ್ಥ್ಯಕ್ಕೆ ಸಂಬಂಧಿಸಿದ ಪರಿಷ್ಕೃತ ವಿವರಗಳನ್ನು ಸಲ್ಲಿಸುವಂತೆ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಜತೆಗೆ ವರದಿ ಸಲ್ಲಿಕೆಗೆ ಮೇ18ರ ವರೆಗೆ ಗಡುವು ನೀಡಿದೆ.

ಕಾರಾಗೃಹಗಳಲ್ಲಿನ ಅಮಾನವೀಯ ಸ್ಥಿತಿಗತಿಗೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ಪ್ರಕರಣವನ್ನು ಸುಪ್ರೀಂ ಕೋರ್ಟ್ ದಾಖಲಿಸಿಕೊಂಡಿದ್ದು, ನ್ಯಾಯಮೂರ್ತಿ ವಿಕ್ರಮ್ ನಾಥ್ ಹಾಗೂ ನ್ಯಾಯಮೂರ್ತಿ ಸಂದೀಪ್ ಮೆಹ್ತಾ ಅವರಿದ್ದ ಪೀಠವು ಈ ಪ್ರಕರಣದ ವಿಚಾರಣೆ ನಡೆಸಿದೆ.


ಕಾರಾಗೃಹ ಸ್ಥಿತಿಗತಿ ಕುರಿತು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಸಲ್ಲಿಸಿರುವ ಅಂಕಿ–ಅಂಶದ ವರದಿಗಳು 2023ಕ್ಕೆ ಸಂಬಂಧಿಸಿದ್ದು ಎಂದು ಅಮಿಕಸ್ ಕ್ಯೂರಿ ಆಗಿರುವ ಹಿರಿಯ ವಕೀಲ ಗೌರವ್ ಅಗರ್ವಾಲ್ ಅವರು ನ್ಯಾಯಪೀಠದ ಗಮನಕ್ಕೆ ತಂದಿದ್ದಾರೆ.

ಹೀಗಾಗಿ, 2026ರ ಮಾರ್ಚ್1ರವರೆಗಿನ ದಾಖಲಾತಿಗೆ ಅನುಗುಣವಾಗಿ ವಿವರಗಳನ್ನು ಸಲ್ಲಿಸಲು ನ್ಯಾಯಪೀಠ ನಿರ್ದೇಶಿಸಿದೆ. ಜತೆಗೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಒಟ್ಟು ಮಹಿಳಾ ಕಾರಾಗೃಹಗಳ ಸಂಖ್ಯೆ ಎಷ್ಟು? ಅಲ್ಲಿ ಏನೆಲ್ಲಾ ಸೌಲಭ್ಯಗಳಿದೆ ? ಮಹಿಳಾ ಕೈದಿಗಳ ಜತೆಗಿರುವ ಮಕ್ಕಳ ವಿದ್ಯಾಭ್ಯಾಸ ಹಾಗೂ ಕಲ್ಯಾಣಕ್ಕೆ ಸಂಬಂಧಿಸಿದಂತೆ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬ ವಿವರಗಳನ್ನು ಸಲ್ಲಿಸುವಂತೆಯೂ ಪೀಠ ಸೂಚಿಸಿದೆ.

ಕಾನೂನು ಪ್ರಕ್ರಿಯೆಗೆ ₹683.72 ಕೋಟಿ ಖರ್ಚು

● ಶೆಮಿನ್ ಜಾಯ್

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಕೇಂದ್ರದಲ್ಲಿ 2014ರಲ್ಲಿ ಅಧಿಕಾರ ವಹಿಸಿಕೊಂಡಾಗಿನಿಂದ 2025ರ ಡಿಸೆಂಬರ್‌ವರೆಗೆ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ಸಂಬಂಧ ಒಟ್ಟು ₹683.72 ಕೋಟಿ ಖರ್ಚು ಮಾಡಿದೆ. ಒಟ್ಟು 7.14 ಲಕ್ಷ ಪ್ರಕರಣಗಳನ್ನು ಕೇಂದ್ರ ಸರ್ಕಾರ ನಡೆಸುತ್ತಿದೆ. 2024ರಲ್ಲಿ ಈ ಪ್ರಕರಣಗಳ ಸಂಖ್ಯೆಯು 7.18 ಲಕ್ಷ ಇತ್ತು



ಹಣಕಾಸು ಸಚಿವಾಲಯದ್ದೇ ಹೆಚ್ಚು ಪ್ರಕರಣ

1.94 ಲಕ್ಷ ಹಣಕಾಸು ಸಚಿವಾಲಯದ ಪ್ರಕರಣಗಳ ಸಂಖ್ಯೆ

1.11 ಲಕ್ಷ ರೈಲ್ವೆ ಸಚಿವಾಲಯದ ಪ್ರಕರಣಗಳ ಸಂಖ್ಯೆ

94,104 ರಕ್ಷಣಾ ಸಚಿವಾಲಯದ ಪ್ರಕರಣಗಳ ಸಂಖ್ಯೆ

ಆಧಾರ: ಸಿಬ್ಬಂದಿ, ಸಾರ್ವಜನಿಕರ ಅಹವಾಲು, ಕಾನೂನು ಮತ್ತು ನ್ಯಾಯಾಂಗದ ಮೇಲಿನ ಸಂಸದೀಯ ಸ್ಥಾಯಿ ಸಮಿತಿ ವರದಿ

ಎಲ್ಲವನ್ನೂ ಮರೆತು, ಕ್ಷಮಿಸಿ: ಮಣಿಪುರ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಗುವಾಹಟಿ: ಉತ್ತಮ ಭವಿಷ್ಯಕ್ಕಾಗಿ ಎಲ್ಲವನ್ನೂ ಮರೆತುಬಿಡಿ ಮತ್ತು ಕ್ಷಮಿಸಿ ಎಂದು ಮಣಿಪುರ ಮುಖ್ಯಮಂತ್ರಿ ವೈ. ಖೇಮಚಂದ್ ಸಿಂಗ್ ಹೇಳಿದರು.

ಮೈತೇಯಿ ಮತ್ತು ಕುಕಿ ಸಮುದಾಯದ ನಡುವಣ ಸಂಘರ್ಷಕ್ಕೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಕುಕಿ ಜೋ ಕೌನ್ಸಿಲ್‌ನೊಂದಿಗೆ ಸಭೆ ನಡೆಸಿದ ಬಳಿಕ,ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಶಾಂತಿ ಸ್ಥಾಪಿಸುವ ಉದ್ದೇಶದಿಂದ ಎರಡು ಸಮುದಾಯಗಳ ಮಧ್ಯೆ ಸೇತುವೆಯಾಗಿ ಸರ್ಕಾರ ಕೆಲಸ ಮಾಡುತ್ತಿದೆ‘ ಎಂದರು.

’36 ವಿವಿಧ ಸಮುದಾಯಗಳು ನೆಲಸಿದ್ದರೂ ರಾಜ್ಯವು ಅಖಂಡವಾಗಿದೆ. ಹೀಗಾಗಿ ಭವಿಷ್ಯಕ್ಕಾಗಿ ಈ ಹಿಂದಿನದ್ದನ್ನು ಮರೆತುಬಿಡೋಣ’ ಎಂದು ಹೇಳಿದರು.

ಪ್ರತ್ಯೇಕ ಆಡಳಿತ ಬೇಡಿಕೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ‘ಮಣಿಪುರದ ಪ್ರಾದೇಶಿಕ ಸಮಗ್ರತೆ ವಿಚಾರದಲ್ಲಿ ರಾಜಿ ಪ್ರಶ್ನೆಯೇ ಇಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಈ ಬಗ್ಗೆ ಮತ್ತೆ ಮಾತನಾಡುವ ಅಗತ್ಯವಿಲ್ಲ’ ಎಂದು ಹೇಳಿದರು.

ಗುವಾಹಟಿಯಲ್ಲಿ ಶನಿವಾರ ಸಂಜೆ ಸಭೆಯನ್ನು ಆಯೋಜಿಸಲಾಗಿತ್ತು.

ದಕ್ಷಿಣ ಆಫ್ರಿಕಾಕ್ಕೆ ಮಣಿದ ನ್ಯೂಜಿಲೆಂಡ್

ವೆಲಿಂಗ್ಟನ್ (ಎಎಫ್‌ಪಿ): ದಕ್ಷಿಣ ಆಫ್ರಿಕಾದ ಸ್ಪಿನ್ನರ್‌ಗಳ ದಾಳಿಯ ಮುಂದೆ ಆತಿಥೇಯ ನ್ಯೂಜಿಲೆಂಡ್ ತಂಡವು ಎಡವಿತು. ಅದರ ಫಲವಾಗಿ ಪ್ರವಾಸಿ ಬಳಗವು ಭಾನುವಾರ ಇಲ್ಲಿ ನಡೆದ ನಾಲ್ಕನೇ ಟಿ20 ಪಂದ್ಯದಲ್ಲಿ 19 ರನ್‌ಗಳಿಂದ ಜಯಿಸಿತು. ಸರಣಿಯಲ್ಲಿ 2–2ರಿಂದ ಸಮಬಲ ಸಾಧಿಸಿತು. ಇನ್ನೊಂದು ಪಂದ್ಯ ಬಾಕಿ ಇದೆ.

ಸ್ಕೈ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಕಾನರ್ ಎಸ್ತರ್‌ಹುಯ್ಸೆನ್ (57; 36ಎ, 4X7, 6X3) ಅವರ ಚೊಚ್ಚಲ ಅರ್ಧಶತಕದ ಬಲದಿಂದ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 164 ರನ್ ಗಳಿಸಿತು. ಅದಕ್ಕುತ್ತರವಾಗಿ ಕಿವೀಸ್ ಬಳಗವು 18.5 ಓವರ್‌ಗಳಲ್ಲಿ 145 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ನ್ಯೂಜಿಲೆಂಡ್ ತಂಡವು ಪವರ್‌ಪ್ಲೇ ನಂತರ 63 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತ್ತು. ಟಿಮ್ ರಾಬಿನ್ಸನ್ 22 ಎಸೆತಗಳಲ್ಲಿ 32 ರನ್ ಗಳಿಸಿದ್ದರು.

ಆದರೆ ಇದೇ ಹಂತದಲ್ಲಿ ದಕ್ಷಿಣ ಆಫ್ರಿಕಾದ ಪ್ರೆನೆಲನ್ ಸುಬ್ರಾಯನ್ (13ಕ್ಕೆ2) ಅವರು ತಮ್ಮ ಪದಾರ್ಪಣೆ ಪಂದ್ಯವನ್ನು ಅವಿಸ್ಮರಣೀಯ ಗೊಳಿಸಿಕೊಂಡರು. ಅವರು ಅನುಭವಿ ಕೇಶವ್ ಮಹಾರಾಜ್ (22ಕ್ಕೆ2) ಜೊತೆಗೂಡಿ ಕಿವೀಸ್ ಬ್ಯಾಟಿಂಗ್ ಪಡೆಗೆ ಪೆಟ್ಟುಕೊಟ್ಟರು.


ಕಾನರ್ ಎಸ್ತರ್‌ಹುಯ್ಸೆನ್

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 5ಕ್ಕೆ164 (ಟೋನಿ ಡಿ ಝೋರ್ಜಿ 23, ಕಾನರ್ ಎಸ್ತುರ್ಯೋನ್ 57, ರುಬಿನ್ ಹರ್ಮನ್ ಔಟಾಗದೇ 28, ಡಿಯಾನ್ ಫಾರೆಸ್ಟರ್ 19, ಜೇಸನ್ ಸ್ಮಿತ್ 19, ಜಾರ್ಜ್ ಲಿಂಡೆ ಔಟಾಗದೇ 14, ಕೈಲ್ ಜೆಮಿಸನ್ 29ಕ್ಕೆ2) ನ್ಯೂಜಿಲೆಂಡ್: 18.5 ಓವರ್‌ಗಳಲ್ಲಿ 145 (ಟಿಮ್ ರಾಬಿನ್ಸನ್ 32, ಡೇನ್ ಕ್ಲೀವರ್ 26, ನಿಕ್ ಕೆಲ್ಲಿ 19, ಕೈಲ್ ಜೆಮಿಸನ್ 13, ಗೆರಾಲ್ಡ್ ಕೊಯಿಟ್ಜಿ 31ಕ್ಕೆ3, ಒಟ್ನಿಲ್ ಬಾರ್ತಮನ್ 30ಕ್ಕೆ2, ಪ್ರೆನೆಲನ್ ಸುಬ್ರಾಯನ್ 13ಕ್ಕೆ2, ಕೇಶವ್ ಮಹಾರಾಜ್ 22ಕ್ಕೆ2) ಫಲಿತಾಂಶ:ದಕ್ಷಿಣ ಆಫ್ರಿಕಾ ತಂಡಕ್ಕೆ 19 ರನ್ ಜಯ

ಕ್ಯಾಂಡಿಡೇಟ್ಸ್ ಟೂರ್ನಿಯಿಂದ ಹಿಂದೆ ಸರಿದ ಹಂಪಿ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಸಂಘಟಕರ ಭರವಸೆಯ ಹೊರತಾಗಿಯೂ ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರು ಫಿಡೆ ಮಹಿಳಾ ಕ್ಯಾಂಡಿಡೇಟ್ಸ್ ಟೂರ್ನಿಯಿಂದ ಹಿಂದೆ ಸರಿಯಲು ನಿರ್ಧರಿಸಿದ್ದಾರೆ.



ಸೈಪ್ರಸ್‌ನಲ್ಲಿ ಇದೇ 28ರಿಂದ ಟೂರ್ನಿ ನಡೆಯಲಿದೆ. ಮಹಿಳೆಯರ ವಿಭಾಗದ ವಿಜೇತರು ಈ ವರ್ಷದ ಕೊನೆಯಲ್ಲಿ ವಿಶ್ವ ಮಹಿಳಾ ಚಾಂಪಿಯನ್ ಜು ವೆಂಜುನ್ (ಚೀನಾ) ಅವರಿಗೆ ಚಾಲೆಂಜರ್ ಆಗಲಿದ್ದಾರೆ. ಓಪನ್ ವಿಭಾಗದ ವಿಜೇತರು ವಿಶ್ವ ಚಾಂಪಿಯನ್ ಡಿ. ಗುಕೇಶ್ (ಭಾರತ) ಅವರಿಗೆ ಚಾಲೆಂಜರ್ ಆಗುವರು.

‘ಆಳವಾಗಿ ಆಲೋಚಿಸಿದ ನಂತರ ಟೂರ್ನಿಯಿಂದ ಹಿಂದೆ ಸರಿಯುವ ಕಠಿಣ ನಿರ್ಧಾರ ತೆಗೆದುಕೊಂಡಿದ್ದೇನೆ. ಈ ನಿರ್ಧಾರ ಕಷ್ಟಕರವಾದರೂ, ಪ್ರಸ್ತುತ ಪರಿಸ್ಥಿತಿಯನ್ನು ಗಮನಿಸಿದರೆ ಅನಿವಾರ್ಯವಾಗಿತ್ತು’ ಎಂದು ಹಂಪಿ ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

ದಟ್ಟಾರಣ್ಯಗಳಲ್ಲಿ ಎಸ್‌ಒಜಿ ನಿಯೋಜನೆ

ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದಕರ ನಿಗ್ರಹಕ್ಕೆ ಕ್ರಮ

ಶ್ರೀನಗರ: ಯುದ್ಧ ಪರಿಣತಿ ಪಡೆದ ಪಾಕಿಸ್ತಾನಿ ಭಯೋತ್ಪಾದಕರು ಜಮ್ಮು ಮತ್ತು ಕಾಶ್ಮೀರದ ದಟ್ಟ ಅರಣ್ಯ ಮತ್ತು ಕಡಿದಾದ ಪರ್ವತ ಪ್ರದೇಶಗಳಿಗೆ ಸ್ಥಳಾಂತರವಾಗುತ್ತಿರುವ ಕಾರಣ, ಆಂಧ್ರಪ್ರದೇಶದ ಸೇನಾ ಘಟಕದಲ್ಲಿ ತರಬೇತಿ ಪಡೆದಿರುವ ವಿಶೇಷ ಕಾರ್ಯಾಚರಣೆ ತಂಡದ (ಎಸ್‌ಒಜಿ) 350 ಪೊಲೀಸರನ್ನು ಹಿಮಾಚ್ಛಾದಿತ ಎತ್ತರದ ಪ್ರದೇಶಗಳು ಮತ್ತು ದಟ್ಟ ಅರಣ್ಯಗಳಲ್ಲಿ ನಿಯೋಜಿಸಲಾಗಿದೆ.

ಭಯೋತ್ಪಾದಕರನ್ನು ಪತ್ತೆಹಚ್ಚಲು, ಅವರಿಗೆ ನೆರವು ನೀಡುತ್ತಿರುವ ಜಾಲವನ್ನು ನಾಶಗೊಳಿಸಲು ಹಾಗೂ ಕ್ಲಿಷ್ಟಕರ ಭೂಪ್ರದೇಶಗಳಲ್ಲಿ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಗಳನ್ನು ಬಲಪಡಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

‘ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಇಲಾಖೆಯ ಭಯೋತ್ಪಾದಕ ನಿಗ್ರಹ ದಳದ ಎಸ್‌ಒಜಿ ಸಾಂಪ್ರದಾಯಿಕ ಸೇನೆಗೆ ಸವಾಲಾಗುವಂತಹ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಲು ವಿಶೇಷ ಅರಣ್ಯ, ಪರ್ವತ ಯುದ್ಧದ ತರಬೇತಿ ಪಡೆದಿದೆ’ ಎಂದು ಪೊಲೀಸ್ ಮಹಾನಿರ್ದೇಶಕ ನಳಿನ್ ಪ್ರಭಾತ್ ತಿಳಿಸಿದ್ದಾರೆ..

2025ರ ಏಪ್ರಿಲ್ 22ರಂದು ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ 25 ಪ್ರವಾಸಿಗರು ಮತ್ತು ಸ್ಥಳೀಯ ನಿವಾಸಿ ಸೇರಿದಂತೆ 26 ಮಂದಿ ಮೃತಪಟ್ಟ ನಂತರ, ಮೊದಲ ಬ್ಯಾಚ್ 10 ತಿಂಗಳ ಹಿಂದೆ ತರಬೇತಿಯನ್ನು ಪ್ರಾರಂಭಿಸಿತ್ತು. ಗೃಹ ವ್ಯವಹಾರಗಳ ಸಚಿವಾಲಯ ಅಂತರರಾಷ್ಟ್ರೀಯ ಗಡಿಯುದ್ದಕ್ಕೂ ಗಡಿ ಭದ್ರತಾ ಪಡೆಯ ಹೆಚ್ಚುವರಿ ಬೆಟಾಲಿಯನ್‌ಗಳನ್ನು ನಿಯೋಜಿಸಿದೆ.


ಜಮ್ಮು–ಕಾಶ್ಮೀರದ ಭದೆರವಾಹ್‌ನಲ್ಲಿ ವಿಶೇಷ ಕಾರ್ಯಾಚರಣೆ ತಂಡ ನಿಯೋಜಿಸಲಾಗಿದೆ –ಪಿಟಿಐ ಚಿತ್ರ


‘ಒಳನುಸುಳಲು ಉಗ್ರರ ಯತ್ನ’: ‘ಸಾಂಬಾ, ಕಥುವಾ ಮತ್ತು ಆರ್.ಎಸ್. ಪುರ ಸೆಕ್ಟರ್‌ಗಳಲ್ಲಿ ಗಡಿಯಾಚೆಗಿನ ನುಸುಳುವಿಕೆ ಪ್ರಯತ್ನಗಳು ನಡೆಯುತ್ತಿವೆ’ ಎಂದು ಗುಪ್ತಚರ ಇಲಾಖೆ ಮಾಹಿತಿ ನೀಡಿದೆ. ಪಾಕಿಸ್ತಾನ ಸೇನೆಯಿಂದ ತರಬೇತಿ ಪಡೆದ ಕೆಲವು ಭಯೋತ್ಪಾದಕರು ಗಡಿಯ ಸಮೀಪವಿರುವ ಅಡಗುತಾಣಗಳಲ್ಲಿ ಹೊಂಚು ಹಾಕಿ ಕುಳಿತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿಜಿಡಿ ಯೋಜನೆ: ತ್ವರಿತಕ್ಕೆ ಕೇಂದ್ರ ಸರ್ಕಾರದ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನಗರ ಅನಿಲ ವಿತರಣಾ’ (ಸಿಜಿಡಿ) ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಕೇಂದ್ರ ಸರ್ಕಾರ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸೂಚನೆ ನೀಡಿದೆ.

ಅಲ್ಲದೆ, ಅನಿಲ ವಿತರಣಾ ಜಾಲವನ್ನು ಸುವ್ಯವಸ್ಥಿತಗೊಳಿಸುವಂತೆಯೂ ಸೂಚಿಸಿದೆ.



ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದಾಗಿ ಭೌಗೋಳಿಕ ರಾಜಕೀಯದಲ್ಲಿ ಕಂಡುಬರುತ್ತಿರುವ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ದ್ರವೀಕೃತ ಪೆಟ್ರೋಲಿಯಂ ಅನಿಲ(ಎಲ್‌ಪಿಜಿ) ಪೂರೈಕೆ ಸುಗಮವಾಗುವುದನ್ನು ಖಾತ್ರಿಪಡಿಸುವುದಕ್ಕಾಗಿ ಈ ಕ್ರಮ ಕೈಗೊಂಡಿದೆ.

‘ಸಿಜಿಡಿ ಯೋಜನೆಯಡಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು 10 ದಿನಗಳ ಒಳಗಾಗಿ ವಿಲೇವಾರಿ ಮಾಡಬೇಕು. ಇದರಿಂದ ಪಿಎನ್‌ಜಿ ಪೂರೈಕೆಗೆ ವೇಗ ಸಿಗಲಿದೆ’ ಎಂದು ಪೆಟ್ರೋಲಿಯಂ ಮತ್ತು ಸ್ಫೋಟಕಗಳ ಸುರಕ್ಷತಾ ಸಂಘಟನೆಯು (ಪಿಇಎಸ್‌ಒ) ತನ್ನ ಕಚೇರಿಗಳಿಗೆ ನಿರ್ದೇಶನ ನೀಡಿದೆ.

ಎಲ್‌ಪಿಜಿ ಬದಲು ‘ಕೊಳವೆ ಮೂಲಕ ಅನಿಲ’(ಪಿಎನ್‌ಜಿ) ಬಳಕೆಗೆ ಒತ್ತು ನೀಡುವಂತೆ ಕೇಂದ್ರ ಸರ್ಕಾರ ಗ್ರಾಹಕರನ್ನು ಉತ್ತೇಜಿಸುತ್ತಿದೆ. ಅದರಲ್ಲೂ, ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿನ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬಳಸುವವರು ಪಿಎನ್‌ಜಿ ಬಳಸುವಂತೆ ಪ್ರೋತ್ಸಾಹಿಸುತ್ತಿದೆ.

ಮುಂಬರುವ ದಿನಗಳಲ್ಲಿ ಎಲ್‌ಪಿಜಿ ಮೇಲಿನ ಅವಲಂಬನೆ ತಗ್ಗಿಸುವುದು ಇದರ ಉದ್ದೇಶ ಎಂದು ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಸಚಿವಾಲಯ ಹೇಳಿದೆ.

ಇಂಡಿಯನ್ ಓಪನ್ ಅಥ್ಲೆಟಿಕ್ಸ್: ಪೂವಮ್ಮಗೆ ಕಂಚು

ಮಂಡ್ಯದ ವಿಜಯಕುಮಾರಿಗೆ ಬೆಳ್ಳಿ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದ ಅಥ್ಲೀಟ್ ವಿಜಯಕುಮಾರಿ ಜಿ.ಕೆ. ಅವರು ತಿರುವನಂತಪುರದಲ್ಲಿ ಶನಿವಾರ ನಡೆದ ಏಳನೇ ಇಂಡಿಯನ್ ಓಪನ್ ಕೂಟದ ಮಹಿಳೆಯರ 400 ಮೀಟರ್ ಓಟದಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ.

ಕರ್ನಾಟಕವನ್ನು ಪ್ರತಿನಿಧಿಸಿದ್ದ ವಿಜಯಕುಮಾರಿ 53.55 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ತಮಿಳುನಾಡಿನ ವಿದ್ಯಾ ರಾಮರಾಜ್ (53.31ಸೆ) ಚಿನ್ನದ ಸಾಧನೆ ಮಾಡಿದರು. ಒಎನ್‌ಜಿಸಿ ತಂಡವನ್ನು ಪ್ರತಿನಿಧಿಸಿದ್ದ ಕರ್ನಾಟಕದ ಪೂವಮ್ಮ ರಾಜು (53.61ಸೆ) ಕಂಚಿನ ಪದಕ ತಮ್ಮದಾಗಿಸಿಕೊಂಡರು.

‘ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದಿರುವುದು ಖುಷಿ ತಂದಿದೆ. ನನ್ನ ಸಂಕಷ್ಟದ ಸಮಯದಲ್ಲಿ ಧೈರ್ಯ ತುಂಬಿ ಆರ್ಥಿಕ ಸಹಾಯ ಮಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಚಿರಋಣಿಯಾಗಿ ದ್ದೇನೆ. ಅವರ ಬೆಂಬಲ ವಿಲ್ಲದಿದ್ದರೆ ಈ ಸಾಧನೆ ಸಾಧ್ಯವಾಗುತ್ತಿರಲಿಲ್ಲ’ ಎಂದು ವಿಜಯಕುಮಾರಿ ಪ್ರತಿಕ್ರಿಯಿಸಿದ್ದಾರೆ.


ವಿಜಯಕುಮಾರಿ ಜಿ.ಕೆ.

ಕೆ.ಆರ್. ಪೇಟೆ ತಾಲ್ಲೂಕಿನ ಗೌಡೇನ ಹಳ್ಳಿ ಮೂಲದ ವಿಜಯಕುಮಾರಿ ಅವರು ಆರ್ಥಿಕ ಸಂಕಷ್ಟ ಮತ್ತು ಗಾಯದ ಸಮಸ್ಯೆಯಿಂದ ಕ್ರೀಡೆಯಿಂದ ದೂರ ಸರಿಯುವ ನಿರ್ಧಾರಕ್ಕೆ ಬಂದಿದ್ದರು. ಆಕೆಯ ಕಷ್ಟಕ್ಕೆ ಸ್ಪಂದಿಸಿದ್ದ ಡಿ.ಕೆ. ಶಿವಕುಮಾರ್ ಅವರು ಸರ್ಕಾರದಿಂದ ₹ 10 ಲಕ್ಷ ಪ್ರೋತ್ಸಾಹಧನ ಘೋಷಿಸಿದ್ದರು. ಆ ಪೈಕಿ ಮೊದಲ ಕಂತಿನ ₹ 5 ಲಕ್ಷ ಹಸ್ತಾಂತರಿಸಿದ್ದರು. ಇದು ವಿಜಯಕುಮಾರಿ ಅವರ ತರಬೇತಿ ಮತ್ತು ಚಿಕಿತ್ಸೆಗೆ ನೆರವಾಗಿದೆ.

ಏಕಲವ್ಯ ಮತ್ತು ರಾಜ್ಯೋತ್ಸವ ಪ್ರಶಸ್ತಿಗಳಿಗೆ ಭಾಜನರಾಗಿರುವ ಅವರು, ಮುಂದಿನ ದಿನಗಳಲ್ಲಿ ಕಾಮನ್‌ವೆಲ್ತ್ ಮತ್ತು ಏಷ್ಯನ್ ಗೇಮ್ಸ್‌ಗಳಲ್ಲಿ ದೇಶಕ್ಕೆ ಪದಕ ಗೆಲ್ಲುವ ಗುರಿ ಹೊಂದಿದ್ದಾರೆ.

‘ಕಠಿಣ ಶ್ರಮ, ಛಲದಿಂದ ವಿಜಯ ಕುಮಾರಿ ಮಾಡಿದ ಸಾಧನೆಯು ಇತರ ಕ್ರೀಡಾಪಟುಗಳಿಗೆ ಸ್ಫೂರ್ತಿಯಾಗಿದೆ’ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಹೇಳಿದ್ದಾರೆ.

ಬ್ರಯನ್ ಕಾಲ್ಚಳಕ: ಬಿಎಫ್‌ಸಿ ಜಯ

ಇಂಡಿಯನ್ ಸೂಪರ್ ಲೀಗ್
ಇಂಟರ್ ಕಾಶಿ ತಂಡಕ್ಕೆ ಮತ್ತೊಂದು ಸೋಲು

ಪ್ರಮುಖ ಅಂಶಗಳು
- ತವರಿನಾಚೆ ಎರಡನೇ ಗೆಲುವು ದಾಖಲಿಸಿದ ಚೆಟ್ರಿ ಪಡೆ
- 11 ಅಂಕಗಳೊಂದಿಗೆ ಲೀಗ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೆ ಬಡ್ತಿ ಪಡೆದ ಬೆಂಗಳೂರು ಎಫ್‌ಸಿ ತಂಡ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಬ್ರಯನ್ ಸ್ಯಾಂಚೆಜ್ ಅವರ 'ಗೋಲ್ ಡಬಲ್' ಬಲದಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಇಂಡಿಯನ್ ಸೂಪರ್ ಲೀಗ್ ಪಂದ್ಯದಲ್ಲಿ ಇಂಟರ್ ಕಾಶಿ ವಿರುದ್ಧ ಭರ್ಜರಿ ಜಯ ಸಾಧಿಸಿತು. ಇದರೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿತು.

ಕಿಶೋರ್ ಭಾರತಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ ತಂಡವು 3–1ರಿಂದ ಇಂಟರ್ ಕಾಶಿಯನ್ನು ಪರಾಭವಗೊಳಿಸಿತು.

ಬಿಎಫ್‌ಸಿ ಆಟಗಾರರು ಆರಂಭದಿಂದಲೇ ತಮ್ಮ ಚುರುಕಾದ ಆಟದ ಮೂಲಕ ಮುನ್ನಡೆ ಸಾಧಿಸುವ ಲಕ್ಷಣ ತೋರಿದ್ದರು. ಅದಕ್ಕೆ ತಕ್ಕಂತೆ ಆಶಿಕ್ ಕುರುಣಿಯನ್ 20ನೇ ನಿಮಿಷದಲ್ಲಿ ಗೋಲು ಗಳಿಸಿದರು. ತಂಡಕ್ಕೆ 1–0 ಮುನ್ನಡೆ ನೀಡಿದರು.

ಆದರೆ ಇದಕ್ಕೆ ತಿರುಗೇಟು ನೀಡುವಲ್ಲಿ ಎದುರಾಳಿ ಬಳಗ ಯಶಸ್ವಿಯಾಯಿತು. ಅಲ್ಫ್ರೆಡ್ ಪ್ಲನಾಸ್ (38ನೇ ನಿ) ಅವರು ಗೋಲು ಗಳಿಸಿ ಸಮಬಲ ಸಾಧಿಸಿದರು.

ನಂತರದ ಅರ್ಧ ತಾಸಿನ ಆಟದಲ್ಲಿ ಉಭಯ ತಂಡಗಳ ಆಟಗಾರರು ಜಿದ್ದಾಜಿದ್ದಿ ನಡೆಸಿದರು. ಆದರೆ ಮತ್ತೊಂದು ಗೋಲು ಗಳಿಸಲು ಸಾಧ್ಯವಾಗಲಿಲ್ಲ. ಹೆಚ್ಚಿನ ಅವಧಿಯಲ್ಲಿ ಬಿಎಫ್‌ಸಿ ತಂಡವೇ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿತ್ತು. ಆದರೆ ಇಂಟರ್ ಕಾಶಿಯ ರಕ್ಷಣಾ ಪಡೆಯು ಉತ್ತಮವಾಗಿ ಆಡಿತು.



ಗೋಲು ಹೊಡೆಯುವ ಯತ್ನದಲ್ಲಿ ಬಿಎಫ್‌ಸಿ ತಂಡದ ಬ್ರಯನ್ ಸ್ಯಾಂಚೆಜ್ ಬೆಂಗಳೂರು ಎಫ್‌ಸಿ ಎಕ್ಸ್ ಚಿತ್ರ

ಅರ್ಜೆಂಟೀನಾದ ಮಿಡ್‌ಫೀಲ್ಡರ್ ಬ್ರಯನ್ ಸ್ಯಾಂಚೆಜ್ 69ನೇ ನಿಮಿಷದಲ್ಲಿ ಕಾಶಿಯ ರಕ್ಷಣಾ ಗೋಡೆಯನ್ನು ದಾಟಿ ಗೋಲು ಗಳಿಸುವಲ್ಲಿ ಯಶಸ್ವಿಯಾದರು. ಇದರಿಂದಾಗಿ ಬೆಂಗಳೂರಿಗೆ ಮುನ್ನಡೆ ಲಭಿಸಿತು. ಈ ಹಂತದಲ್ಲಿ ಕಾಶಿ ತಂಡದ ಆಟಗಾರರು ಸಮಬಲ ಸಾಧಿಸಲು ತುರುಸಿನ ಪೈಪೋಟಿ ನೀಡಿದರು. ಆದರೆ ಬಿಎಫ್‌ಸಿ ತಂಡದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರ ದಿಟ್ಟ ಆಟದಿಂದಾಗಿ ಕಾಶಿ ಬಳಗವು ನಿರಾಶೆ ಅನುಭವಿಸಿತು.

ಇಂಜುರಿ ಸಮಯದಲ್ಲಿ ಮತ್ತೆ ತಮ್ಮ ಕಾಲ್ಚಳಕ ತೋರಿದ ಬ್ರಯನ್ (90 + 8ನಿ) ಗೋಲು ಗಳಿಸಿದರು.

ರಾಹುಲ್ ಭೇಕೆ ಬಿಎಫ್‌ಸಿ ಪರ 100ನೇ ಪಂದ್ಯವಾಡುವ ಮೂಲಕ ವೈಯಕ್ತಿಕ ಮೈಲಿಗಲ್ಲು ಸಾಧಿಸಿದರು.

ಬಿಎಫ್‌ಸಿ ತಂಡವು ಇದುವರೆಗೆ ಒಟ್ಟು 6 ಪಂದ್ಯಗಳಲ್ಲಿ ಆಡಿ, 3ರಲ್ಲಿ ಜಯಿಸಿದೆ. ಒಂದರಲ್ಲಿ ಸೋತಿದೆ. ಎರಡರಲ್ಲಿ ಡ್ರಾ ಮಾಡಿಕೊಂಡಿದೆ. ಒಟ್ಟು 11 ಅಂಕಗಳು ತಂಡದ ಖಾತೆಯಲ್ಲಿವೆ.

ಕಾಶಿ ತಂಡವು 6 ಪಂದ್ಯಗಳ ಪೈಕಿ 1 ಮಾತ್ರ ಜಯಿಸಿದೆ. 2 ಡ್ರಾ ಆಗಿವೆ. ಉಳಿದ ಪಂದ್ಯಗಳಲ್ಲಿ ಸೋತಿದೆ. ಒಟ್ಟು 5 ಅಂಕಗಳನ್ನು ಗಳಿಸಿದೆ.

ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಬಲಿಷ್ಠಗೊಳಿಸುವ ಯೋಜನೆ

3ನೇ ಕ್ರಮಾಂಕದಲ್ಲಿ ಪಂತ್ ಬ್ಯಾಟಿಂಗ್

ನವದೆಹಲಿ (ಪಿಟಿಐ): ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಅವರು ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲಿದ್ದಾರೆ.

2025ರ ಮೆಗಾ ಹರಾಜು ಪ್ರಕ್ರಿಯೆಯಲ್ಲಿ ಪಂತ್ ಅವರನ್ನು ಲಖನೌ ಫ್ರ್ಯಾಂಚೈಸಿಯು ₹27 ಕೋಟಿಗೆ ಖರೀದಿಸಿತ್ತು. ಆದರೆ ಹೋದ ಋತುವಿನಲ್ಲಿ ಅವರು ಬ್ಯಾಟಿಂಗ್‌ನಲ್ಲಿ ಬಹಳಷ್ಟು ವೈಫಲ್ಯ ಅನುಭವಿಸಿದ್ದರು. ಪಂತ್ ಅವರು ಭಾರತ ಟೆಸ್ಟ್ ಕ್ರಿಕೆಟ್ ತಂಡದಲ್ಲಿ ವಿಕೆಟ್‌ಕೀಪರ್–ಬ್ಯಾಟರ್ ಆಗಿದ್ದಾರೆ. ಆದರೆ ಏಕದಿನ ಮಾದರಿಯ ತಂಡದಲ್ಲಿ ಎರಡನೇ ವಿಕೆಟ್‌ಕೀಪರ್ ಆಗಿದ್ದಾರೆ. ಕೆ.ಎಲ್. ರಾಹುಲ್ ಮೊದಲ ಆಯ್ಕೆಯಾಗಿದ್ದಾರೆ. ಈಚೆಗೆ ಮುಗಿದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಂತ್ ಅವರಿಗೆ ಆಡುವ ಅವಕಾಶ ದೊರೆತಿರಲಿಲ್ಲ. ಸಂಜು ಸ್ಯಾಮ್ಸನ್ ಮತ್ತು ಇಶಾನ್ ಕಿಶನ್ ಅವರು ಆಡಿದ್ದರು.

ಅದರಿಂದಾಗಿ ಪಂತ್ ಅವರಿಗೆ ಈಗ ತಾವು ಚುಟುಕು ಕ್ರಿಕೆಟ್‌ನಲ್ಲಿ ಆಡಲು ಕೂಡ ಸಮರ್ಥರು ಎಂಬುದನ್ನು ತೋರಿಸುವ ಅಗತ್ಯವಿದೆ. ಅವರು ಹೋದ ಋತುವಿನ ಆರಂಭದಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದರು. ಕೊನೆಯ ಹಂತದಲ್ಲಿ ಮೂರನೇ ಕ್ರಮಾಂಕಕ್ಕೆ ಏರಿದ್ದರು. ಇದೀಗ ಅದೇ ಸ್ಥಾನದಲ್ಲಿ ಮುಂದುವರಿಯಲಿದ್ದಾರೆ.

ಅವರಿಗಾಗಿ ನಿಕೊಲಸ್ ಪೂರನ್ ಅವರು ಸ್ಥಾನ ಬಿಟ್ಟುಕೊಡಬೇಕಾಗಬಹುದು. ಐದು ಅಥವಾ ಆರನೇ ಸ್ಥಾನದಲ್ಲಿ ಅವರು ಆಡಬಹುದು. ಲಖನೌ ತಂಡದ ಪೂರ್ವಾಭ್ಯಾಸ ಶಿಬಿರವು ಚೆನ್ನೈನಲ್ಲಿ ನಡೆಯುತ್ತಿದೆ.



ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಪಿಟಿಐ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್

ಏಪ್ರಿಲ್ 1ರಂದು ಲಖನೌನಲ್ಲಿ ನಡೆಯುವ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಆಡಲಿದೆ.

'ಪಂತ್ ಅವರ ಆಟದ ಶೈಲಿಯು ಮೂರನೇ ಕ್ರಮಾಂಕಕ್ಕೆ ಹೊಂದಾಣಿಕೆಯಾಗುತ್ತದೆ. ಈ ಬಾರಿ ಅಗ್ರಕ್ರಮಾಂಕದಲ್ಲಿ ಏಡನ್ (ಮರ್ಕರಂ), ಮಾರ್ಷ್ (ಮಿಚೆಲ್) ಮತ್ತು ಪಂತ್ (ರಿಷಭ್) ಅವರು ಬ್ಯಾಟಿಂಗ್ ಮಾಡುವುದು ಖಚಿತ' ಎಂದು ಐಪಿಎಲ್ ಮೂಲಗಳು ತಿಳಿಸಿವೆ.

ಹೋದ ವರ್ಷದ ಟೂರ್ನಿಯಲ್ಲಿ ಪಂತ್ ಅವರು 133.17ರ ಸ್ಟ್ರೈಕ್‌ರೇಟ್‌ನಲ್ಲಿ 269 ರನ್ ಸೇರಿಸಿದ್ದರು. ಅಜೇಯ ಶತಕ ಕೂಡ ಅದರಲ್ಲಿತ್ತು. ತಂಡದ ಮಧ್ಯಮ ಕ್ರಮಾಂಕದಲ್ಲಿ ನಿಕೊಲಸ್ ಪೂರನ್, ಆಯುಷ್ ಬಡೋನಿ, ಅಬ್ದುಲ್ ಸಮದ್ ಮತ್ತು ಶಾಬಾಜ್ ಅಹಮದ್ ಅವರು ಇದ್ದಾರೆ.

ಬೌಲಿಂಗ್ ವೇಗಿ ಮಯಂಕ್ ಯಾದವ್ ಮತ್ತು ಮೊಹಸಿನ್ ಖಾನ್ ಅವರು ಗಾಯದಿಂದಾಗಿ ಅಲಭ್ಯರಾಗಿದ್ದಾರೆ. ಆದ್ದರಿಂದ ಆವೇಶ್ ಖಾನ್ ಮತ್ತು ಎನ್ರಿಚ್ ನಾಕಿಯಾ ಅವರನ್ನು ಕಣಕ್ಕಿಳಿಸುವ ಚಿಂತನೆಯಿದೆ. ಆದರೆ ನಾಕಿಯಾ ಕೂಡ ಗಾಯದಿಂದ ಚೇತರಿಸಿಕೊಳ್ಳುತ್ತಿದ್ದು ಪೂರ್ಣ ಫಿಟ್ ಆಗಿಲ್ಲ ಎನ್ನಲಾಗಿದೆ.

'ಬ್ಯಾಟಿಂಗ್ ವಿಭಾಗ ಚೆನ್ನಾಗಿದೆ. ಆದರೆ ನಾಯಕ ರಿಷಭ್ ಸೇರಿದಂತೆ ತಂಡದ ಎಲ್ಲರಿಗೂ ಒತ್ತಡವಿದೆ. ತಮ್ಮ ವೈಯಕ್ತಿಕ ಸಾಮರ್ಥ್ಯವನ್ನು ಸಾಬೀತುಪಡಿಸಿ, ತಂಡವನ್ನೂ ಗೆಲುವಿನತ್ತ ಮುನ್ನಡೆಸುವ ಸವಾಲು ಆಟಗಾರರ ಮುಂದಿದೆ. ಹೋದ ವರ್ಷದ ವೈಫಲ್ಯವನ್ನು ಮರೆಸುವ ಒತ್ತಡ ಇದೆ' ಎಂದು ದಕ್ಷಿಣ ಆಫ್ರಿಕಾ ತಂಡದ ಮಾಜಿ ನಾಯಕ ಫಾಫ್ ಡುಪ್ಲೆಸಿ ಅಭಿಪ್ರಾಯಪಟ್ಟಿದ್ದಾರೆ.

ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿ ಜನವರಿಯಲ್ಲಿ ಆರಂಭ

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾ ಪುರುಷರ ಕ್ರಿಕೆಟ್ ತಂಡದ 2026–27ನೇ ಸಾಲಿನ ವೇಳಾಪಟ್ಟಿಯನ್ನು 'ಕ್ರಿಕೆಟ್ ಆಸ್ಟ್ರೇಲಿಯಾ' ಭಾನುವಾರ ಬಿಡುಗಡೆ ಮಾಡಿದ್ದು, ಅದರಂತೆ ಮುಂದಿನ ಜನವರಿಯಲ್ಲಿ ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿ ಆರಂಭವಾಗಲಿದೆ.

ಆಸ್ಟ್ರೇಲಿಯಾ ತಂಡವು ಭಾರತ ಪ್ರವಾಸದಲ್ಲಿ ಐದು ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಜನವರಿಯಿಂದ ಮಾರ್ಚ್‌ವರೆಗೆ ಈ ಸರಣಿಯ ಆಯೋಜನೆಗೊಳ್ಳಲಿದೆ. ಬಿಡುವಿಲ್ಲದ ವೇಳಾಪಟ್ಟಿಯನ್ನು ಹೊಂದಿರುವ ಪ್ಯಾಟ್ ಕಮಿನ್ಸ್ ಪಡೆಯು 2026ರ ಡಿಸೆಂಬರ್‌ನಿಂದ 2027ರ ಮಾರ್ಚ್‌ವರೆಗೆ 14 ವಾರಗಳಲ್ಲಿ 10 ಟೆಸ್ಟ್ ಪಂದ್ಯಗಳನ್ನು ಆಡಲಿದೆ.

ಪ್ಯಾಟ್ ಕಮಿನ್ಸ್, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಜೋಶ್ ಹೇಜಲ್‌ವುಡ್ ಮತ್ತು ನೇಥನ್ ಲಯನ್ ಮುಂತಾದ ಅನುಭವಿ ಆಟಗಾರರಿಗೆ ಬಾರ್ಡರ್-ಗಾವಸ್ಕರ್ ಟ್ರೋಫಿ ಕೊನೆಯ ಭಾರತ ಪ್ರವಾಸವಾಗುವ ಸಾಧ್ಯತೆಯಿದೆ. ಈ ಆಟಗಾರರಿಗೆ ಭಾರತ ನೆಲದಲ್ಲಿ ಒಮ್ಮೆಯೂ ಸರಣಿ ಗೆಲ್ಲಲು ಸಾಧ್ಯವಾಗಿಲ್ಲ. ಹೀಗಾಗಿ, ಈ ಬಾರಿಯ ಸರಣಿಯು ಮಹತ್ವ ಪಡೆದುಕೊಳ್ಳಲಿದೆ.

ಪಿಎಸ್‌ಎಲ್‌ನಿಂದ ಐಪಿಎಲ್‌ಗೆ ದಸುನ್

ನವದೆಹಲಿ (ಪಿಟಿಐ): ಶ್ರೀಲಂಕಾ ಕ್ರಿಕೆಟ್ ತಂಡದ ನಾಯಕ ದಸುನ್ ಶನಾಕಾ ಅವರು ಪಾಕಿಸ್ತಾನ ಸೂಪರ್ ಲೀಗ್ ತೊರೆದು ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡಲಿದ್ದಾರೆ.



ದಸುನ್ ಶನಾಕಾ

ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಗಾಯಗೊಂಡಿರುವ ಸ್ಯಾಮ್ ಕರನ್ ಅವರ ಅನುಪಸ್ಥಿತಿಯಿಂದ ತೆರವಾಗಿರುವ ಸ್ಥಾನವನ್ನು ಶನಾಕಾ ತುಂಬಲಿದ್ದಾರೆ. ಈಚೆಗೆ ಜಿಂಬಾಬ್ವೆಯ ವೇಗಿ ಬ್ಲೆಸಿಂಗ್ ಮುಝರಬಾನಿ ಅವರು ಕೂಡ ಪಿಎಸ್‌ಎಲ್ ಟೂರ್ನಿಯ ಇಸ್ಲಾಮಾಬಾದ್ ಯುನೈಟೆಡ್ ತಂಡ ತೊರೆದಿದ್ದರು. ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಸೇರ್ಪಡೆಯಾಗಿದ್ದರು. ಬಾಂಗ್ಲಾದ ಮುಸ್ತಫಿಝುರ್ ರೆಹಮಾನ್ ಅವರನ್ನು ತಂಡದಿಂದ ಕೈಬಿಟ್ಟಿದ್ದರಿಂದ ತೆರವಾಗಿದ್ದ ಸ್ಥಾನವನ್ನು ಬ್ಲೆಸಿಂಗ್ ತುಂಬಿದ್ದರು.

'ಪಿಎಸ್‌ಎಲ್‌ನಲ್ಲಿ ಇನ್ನೂ ಒಪ್ಪಂದದ ಕಾಗದ ಪತ್ರಗಳಿಗೆ ದಸುನ್ ಅವರು ಸಹಿ ಹಾಕುವುದು ಬಾಕಿ ಇದೆ. ಅದು ಔಪಚಾರಿಕ ಅಷ್ಟೇ. ದಸುನ್ ಅವರು ಗುವಾಹಟಿಯಲ್ಲಿ ತಂಡವನ್ನು ಸೇರಿಕೊಳ್ಳುವ ನಿರೀಕ್ಷೆ ಇದೆ' ಎಂದು ರಾಯಲ್ಸ್ ಮೂಲಗಳು ತಿಳಿಸಿವೆ.

ಐಪಿಎಲ್ ಟೂರ್ನಿಯ ಮಿನಿ ಹರಾಜು ಪ್ರಕ್ರಿಯೆಯಲ್ಲಿ 34 ವರ್ಷದ ಆಲ್‌ರೌಂಡರ್ ದಸುನ್ ಅವರನ್ನು ಯಾವ ತಂಡವೂ ಖರೀದಿ ಮಾಡಿರಲಿಲ್ಲ. ಪಿಎಸ್‌ಎಲ್ ಫ್ರ್ಯಾಂಚೈಸ್ ಲಾಹೋರ್ ಕಲಂದರ್ಸ್ ತಂಡವು ಅವರನ್ನು ಖರೀದಿಸಿತ್ತು.

ರಾಜಸ್ಥಾನ ರಾಯಲ್ಸ್ ತಂಡಕ್ಕೆ ಶ್ರೀಲಂಕಾದ ದಿಗ್ಗಜ ಕುಮಾರ ಸಂಗಕ್ಕಾರ ಮುಖ್ಯ ಕೋಚ್ ಹಾಗೂ ಭಾರತದ ವಿಕ್ರಂ ರಾಥೋಡ್ ಅವರು ಬ್ಯಾಟಿಂಗ್ ಕೋಚ್ ಆಗಿದ್ದಾರೆ.

ಪ್ರೇಕ್ಷಕರಿಗೆ ನಿರ್ಬಂಧ: ಪಿಸಿಬಿ

ಲಾಹೋರ್: ಪಶ್ಚಿಮ ಏಷ್ಯಾದಲ್ಲಿ ಸಂಘರ್ಷದ ವಾತಾವರಣ ಇರುವುದರಿಂದ ಪಾಕಿಸ್ತಾನ ಸೂಪರ್ ಲೀಗ್ (ಪಿಎಸ್‌ಎಲ್) ಟೂರ್ನಿಯ ಆರಂಭಿಕ ಪಂದ್ಯಗಳು ಪ್ರೇಕ್ಷಕರಿಲ್ಲದೆ ನಡೆಯಲಿವೆ ಎಂದು ಪಾಕಿಸ್ತಾನ ಕ್ರಿಕೆಟ್ ಬೋರ್ಡ್ (ಪಿಸಿಬಿ) ತಿಳಿಸಿದೆ.

'ಪಿಎಸ್‌ಎಲ್‌ನ 11ನೇ ಆವೃತ್ತಿಯನ್ನು ಎರಡು ತಾಣಗಳಿಗಷ್ಟೇ ಸೀಮಿತಗೊಳಿಸಲಾಗಿದೆ. ಲಾಹೋರ್ ಮತ್ತು ಕರಾಚಿಯಲ್ಲಿ ಪಂದ್ಯಗಳು ನಡೆಯಲಿವೆ. ಟೂರ್ನಿಯು ಇದೇ 26ರಂದು ಆರಂಭವಾಗಲಿದೆ. ಯುದ್ಧದ ಕಾರಣದಿಂದ ಮೈದಾನಕ್ಕೆ ಪ್ರೇಕ್ಷಕರಿಗೆ ನಿರ್ಬಂಧ ಹೇರಲಾಗಿದೆ' ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಕ್ವಿ ಹೇಳಿದ್ದಾರೆ.

'ಐಪಿಎಲ್‌ನಲ್ಲಿ ಭಾಗವಹಿಸುವುದಕ್ಕಾಗಿ ಪಿಎಸ್‌ಎಲ್ ಒಪ್ಪಂದವನ್ನು ಉಲ್ಲಂಘನೆ ಮಾಡಿರುವ ಆಟಗಾರರ ವಿರುದ್ಧ ಪಿಸಿಬಿಯ ಕಾನೂನು ವಿಭಾಗವು ಪ್ರಕರಣವನ್ನು ದಾಖಲಿಸುತ್ತದೆ' ಎಂದು ಅವರು ಹೇಳಿದ್ದಾರೆ.

ಕೆಕೆಆರ್ ತಂಡಕ್ಕೆ ಸೌರಭ್ ದುಬೆ?

ಕೋಲ್ಕತ್ತ (ಪಿಟಿಐ): ಗಾಯಗೊಂಡಿರುವ ಭಾರತದ ವೇಗಿ ಆಕಾಶ್ ದೀಪ್ ಬದಲಿಗೆ ಎಡಗೈ ವೇಗಿ ಸೌರಭ್ ದುಬೆ ಅವರನ್ನು ಕೋಲ್ಕತ್ತ ನೈಟ್ ರೈಡರ್ಸ್ ಫ್ರ್ಯಾಂಚೈಸಿಯು ತನ್ನ ತಂಡಕ್ಕೆ ಸೇರಿಸಿಕೊಳ್ಳಲು ಸಿದ್ಧತೆ ನಡೆಸಿದೆ.

ವಿದರ್ಭ ಬೌಲರ್ ಸೌರಭ್ ಅವರು ಐಪಿಎಲ್‌ಗೆ ಇನ್ನೂ ಪದಾರ್ಪಣೆ ಮಾಡಿಲ್ಲ. ಆದರೆ, ಈ ಹಿಂದೆ ಸನ್‌ರೈಸರ್ಸ್ ಹೈದರಾಬಾದ್ ತಂಡದ ಭಾಗವಾಗಿದ್ದರು. ಅವರ ಸೇರ್ಪಡೆ ಬಗ್ಗೆ ಕೆಕೆಆರ್ ತಂಡವು ಇನ್ನೂ ಅಧಿಕೃತ ಘೋಷಣೆ ಮಾಡಿಲ್ಲ.

28 ವರ್ಷದ ಸೌರಭ್ ಅವರು ಎಂಟು ಲಿಸ್ಟ್ ಎ ಪಂದ್ಯಗಳಲ್ಲಿ 16 ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ಸ್ಕ್ವಾಷ್: ಅಭಯ್, ಅನಾಹತ್‌ಗೆ ಪ್ರಶಸ್ತಿ

ಮುಂಬೈ (ಪಿಟಿಐ): ಸ್ಥಳೀಯ ನೆಚ್ಚಿನ ತಾರೆಗಳಾದ ಅಭಯ್ ಸಿಂಗ್ ಮತ್ತು ಅನಾಹತ್ ಸಿಂಗ್ ಅವರು ಭಾನುವಾರ ಮುಕ್ತಾಯಗೊಂಡ ಜೆಎಸ್‌ಡಬ್ಲ್ಯು ಇಂಡಿಯನ್ ಓಪನ್ ಸ್ಕ್ವಾಷ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಅಭಯ್ 3-0 (11-9, 11-8, 11-4) ರಿಂದ ನಾಲ್ಕನೇ ಶ್ರೇಯಾಂಕದ ಸ್ವದೇಶದ ವೀರ್ ಚೋತ್ರಾನಿ ಅವರನ್ನು ಸೋಲಿಸಿದರು. ಅತ್ಯುತ್ತಮ ಲಯದಲ್ಲಿದ್ದ ಅಭಯ್ ಒಂದೂ ಗೇಮ್ ಬಿಟ್ಟುಕೊಡದೆ ಪಾರಮ್ಯ ಮೆರೆದರು.

ಮಹಿಳೆಯರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅಗ್ರ ಶ್ರೇಯಾಂಕದ ಅನಾಹತ್ 3-1 (11-5, 11-6, 9-11, 11-6) ಅಂತರದಿಂದ ಎರಡನೇ ಶ್ರೇಯಾಂಕದ ಹನಾ ಮೊವಾಟಾಜ್ (ಈಜಿಪ್ಟ್) ಅವರನ್ನು ಸೋಲಿಸಿದರು.

ಸಿಎಸ್‌ಕೆ 'ಹಾಲ್ ಆಫ್ ಫೇಮ್'ಗೆ ರೈನಾ, ಹೇಡನ್

ಚೆನ್ನೈ (ಪಿಟಿಐ): ಭಾರತದ ಮಾಜಿ ಆಲ್‌ರೌಂಡರ್ ಸುರೇಶ್ ರೈನಾ ಮತ್ತು ಆಸ್ಟ್ರೇಲಿಯಾದ ಮಾಜಿ ಬ್ಯಾಟರ್ ಮ್ಯಾಥ್ಯೂ ಹೇಡನ್ ಅವರಿಗೆ ಚೆನ್ನೈ ಸೂಪರ್ ಕಿಂಗ್ಸ್ 'ಹಾಲ್ ಆಫ್ ಫೇಮ್' ಗೌರವ ಪ್ರದಾನ ಮಾಡಿದೆ.

ಇದೇ ಮೊದಲ ಬಾರಿಗೆ ಹಾಲ್ ಆಫ್ ಫೇಮ್ ಆರಂಭಿಸಲಾಗಿದೆ.

ಭಾನುವಾರ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ 'ರೋರ್ 26' ಕಾರ್ಯಕ್ರಮದಲ್ಲಿ ರೈನಾ ಮತ್ತು ಹೇಡನ್ ಅವರಿಗೆ ಈ ಗೌರವ ಘೋಷಿಸಲಾಯಿತು.

ರೈನಾ ಅವರು ಚೆನ್ನೈ ತಂಡದಲ್ಲಿ 2008 ರಿಂದ 2021ರವರೆಗೆ ಆಡಿದ್ದರು. ಆ ಅವಧಿಯಲ್ಲಿ ತಂಡವು ನಾಲ್ಕು (2010, 2011, 2018 ಮತ್ತು 2021) ಸಲ ಪ್ರಶಸ್ತಿ ಜಯಿಸಿತ್ತು. 2010 ಮತ್ತು 2014ರಲ್ಲಿ ತಂಡವು ಚಾಂಪಿಯನ್ಸ್ ಲೀಗ್ ಟಿ20 ಪ್ರಶಸ್ತಿ ಗೆದ್ದ ತಂಡದಲ್ಲಿಯೂ ಇದ್ದರು. ಅವರು ತಂಡದ ಅತಿ ಹೆಚ್ಚು ರನ್ (5,529) ಗಳಿಸಿರುವ ಆಟಗಾರ. ಅದರಲ್ಲಿ ಎರಡು ಶತಕ ಮತ್ತು 38 ಅರ್ಧಶತಕಗಳು ಇವೆ.



ಭಾರತದ ಸುರೇಶ್ ರೈನಾ



ಆಸ್ಟ್ರೇಲಿಯಾದ ಮ್ಯಾಥ್ಯೂ ಹೇಡನ್

ಹೇಡನ್ ಅವರು 2008 ರಿಂದ 2010ರವರೆಗೆ ತಂಡದಲ್ಲಿದ್ದರು. 2009ರಲ್ಲಿ ಅವರು 572 ರನ್ ಪೇರಿಸಿ ಆರೆಂಜ್ ಕ್ಯಾಪ್ ಪಡೆದಿದ್ದರು. ಚೆನ್ನೈ ತಂಡದಲ್ಲಿದ್ದಾಗ ಅವರು ಒಟ್ಟು 1117 ರನ್ ಸೇರಿಸಿದ್ದರು. ಅದರಲ್ಲಿ ಎಂಟು ಅರ್ಧಶತಕಗಳು ಇವೆ.

ಕಾರ್ಯಕ್ರಮದಲ್ಲಿ ತಂಡದ ಮಾಜಿ ಆಟಗಾರರಾದ ಮುತ್ತಯ್ಯ ಮುರಳೀಧರನ್, ಅಂಬಟಿ ರಾಯುಡು, ಲಕ್ಷ್ಮೀಪತಿ ಬಾಲಾಜಿ, ಎಸ್. ಬದರಿನಾಥ್ ಹಾಗೂ ಮೈಕೆಲ್ ಹಸ್ಸಿ ಇದ್ದರು.